ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಮೇ 8 ಬುಧವಾರ 2024

ಸಂಪುಟ: 45 | ಸಂಚಿಕೆ: 22 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಹಾಸನ ಸಂಸದ ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಪ್ರಕರಣ; ಡಿಸಿಎಂ ಡಿ.ಕೆ.ಶಿವಕುಮಾರ್ ಪಿತೂರಿ ಆರೋಪ

ಸಿಬಿಐ ಇಲ್ಲವೇ ಹೈಕೋರ್ಟ್ ಹಾಲಿ ನ್ಯಾಯಮೂರ್ತಿಯಿಂದ

ತನಿಖೆಗೆ ಹೆಚ್‌ಡಿಕೆ ಆಗ್ರಹ

● ತನಿಖೆ ಪೂರ್ಣಗೊಳ್ಳುವವರೆಗೆ ಡಿಕೆಶಿ ಸಂಪುಟದಿಂದ ಕೈಬಿಡಲು ಒತ್ತಾಯ ● ಪ್ರಕರಣದಲ್ಲಿ ಪೆನ್‌ಡ್ರೈವ್, ವೀಡಿಯೊ ಆಧುನಿಕ ತಂತ್ರಜ್ಞಾನ ಬಳಸಿ, ತಿರುಚಿ ಹೆಣ್ಣು ಮಕ್ಕಳ ಮಾನ ಹರಾಜು ಆರೋಪ

ಬೆಂಗಳೂರು, ಮೇ 7(ಕೆಎಂಶಿ)–ಹಾಸನ ಸಂಸದ ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಪ್ರಕರಣದಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪಿತೂರಿ ನಡೆಸಿರುವುದು ಸ್ಪಷ್ಟವಾಗಿದ್ದು, ಪ್ರಕರಣವನ್ನು ಸಿಬಿಐಗೆ ಇಲ್ಲವೇ ಹೈಕೋರ್ಟ್‌ನ ಹಾಲಿ ನ್ಯಾಯಮೂರ್ತಿಯಿಂದ ತನಿಖೆ ನಡೆಸಿ ಎಂದು ಆಗ್ರಹಿಸಿರುವ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ತನಿಖೆ ಪೂರ್ಣಗೊಳ್ಳುವವರೆಗೂ ಅವರನ್ನು ಸಂಪುಟದಿಂದ ವಜಾ ಮಾಡಿ ಎಂದು ಒತ್ತಾಯಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವೀಡಿಯೊ ಮತ್ತು ಪೆನ್‌ಡ್ರೈವ್ ಅನ್ನು ಆಧುನಿಕ ತಂತ್ರಜ್ಞಾನ ಬಳಸಿ ತಿರುಚಿ, ಸೃಷ್ಟಿ ಮಾಡಿ, ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟು ಹೆಣ್ಣು ಮಕ್ಕಳ ಮಾನ ತೆಗೆದಿರುವ ಈ ಮನುಷ್ಯನನ್ನು ಸಂಪುಟದಲ್ಲಿ ಇಟ್ಟುಕೊಳ್ಳಬೇಡಿ ಎಂದು ಆಗ್ರಹಿಸಿದರು.

ಎಸ್‌ಐಟಿ ಪ್ರಕರಣದ ತನಿಖೆಯನ್ನು ನಿಷ್ಪಕ್ಷಪಾತ ಮತ್ತು ಪಾರದರ್ಶಕವಾಗಿ ಮಾಡುತ್ತಿಲ್ಲ, ಅಧಿಕಾರಿಗಳು ಸರ್ಕಾರದ ಕೈಗೊಂಬೆಯಾಗಿ ಕೆಲಸ ಮಾಡುತ್ತಿದ್ದಾರೆ. ಇಂತಹವರಿಂದ ನ್ಯಾಯ ದೊರೆಯುವುದಿಲ್ಲ. ಸಿಡಿ ಪ್ರಕರಣವನ್ನು ನಿಷ್ಪಕ್ಷಪಾತವಾಗಿ ತನಿಖೆ ನಡೆಸಿ, ಅಪರಾಧಿಗಳಿಗೆ ಶಿಕ್ಷೆ ಕೊಡಿಸಲು ಹಗರಣವನ್ನು ಸಿಬಿಐ ಇಲ್ಲವೇ ಹೈಕೋರ್ಟ್ ಹಾಲಿ ನ್ಯಾಯಮೂರ್ತಿಯಿಂದ ತನಿಖೆ ನಡೆಸಿ ಎಂದು ಆಗ್ರಹಿಸಿದರು. ಅನ್ಯಾಯಕ್ಕೆ ಒಳಗಾಗಿರುವ ಹೆಣ್ಣು ಮಕ್ಕಳಿಗೆ ನ್ಯಾಯ ದೊರಕಬೇಕಾದರೆ ಸಿಬಿಐ ತನಿಖೆಗೆ ವಹಿಸಬೇಕು, ಈ ಪ್ರಕರಣವನ್ನು ಕಾಂಗ್ರೆಸ್ ಲೋಕಸಭಾ ಚುನಾವಣೆಯಲ್ಲಿ, ತನ್ನ ರಾಜಕೀಯ ಲಾಭಕ್ಕೆ ಬಳಸಿಕೊಳ್ಳಲು ತಮಗೆ ಬೇಕಾದಂತೆ ತಿರುಚಲಾಗುತ್ತಿದೆ. ಇವರಿಗೆ ಬೇಕಾಗಿರುವುದು ಪ್ರಚಾರವೇ ಹೊರತು ಪಾರದರ್ಶಕ ತನಿಖೆ ಅಲ್ಲ, ಇದೇ ಉದ್ದೇಶದಿಂದ ಮೊದಲನೇ ಹಂತದ ಮತದಾನದಿಂದ ಹಿಡಿದು ಇಲ್ಲಿಯವರೆಗೂ ಸಿಡಿಯನ್ನು ಪ್ರಚಾರಕ್ಕೆ ಬಳಸಿಕೊಂಡಿದ್ದಾರಷ್ಟೆ.

ಸಂತ್ರಸ್ತೆಯರಿಗೆ ನ್ಯಾಯ ಕೊಡಿಸಬೇಕು ಎನ್ನುವುದಿದ್ದರೆ ಸಿಡಿಯಲ್ಲಿನ ಚಿತ್ರಗಳನ್ನು ಪೆನ್‌ಡ್ರೈವ್ ಮೂಲಕ ಹಂಚುವ ಕೆಲಸ ಮಾಡಿ ಹೆಣ್ಣುಮಕ್ಕಳ ಮಾನ ತೆಗೆಯುತ್ತಿರಲಿಲ್ಲ ಎಂದರು. ಹಾಸನದ ಜೆಡಿಎಸ್ ಅಭ್ಯರ್ಥಿ ಪ್ರಜ್ವಲ್ ರೇವಣ್ಣ ಅವರ ಚುನಾವಣಾ ಏಜೆಂಟ್ ಪೂರ್ಣಚಂದ್ರ ತೇಜಸ್ವಿ ಅವರು ನೀಡಿದ ದೂರಿನ ಮೇಲೆ ಯಾವುದೇ ಕ್ರಮ ಕೈಗೊಂಡಿಲ್ಲ. ಏಪ್ರಿಲ್ 21ರ ರಾತ್ರಿ 'ಅಶ್ಲೀಲ ವೀಡಿಯೊ ಬಿಡುಗಡೆಗೆ ಕ್ಷಣಗಣನೆ' ಎಂದು ಪೋಸ್ಟರ್ ಹಾಕಿದ್ದ ವ್ಯಕ್ತಿಯ ಮೇಲೂ ಯಾವುದೇ ಕಾನೂನು ಕ್ರಮ ಜರುಗಿಸಿಲ್ಲ.

ಪೆನ್‌ಡ್ರೈವ್ ಹಂಚಿಕೆ ಮಾಡಿರುವವರು ಯಾರು ಎಂದು ಇದುವರೆಗೂ ಪತ್ತೆ ಹಚ್ಚಿಲ್ಲ. ಕೇವಲ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಮತ್ತು ಪ್ರಜ್ವಲ್ ರೇವಣ್ಣ ವಿರುದ್ಧ ಮಾತ್ರ ಎಸ್‌ಐಟಿ ತನಿಖೆ ● 9ನೇ ಪುಟಕ್ಕೆ



ಪತ್ರಿಕಾಗೋಷ್ಠಿಯಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ

ಎಸ್‌ಐಟಿ ಎಂದರೆ ಸಿದ್ದರಾಮಯ್ಯ, ಶಿವಕುಮಾರ್ ಇನ್ವೆಸ್ಟಿಗೇಷನ್ ಟೀಂ!!

ಬೆಂಗಳೂರು: ಎಸ್‌ಐಟಿ ಎಂದರೆ ಶಿವಕುಮಾರ್/ಸಿದ್ದರಾಮಯ್ಯ ಇನ್ವೆಸ್ಟಿಗೇಷನ್ ಟೀಂ ಎಂದು ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ವ್ಯಂಗ್ಯವಾಡಿದ್ದಾರೆ. ಸಂಸದ ಪ್ರಜ್ವಲ್ ರೇವಣ್ಣ ಅವರ ಪೆನ್‌ಡ್ರೈವ್ ಪ್ರಕರಣವನ್ನು ಈ ಉಭಯ ನಾಯಕರು ನೀಡುವ ಸಲಹೆ, ಸೂಚನೆಗಳಂತೆ ತನಿಖೆ ನಡೆಸಲಾಗುತ್ತಿದೆಯೇ ಹೊರತು, ಸಂತ್ರಸ್ತೆಯರ ಹಿತ ಕಾಪಾಡುವ ಕೆಲಸ ಮಾಡುತ್ತಿಲ್ಲ. ಪೆನ್‌ಡ್ರೈವ್ ಹಗರಣವನ್ನು ಚುನಾವಣಾ ಅಸ್ತ್ರವನ್ನಾಗಿ ಇಲ್ಲಿನ ಕಾಂಗ್ರೆಸ್ ಸರ್ಕಾರ ಬಳಕೆ ಮಾಡಿಕೊಳ್ಳಲು ಹಲವು ಹೆಣ್ಣುಮಕ್ಕಳ ಮಾನವನ್ನು ● 9ನೇ ಪುಟಕ್ಕೆ



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಮಂಗಳವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಶಾಸಕ ಜಿ.ಟಿ.ದೇವೇಗೌಡರು ಮಾತನಾಡಿದರು.

ಜೆಡಿಎಸ್ ಮುಗಿಸಲು ಡಿಕೆಶಿ ಷಡ್ಯಂತರ

ಶಾಸಕ ಜಿ.ಟಿ.ದೇವೇಗೌಡರ ಆರೋಪ

● ಡಿಕೆಶಿ ಆದೇಶದಂತೆ ಎಸ್‌ಐಟಿ ಕಾರ್ಯಪಾಲನೆ
● ನ್ಯಾಯಾಂಗ ತನಿಖೆ ನಡೆಸಿದರೆ ಸತ್ಯಾಂಶ ಬೆಳಕಿಗೆ

ಮೈಸೂರು, ಮೇ 7(ಬಿಎಲ್‌ಯು)–ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣದ ಪೆನ್‌ಡ್ರೈವ್ ಹಿಂದೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರಮುಖ ಪಾತ್ರವಿದೆ ಎಂದು ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಆರೋಪಿಸಿದರು.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜೆಡಿಎಸ್ ಪಕ್ಷವನ್ನು ಮುಗಿಸಲು ಇಂತಹ ಹುನ್ನಾರ ನಡೆಸಿದ್ದಾರೆ ಎಂದು ಆಪಾದಿಸಿದರು.

ಸರ್ಕಾರ ಎಸ್‌ಐಟಿ ದುರುಪಯೋಗ ಮಾಡಿಕೊಳ್ಳುತ್ತಿದೆ. ಇದರ ಸಂಪೂರ್ಣ ನೇತೃತ್ವವನ್ನು ಸ್ವತಃ ಡಿ.ಕೆ.ಶಿವಕುಮಾರ್ ಅವರೇ ವಹಿಸಿಕೊಂಡಿದ್ದಾರೆ. ಈ ಪ್ರಕರಣದಲ್ಲಿ ಯಾರನ್ನು ಎ1 ಮಾಡಬೇಕು, ಯಾರನ್ನು ಎ2 ಮಾಡಬೇಕು ಎಂದು ಡಿ.ಕೆ.ಶಿವಕುಮಾರ್ ಕಾರ್ಯತಂತ್ರ ರೂಪಿಸುತ್ತಿದ್ದಾರೆ ಎಂದು ಆರೋಪಿಸಿದರು. ಪ್ರಜ್ವಲ್ ರೇವಣ್ಣ ಪ್ರಕರಣದ ಬಗ್ಗೆ ಎಸ್‌ಐಟಿ ಎಲ್ಲಾ ಆಯಾಮಗಳಲ್ಲಿ ತನಿಖೆ ನಡೆಸುತ್ತಿದೆ. ಆದರೆ ಪೆನ್‌ಡ್ರೈವ್ ಬಿಡುಗಡೆ ಹಾಗೂ ವೀಡಿಯೊ ವೈರಲ್ ಮಾಡಿರುವ ಬಗ್ಗೆ ● 9ನೇ ಪುಟಕ್ಕೆ

ಇಂದು ರಾಜ್ಯಾದ್ಯಂತ ಜೆಡಿಎಸ್ ಪ್ರತಿಭಟನೆ

ಪ್ರಜ್ವಲ್ ರೇವಣ್ಣ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸುವಂತೆ ಆಗ್ರಹಿಸಿ ನಾಳೆ(ಮೇ 8) ರಾಜ್ಯಾದ್ಯಂತ ಜೆಡಿಎಸ್ ಪ್ರತಿಭಟನೆ ನಡೆಸಲಿದೆ ಎಂದು ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡರು ತಿಳಿಸಿದರು. ಹಾಗೆಯೇ ಮೈಸೂರಿನ ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಬುಧವಾರ ಬೆಳಗ್ಗೆ ಪ್ರತಿಭಟನೆ ನಡೆಯಲಿದೆ ಎಂದರು. ಈ ಪ್ರಕರಣದ ಬಗ್ಗೆ ಈಗಾಗಲೇ ಮಂಡ್ಯದಲ್ಲಿ ಪ್ರತಿಭಟನೆ ನಡೆದಿದೆ.

ಬುಧವಾರ ಕೂಡ ರಾಜ್ಯಾದ್ಯಂತ ಪ್ರತಿಭಟನೆ ನಡೆಯಲಿದೆ. ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸುವ ಹಾಗೂ ಮಹಿಳೆಯರಿಗೆ ನ್ಯಾಯ ಕೊಡಿಸುವ ಬಗ್ಗೆ ಸರ್ಕಾರಕ್ಕೆ ನಿಜವಾದ ಕಾಳಜಿ ಇದ್ದರೆ ಈ ಕೂಡಲೇ ನ್ಯಾಯಾಂಗ ತನಿಖೆ ನಡೆಸಲಿ ಎಂದು ಸವಾಲು ಹಾಕಿದರು. ಪೆನ್‌ಡ್ರೈವ್ ಸಿದ್ಧಪಡಿಸುವಲ್ಲಿ ಯಾರ್‍ಯಾರ ಪಾತ್ರವಿದೆ, ಹೇಗೆ ವೈರಲ್ ಆಗಿದೆ ಎಂಬ ಹಲವು ಸತ್ಯಾಂಶಗಳು ಬಯಲಿಗೆ ಬರಲಿವೆ ಎಂದರು. ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್, ವಿಡಿಯೋ ಇಟ್ಟುಕೊಳ್ಳುವುದು ಹಾಗೂ ವೈರಲ್ ಮಾಡುವುದು ಅಪರಾಧ ಎಂದು ಎಸ್‌ಐಟಿ ಎಚ್ಚರಿಕೆ ನೀಡಿದೆ. ಆದರೂ ಎಲ್ಲೆಡೆ ವೈರಲ್ ಆಗುತ್ತಿದೆ. ಇದರ ವಿರುದ್ಧ ಈ ತನಕ ಎಸ್‌ಐಟಿ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಜಿ.ಟಿ.ದೇವೇಗೌಡರು ಆಕ್ರೋಶ ವ್ಯಕ್ತಪಡಿಸಿದರು.

ನಾಳೆ ಇಲ್ಲವೇ ನಾಳಿದ್ದು SSLC ಫಲಿತಾಂಶ

ಬೆಂಗಳೂರು, ಮೇ 7(ಕೆಎಂಶಿ)–ಲಕ್ಷಾಂತರ ವಿದ್ಯಾರ್ಥಿಗಳು ಕಾತರದಿಂದ ಕಾಯುತ್ತಿರುವ 2023–24ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ–1ರ ಫಲಿತಾಂಶ ಮೇ 9 ಇಲ್ಲವೇ 10ರಂದು ಪ್ರಕಟಿಸಲು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಸಿದ್ಧತೆ ನಡೆಸಿದೆ.

ಮಾರ್ಚ್ 25ರಿಂದ ಏಪ್ರಿಲ್ 6 ರವರೆಗೆ ರಾಜ್ಯದ 2,750 ಕೇಂದ್ರಗಳಲ್ಲಿ ಪರೀಕ್ಷೆ ನಡೆದಿತ್ತು. 8.69 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಣಿ ಮಾಡಿಕೊಂಡಿದ್ದರು. ಸಾಮಾನ್ಯ ವಿದ್ಯಾರ್ಥಿಗಳ ಜೊತೆಯಲ್ಲಿ 18,225 ಖಾಸಗಿ ವಿದ್ಯಾರ್ಥಿಗಳು ಮತ್ತು 41,375 ರೀ ಎಕ್ಸಾಮ್ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು.

ಎಸ್‌ಎಸ್‌ಎಲ್‌ಸಿ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಈಗಾಗಲೇ ಸಂಪೂರ್ಣಗೊಂಡಿದ್ದು, ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಈ ಬಾರಿ ಫಲಿತಾಂಶ ಬಿಡುಗಡೆ ತಡವಾಗಿತ್ತು. ಮಂಗಳವಾರ ಎರಡನೇ ಹಂತದ ಮತದಾನ ಮುಗಿಯಲಿರುವ ಹಿನ್ನೆಲೆಯಲ್ಲಿ ಫಲಿತಾಂಶ ಪ್ರಕಟಣೆಗೆ ಕರ್ನಾಟಕ ಶಾಲಾ ● 10ನೇ ಪುಟಕ್ಕೆ


ದಾವಣಗೆರೆ, ಶಿವಮೊಗ್ಗದಲ್ಲಿ ಅತೀ ಹೆಚ್ಚು; ಕಲಬುರಗಿಯಲ್ಲಿ ಅತೀ ಕಡಿಮೆ ಮತದಾನ

ಬೆಂಗಳೂರು: ರಾಜ್ಯದಲ್ಲಿ ಇಂದು ನಡೆದ ಎರಡನೇ ಹಂತದಲ್ಲಿ 14 ಲೋಕಸಭಾ ಕ್ಷೇತ್ರಗಳಲ್ಲಿ ಶೇ.69.23ರಷ್ಟು ಮತದಾನವಾಗಿದೆ ಎಂದು ಚುನಾವಣಾ ಅಧಿಕಾರಿಗಳು ತಿಳಿಸಿದ್ದಾರೆ. ಬಿಜೆಪಿಯ ಅಣ್ಣಾಸಾಹೇಬ ಜೊಲ್ಲೆ ಮತ್ತು ರಾಜ್ಯ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರ ಪುತ್ರಿ ಪ್ರಿಯಾಂಕಾ ಜಾರಕಿಹೊಳಿ ನಡುವೆ ಜಿದ್ದಾಜಿದ್ದಿನ ಹೋರಾಟಕ್ಕೆ ಸಾಕ್ಷಿಯಾಗಿದ್ದ ಚಿಕ್ಕೋಡಿ ಲೋಕಸಭಾ ಕ್ಷೇತ್ರದಲ್ಲಿ ಶೇ.74.39 ರಷ್ಟು ಮತದಾನವಾಗಿದೆ.

ಇನ್ನು ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಅಳಿಯ ರಾಧಾಕೃಷ್ಣ ದೊಡ್ಡಮನಿ ಸ್ಪರ್ಧಿಸಿರುವ ಕಲಬುರಗಿ ಕ್ಷೇತ್ರದಲ್ಲಿ ಕೇವಲ ಶೇ 61.73ರಷ್ಟು ಮತದಾನವಾಗಿದ್ದು, ರಾಜ್ಯದಲ್ಲಿ ಇದುವರೆಗಿನ ಅತ್ಯಂತ ಕಡಿಮೆ ಮತದಾನವಾಗಿದೆ. ಬಿಜೆಪಿಯ ಹಾಲಿ ಸಂಸದ ಉಮೇಶ್ ಜಾಧವ್ ● 10ನೇ ಪುಟಕ್ಕೆ

ಕ್ಷೇತ್ರವಾರು ಮತದಾನದ ಮಾಹಿತಿ

ಬಾಗಲಕೋಟೆ	– ಶೇ. 70.47
ದಾವಣಗೆರೆ	– ಶೇ. 76.23
ಶಿವಮೊಗ್ಗ	– ಶೇ. 76.05
ಹಾವೇರಿ	– ಶೇ. 72.59
ಧಾರವಾಡ	– ಶೇ. 68.70
ಬಳ್ಳಾರಿ	– ಶೇ. 69.48
ರಾಯಚೂರು	– ಶೇ. 60.72
ಕೊಪ್ಪಳ	– ಶೇ. 67.83
ಬೀದರ್	– ಶೇ. 63.65
ವಿಜಯಪುರ	– ಶೇ. 64.71
ಕಲಬುರಗಿ	– ಶೇ. 61.73
ಬೆಳಗಾವಿ	– ಶೇ. 70.36
ಚಿಕ್ಕೋಡಿ	– ಶೇ. 74.39
ಉತ್ತರ ಕನ್ನಡ	– ಶೇ. 73.52



11 ರಾಜ್ಯಗಳಲ್ಲಿ ಶೇ.61.54 ಮತದಾನ

ನವದೆಹಲಿ: ವಿವಿಧ ರಾಜ್ಯಗಳ ಶೇಕಡಾವಾರು ಮತದಾನದ ವಿವರ ಹೀಗಿದೆ. ಅಸ್ಸಾಂನಲ್ಲಿ (ಶೇ. 74.76) ಅಧಿಕ, ಮಹಾರಾಷ್ಟ್ರದಲ್ಲಿ (ಶೇ. 53.40) ಕಡಿಮೆ ಮತದಾನವಾಗಿದೆ. ಇನ್ನು ಕರ್ನಾಟಕ – ಶೇ. 69.23, ಅಸ್ಸಾಂ – ಶೇ. 75.01, ಬಿಹಾರ – ಶೇ. 56.55, ಛತ್ತೀಸ್‌ಗಢ – ಶೇ. 66.99, ದಾದ್ರಾ ಮತ್ತು ನಗರ ಹವೇಲಿ ಮತ್ತು ದಮನ್ ಮತ್ತು ದಿಯು – ಶೇ. 65.23, ಗೋವಾ – ಶೇ. 74.22, ಗುಜರಾತ್– ಶೇ.56.52, ಮಧ್ಯ ಪ್ರದೇಶ – ಶೇ. 62.91, ಮಹಾರಾಷ್ಟ್ರ – ಶೇ. 54.09, ಉತ್ತರ ಪ್ರದೇಶ – ಶೇ. 57.23, ಪಶ್ಚಿಮ ಬಂಗಾಳ – ಶೇ. 73.93.

ಶಾಸಕ ಹೆಚ್.ಡಿ.ರೇವಣ್ಣಗೆ ಅನಾರೋಗ್ಯ; ಬೆಂಗಳೂರಿನಲ್ಲಿ ಆಸ್ಪತ್ರೆಗೆ ದಾಖಲು



ಬೆಂಗಳೂರು: ಎಸ್‌ಐಟಿ ವಶದಲ್ಲಿರುವ ಹೆಚ್.ಡಿ ರೇವಣ್ಣ ಅವರಿಗೆ ಆರೋಗ್ಯದಲ್ಲಿ ಸಮಸ್ಯೆ ಕಾಣಿಸಿಕೊಂಡಿದ್ದು, ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಕಳೆದ ನಾಲ್ಕು ದಿನಗಳಿಂದ ಎಸ್‌ಐಟಿ ವಶದಲ್ಲಿರುವ ಹೆಚ್.ಡಿ. ರೇವಣ್ಣ ಸರಿಯಾಗಿ ಊಟ, ನಿದ್ದೆ ಮಾಡಿಲ್ಲ. ಹೀಗಾಗಿ ಅಸಿಡಿಟಿಯಿಂದ ಎದೆನೋವು ಕಾಣಿಸಿಕೊಂಡಿದೆ. ಕೂಡಲೇ ಅವರನ್ನು ಎಸ್‌ಐಟಿ ಕಚೇರಿಯಿಂದ ನೇರವಾಗಿ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಬೌರಿಂಗ್ ಆಸ್ಪತ್ರೆಯಲ್ಲಿ ತಪಾಸಣೆ ನಡೆಸಿದ ವೈದ್ಯರು, ಗ್ಯಾಸ್ಟ್ರಿಕ್ ಹಾಗೂ ಜತೆಗೆ ಹರ್ನಿಯಾ ಸಮಸ್ಯೆಯೂ ಪತ್ತೆಯಾಗಿದೆ ಎಂದು ಹೇಳಿದ್ದಾರೆನ್ನಲಾಗಿದೆ. ವಿಕ್ಟೋರಿಯಾ ಗ್ಯಾಸ್ಟ್ರೋಎಂಟ್ರಾಲಜಿ ವೈದ್ಯರಿಂದ ತಪಾಸಣೆ ಮಾಡಿಸಲು ಹಾಗೂ ಕಾರ್ಡಿಯಾಲಜಿಸ್ಟ್ ಒಪಿನಿಯನ್ ತೆಗೆದುಕೊಳ್ಳಲು ಬೌರಿಂಗ್ ವೈದ್ಯರು ಸೂಚನೆ ನೀಡಿದ್ದಾರೆ.

ರೇವಣ್ಣ ಆಸ್ಪತ್ರೆ ದಾಖಲು ಹಿನ್ನೆಲೆ ವಿಕ್ಟೋರಿಯಾ ಆಸ್ಪತ್ರೆ ಸುತ್ತ ಪೊಲೀಸ್ ಬಂದೋಬಸ್ತ್ ನಿಯೋಜಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಸಕ್ಕರೆನಾಡಲ್ಲಿ ಭಾರಿ ಗಾಳಿ–ಮಳೆ ಆರ್ಭಟಕ್ಕೆ

ಓರ್ವ ಬಲಿ; ಧರೆಗುರುಳಿದ ಭಾರಿ ಮರಗಳು

● ಮರಗಳು ಉರುಳಿ ಬಿದ್ದು ಮಂಡ್ಯ ನಗರದ ಬಹುತೇಕ ರಸ್ತೆಗಳು ಬಂದ್ ● ಅಪಾರ ಸಂಖ್ಯೆಯ ವಿದ್ಯುತ್ ಕಂಬಗಳು ಧರೆಗೆ; ತೆರವುಗೊಳಿಸಲು ಹರಸಾಹಸ ● ಆಸ್ಪತ್ರೆ ರಸ್ತೆಯಲ್ಲಿ ನಿಂತಿದ್ದ ಓಮ್ನಿ ಮೇಲೆ ಮರ ಬಿದ್ದು ಓರ್ವ ಸಾವು ● ಕಳೆದ ರಾತ್ರಿ 8 ಗಂಟೆಯಿಂದ ನಗರದ ವಿವಿಧೆಡೆ ವಿದ್ಯುತ್ ಸ್ಥಗಿತ ● ಮರ ಬಿದ್ದ ಪರಿಣಾಮ ಮನೆಗಳು, ಕಾರು, ಬೈಕ್‌ಗಳು ಜಖಂ



ಮಂಡ್ಯ, ಮೇ 7– ಸೋಮವಾರ ರಾತ್ರಿ ಸುರಿಯಲಾರಂಭಿಸಿದ ಭಾರಿ ಮಳೆ ಮಂಗಳವಾರ ಮುಂಜಾನೆವರೆಗೆ ಒಂದೇ ಸಮನೆ ಸುರಿಯಿತು. ಇದರಿಂದ ಮಂಡ್ಯ ನಗರ ಅಕ್ಷರಶಃ ತತ್ತರಿಸಿದೆ. ಬೃಹತ್ ಮರಗಳು, ವಿದ್ಯುತ್ ಕಂಬಗಳು ಧರೆಗುರುಳಿದ ಪರಿಣಾಮ ಹಲವು ರಸ್ತೆಗಳು ಬಂದಾಗಿದ್ದು, ಓರ್ವ ಬಲಿಯಾಗಿದ್ದಾನೆ. ಇನ್ನು ಅನೇಕ ಬಡಾವಣೆಗಳಲ್ಲಿ ಮನೆಗಳು, ವಾಹನಗಳ ಮೇಲೆ ಮರಗಳು, ವಿದ್ಯುತ್ ಕಂಬಗಳು ಉರುಳಿ ಬಿದ್ದವು. ಮುಂಜಾಗ್ರತಾ ಕ್ರಮವಾಗಿ ಸೋಮವಾರ ರಾತ್ರಿಯಿಂದ ವಿದ್ಯುತ್ ಸಂಪರ್ಕ ಸ್ಥಗಿತಗೊಳಿಸಲಾಗಿತ್ತು.

ಬಿರು ಬೇಸಿಗೆಯಿಂದ ಕಂಗೆಟ್ಟಿದ್ದ ಮಂಡ್ಯ ಜನ ಮಳೆಗೆ ಕಾದಿದ್ದರು. ಆದರೆ, ವರುಣ ಕೃಪೆ ತೋರಿದರೂ ಮಳೆಯ ಜೊತೆಗೆ ಭಾರಿ ಗಾಳಿಯನ್ನು ತಂದಿದ್ದು, ಅನೇಕ ಅವಾಂತರಗಳಿಗೆ ಕಾರಣವಾಗಿದೆ.



ಕಾರ್ತಿಕ್

ಮರ ಧರೆಗುರುಳಿ ಓರ್ವ ಸಾವು, ಇಬ್ಬರು ಪಾರು: ಭಾರಿ ಗಾಳಿ ಸಹಿತ ಸುರಿದ ಮಳೆಗೆ ಓಮ್ನಿ ಕಾರಿನ ಮೇಲೆ ಮರ ಬಿದ್ದ ಪರಿಣಾಮ ಯುವಕನೊಬ್ಬ ದುರ್ಮರಣಕ್ಕೀಡಾಗಿ, ಇಬ್ಬರು ಪಾರಾಗಿದ್ದಾರೆ. ಮಂಡ್ಯ ನಗರದ ಜಿಲ್ಲಾಸ್ಪತ್ರೆ ರಸ್ತೆಯ ಮಾಜಿ ಶಾಸಕ ಎಂ.ಶ್ರೀನಿವಾಸ್ ಮನೆ ಬಳಿ ಈ ದುರಂತ ಸಂಭವಿಸಿದೆ. ದುರಂತದಲ್ಲಿ ತಾಲೂಕಿನ ಜಿ.ಬೊಮ್ಮನಹಳ್ಳಿ ಗ್ರಾಮದ ರಾಮಯ್ಯನ ಪುತ್ರ ಕಾರ್ತಿಕ್ (28) ಸಾವನ್ನಪ್ಪಿದ ದುರ್ದೈವಿ. ಬೊಮ್ಮನಹಳ್ಳಿ ಗ್ರಾಮದ ಕಾರ್ತಿಕ್ ಹುಟ್ಟುಹಬ್ಬಕ್ಕೆ ಸ್ನೇಹಿತರಾದ ಸುನೀಲ್ ಮತ್ತು ಚೀರನಹಳ್ಳಿ ಮಂಜು ಜೊತೆ ಮಂಡ್ಯ ನಗರಕ್ಕೆ ಓಮ್ನಿ ಕಾರಿನಲ್ಲಿ (KA-11-JA 978) ಬಟ್ಟೆ ಖರೀದಿಸಲು ಬಂದಿದ್ದರು. ಸೋಮವಾರ ರಾತ್ರಿ 9ರ ಸಮಯದಲ್ಲಿ ಗಾಳಿ ಸಮೇತ ಮಳೆ ಆರಂಭಗೊಂಡಾಗ ನೂರಡಿ ರಸ್ತೆಯ ಆಸ್ಪತ್ರೆ ಬಳಿ ತಿರುವಿನಲ್ಲಿ ಮರ ಕಾರಿನ ಮೇಲೆ ಉರುಳಿ ಬಿದ್ದಿದೆ. ತಕ್ಷಣ ಸಾರ್ವಜನಿಕರು ರಕ್ಷಣೆಗೆ ಮುಂದಾದರಾದರೂ ಅಷ್ಟರಲ್ಲಿ ನಜ್ಜು ● 10ನೇ ಪುಟಕ್ಕೆ





ಚಿಣ್ಣರ ಸಂತೆಯಲ್ಲಿ ತರಹೇವಾರಿ ವ್ಯಾಪಾರ

● ಮಜ್ಜಿಗೆ, ಪಾನಕ, ತರಕಾರಿ, ಬಾತು, ಚುರುಮುರಿ, ಪಾನಿಪುರಿ ಮಾರಿ ವ್ಯವಹಾರಿಕ ಜ್ಞಾನ ಪ್ರದರ್ಶಿಸಿದ ಮಕ್ಕಳು ● ತಂದೆ ಜಿಲ್ಲಾಧಿಕಾರಿ ರಾಜೇಂದ್ರರಿಗೆ ಸ್ವೀಟ್ ಕಾರ್ನ್ ಮಾರಿದ ಪುತ್ರಿ

ಮೈಸೂರು, ಮೇ.7(ಜಿಎ)– 'ಬನ್ನಿ ಬಿಸಿಲ ಬೇಗೆಗೆ ಮಜ್ಜಿಗೆ, ಪಾನಕ, ಜ್ಯೂಸ್ ಕುಡಿಯಿರಿ', 'ನೇರವಾಗಿ ರೈತರಿಂದ ಕೊಂಡು ತಂದ ತರಕಾರಿಯನ್ನು ಖರೀದಿಸಿ', 'ಬಾತು, ಚುರುಮುರಿ, ಪಾನಿಪುರಿ ತಿನ್ನಿ ಬನ್ನಿ' ಎಂದು ಪುಟಾಣಿ ವ್ಯಾಪಾರಿಗಳು ರಂಗಾಯಣದ ಚಿಣ್ಣರ ಸಂತೆಯಲ್ಲಿ ವಿವಿಧ ಪದಾರ್ಥಗಳನ್ನು ಮಾರಾಟ ಮಾಡುವ ಮೂಲಕ ಜೋರು ವ್ಯಾಪಾರ ಮಾಡಿ ವ್ಯವಹಾರಿಕ ಜ್ಞಾನ ಪ್ರದರ್ಶಿಸಿದರು.

ಮೈಸೂರಿನ ರಂಗಾಯಣದ ಬೇಸಿಗೆ ಶಿಬಿರಾರ್ಥಿಗಳಿಗಾಗಿ ರಂಗಾಯಣದ ಆವರಣದಲ್ಲಿ ಚಿಣ್ಣರ ಮೇಳದ ಅಂಗವಾಗಿ ಮಕ್ಕಳಿಗೆ ವ್ಯವಹಾರಿಕ ಜೀವನ ಕಲಿ ಸಲು ಏರ್ಪಡಿಸಿದ್ದ ಚಿಣ್ಣರ ಸಂತೆಯಲ್ಲಿ 350ಕ್ಕೂ ಹೆಚ್ಚು ಮಕ್ಕಳು ವಿವಿಧ ಮಳಿಗೆಗಳನ್ನು ತೆರೆದು ತಮ್ಮ ಚಾಕಚಕ್ಯತೆ ಮೂಲಕ ವ್ಯಾಪಾರ ಮಾಡಿ ಸಂತೆಯ ಅನುಭವ ಪಡೆದುಕೊಂಡರು.

ಚಿಣ್ಣರ ಸಂತೆಯಲ್ಲಿ ರೈತರಿಂದ ಖರೀದಿಸಿ ತಂದಿದ್ದ ಮಾವಿನಕಾಯಿ ಕೊಂಡುಕೊಳ್ಳುವ ಮೂಲಕ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಚಿಣ್ಣರ ಸಂತೆಗೆ ಚಾಲನೆ ನೀಡಿದರು.

ನಂತರ ರಂಗಾಯಣದ ಆವರಣದಲ್ಲಿ ಚಿಣ್ಣರು ಸಂತೆಯಲ್ಲಿ ತೆರೆದಿದ್ದ ವಿವಿಧ ಮಳಿಗೆಗಳಿಗೆ ಭೇಟಿ ನೀಡಿ, ತರಕಾರಿ ಕೆ.ಜಿಗೆ ಎಷ್ಟು? ಕಡಿಮೆಗೆ ಕೊಟ್ಟರೆ ತಗೋತ್ತಿನಿ, ಇದು ಯಾವ ಹಣ್ಣು, ಸೊಪ್ಪುಗಳ ಹೆಸರು ಏನು? ಎಂದು ಮಕ್ಕಳೊಂದಿಗೆ ಬೆರೆತು ಸಂತೆ ಪೂರ್ತಿ ಸಂಚರಿಸಿ, ಕೆಲವು ಪದಾರ್ಥಗಳನ್ನು ಖರೀದಿಸಿದರು. ಜಿಲ್ಲಾಧಿಕಾರಿ ರಾಜೇಂದ್ರ ಅವರ ಪುತ್ರಿ ಆಧೃತಿ ಕೂಡ ಶಿಬಿರಾರ್ಥಿಯಾಗಿದ್ದು, ಸ್ವೀಟ್ ಕಾರ್ನ್ ಮಳಿಗೆ ತೆರೆದು ತಂದೆಗೆ ಮಾರಾಟ ಮಾಡಿದ್ದು, ವಿಶೇಷವಾಗಿತ್ತು. ಈ ವೇಳೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮಾತನಾಡಿ, ಮಕ್ಕಳಿಗೆ ವ್ಯವಹಾರಿಕ ಜೀವನ ಪರಿಚಯಿಸಲು ರಂಗಾಯಣ ಚಿಣ್ಣರ ಸಂತೆ ಏರ್ಪಡಿಸಿರುವುದು ಉತ್ತಮ ಕಾರ್ಯವಾಗಿದ್ದು, ಇದರಿಂದ ಮಕ್ಕಳಿಗೆ ತಮ್ಮ ತಂದೆ–ತಾಯಿ ಎಷ್ಟು ಕಷ್ಟ ಪಡುತ್ತಾರೆಂದು ತಿಳಿಯುತ್ತದೆ. ಈ ಬಾರಿಯ ಬೇಸಿಗೆ ಮೇಳದಲ್ಲಿ ಮಕ್ಕಳ ಶ್ರಮ ಸಂತೆಯ ಮೂಲಕ ತಿಳಿಯುತ್ತಿದೆ. ಎಲ್ಲಾ ಮಕ್ಕಳು ಅಚ್ಚುಕಟ್ಟಾಗಿ ವ್ಯಾಪಾರ ಮಾಡಲು ಸಿದ್ಧತೆ ಮಾಡಿಕೊಂಡು ಬಂದಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದರು.





ಮೈಸೂರಿನ ರಂಗಾಯಣದ ಆವರಣದಲ್ಲಿ ಏರ್ಪಡಿಸಿದ್ದ ಚಿಣ್ಣರ ಸಂತೆಗೆ ಡಿಸಿ ರಾಜೇಂದ್ರ ಚಾಲನೆ ನೀಡಿ, ಮಕ್ಕಳಿಂದ ಪದಾರ್ಥಗಳನ್ನು ಖರೀದಿಸಿದರು.

ರೈತ ವೇಷ ತೊಟ್ಟು ಸೊಪ್ಪು ಮಾರಾಟ ಮಾಡಿದ್ದು, ಬಿಸಿಲಿಗೆ ತಕ್ಕಂತೆ ದೇಹ ತಂಪು ಮಾಡಲು ಮಜ್ಜಿಗೆ, ಪಾನಕ, ಬಾಯಿ ಚಪ್ಪರಿಸಲು ಚುರುಮುರಿ, ಸಂಡಿಗೆ, ರವೆ ಉಂಡೆ, ತರಕಾರಿ ಅಂಗಡಿ, ಮಕ್ಕಳು ಸ್ವತಃ ಮಾಡಿದ ಕರಕುಶಲ ವಸ್ತುಗಳು, ನೀರಿನಲ್ಲಿ ಕಾಯಿನ್ ಹಾಕುವ ಆಟ, ಬಾತು, ಪುಳಿಯೋಗರೆ ಸೇರಿದಂತೆ ಅನೇಕ ಮಳಿಗೆಗಳು ಚಿಣ್ಣರ ಸಂತೆಯಲ್ಲಿ ಗಮನ ಸೆಳೆಯಿತು.

ಮಲಬಾರ್ ಗೋಲ್ಡ್ & ಡೈಮಂಡ್ಸ್‌ನಲ್ಲಿ ಆರ್ಟಿಸ್ಟ್ರಿ ಬ್ರ್ಯಾಂಡೆಡ್ ಆಭರಣ ಪ್ರದರ್ಶನ



ಮೈಸೂರು, ಮೇ 7 – ಮೈಸೂರಿನ ಕೆಎಸ್‌ಆರ್‌ಟಿಸಿ ಸಬ್ ಅರ್ಬನ್ ಬಸ್ ನಿಲ್ದಾಣದ ಬಳಿಯ ಮಲಬಾರ್ ಗೋಲ್ಡ್ & ಡೈಮಂಡ್ಸ್ ಶೋ ರೂಂನಲ್ಲಿ ಆರ್ಟಿಸ್ಟ್ರಿ ಬ್ರ್ಯಾಂಡೆಡ್ ಆಭರಣ ಪ್ರದರ್ಶನ, ಚಿನ್ನ, ವಜ್ರ ಮತ್ತು ಅಮೂಲ್ಯ ರತ್ನದ ಆಭರಣಗಳ ವಿಶೇಷ ಪ್ರದರ್ಶನ ಮತ್ತು ಮಾರಾಟವನ್ನು ರೂಪದರ್ಶಿಗಳಾದ ಅಂಜಲಿ ಪಿ, ಕೆ.ಎಸ್.ದಿವ್ಯಾ, ಮೆಹೆಕ್ ನಿಶಾದ್, ಭೂಮಿಕಾ, ಮ್ಯಾನೇಜ್‌ಮೆಂಟ್ ಸದಸ್ಯರಲ್ಲದೆ ವಲಯ ಮುಖ್ಯಸ್ಥ ಶರಫುದ್ದೀನ್ .ಪಿ, ಅಸಿಟ್ ಸ್ಟೋರ್ ಹೆಡ್ ಫಸಲು ರಹಮಾನ್ ಉಪಸ್ಥಿತಿಯಲ್ಲಿ ಉದ್ಘಾಟಿಸಲಾಯಿತು.

ಈ ಪ್ರದರ್ಶನವು ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್‌ನ ಉಪ–ಬ್ರ್ಯಾಂಡ್‌ಗಳಿಂದ ಆಯ್ದ ರಚನೆಗಳನ್ನು ಒಳಗೊಂಡಿದೆ. ಡೈಮಂಡ್ ಆಭರಣಗಳು, ಕತ್ತರಿಸದ ವಜ್ರದ ಆಭರಣಗಳು, ಡಿವೈನ್ ಇಂಡಿಯನ್ ಹೆರಿಟೇಜ್ ಆಭರಣಗಳು, ಕರಕುಶಲ ಆಭರಣಗಳು ಮತ್ತು ಅಮೂಲ್ಯವಾದ ರತ್ನದ ಆಭರಣಗಳು. ಮಕ್ಕಳ ಆಭರಣಗಳ ಪ್ರದರ್ಶನದಲ್ಲಿ ಖರೀದಿಸುವ ಅವಕಾಶವಿದೆ. ಮೇ 4ರಿಂದ ಮೇ 19ರವರೆಗೆ ಕಲಾತ್ಮಕ ಆಭರಣ ಪ್ರದರ್ಶನವನ್ನು ಆಯೋಜಿಸಲಾಗಿದೆ.

ಮಲಬಾರ್ ಗೋಲ್ಡ್& ಡೈಮಂಡ್ಸ್ ಬಿಐಎಸ್ ಹಾಲ್‌ಮಾರ್ಕ್ 916 ಚಿನ್ನ, ಐಜಿಐ ಪ್ರಮಾಣೀಕೃತ ಡೈಮಂಡ್ ಆಭರಣಗಳು, ಪಿಜಿಐ ಪ್ರಮಾಣೀಕೃತ ಪ್ಲಾಟಿನಂ ಆಭರಣಗಳು ಮತ್ತು ಹಾಲ್‌ಮಾರ್ಕ್ ಬೆಳ್ಳಿ ಆಭರಣಗಳನ್ನು ಮಾರಾಟ ಮಾಡುತ್ತಿದೆ. ಎಲ್ಲಾ ಉತ್ಪನ್ನಗಳು ವಿವರವಾದ ಮತ್ತು ಪಾರದರ್ಶಕ ಬೆಲೆಯೊಂದಿಗೆ ಒಟ್ಟು ತೂಕ, ಕಲ್ಲಿನ ತೂಕ, ಮೇಕಿಂಗ್ ಚಾರ್ಜ್, ಕಲ್ಲಿನ ಚಾರ್ಜ್ ಮತ್ತು ನಿವ್ವಳ ತೂಕದಂತಹ ವಿವರಗಳೊಂದಿಗೆ ಬರುತ್ತವೆ. ಇದು ಗ್ರಾಹಕರಿಗೆ ಉತ್ಪನ್ನದ ಬೆಲೆಯನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಲು ಮತ್ತು ಅವರ ಖರೀದಿಗಳನ್ನು ಯೋಜಿಸಲು ಅನುವು ಮಾಡಿಕೊಡುತ್ತದೆ. ಮಲಬಾರ್ ಗೋಲ್ಡ್ & ಡೈಮಂಡ್ಸ್‌ನ ಮೌಲ್ಯವರ್ಧಿತ ಸೇವೆಗಳು ಆಜೀವ ಉಚಿತ ನಿರ್ವಹಣೆ, ಒಂದು ವರ್ಷದ ಉಚಿತ ವಿಮಾ ರಕ್ಷಣೆ ಮತ್ತು ಅದರ ಎಲ್ಲಾ ಆಭರಣಗಳಿಗೆ ಮರು ಖರೀದಿ ಗ್ಯಾರಂಟಿ. ಶುದ್ಧತೆಯನ್ನು ಖಚಿತಪಡಿಸಿಕೊಳ್ಳಲು, ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್ ಶೋರೂಮ್‌ಗಳು ಕ್ಯಾರೆಟ್ ವಿಶ್ಲೇಷಕ ಸೌಲಭ್ಯವನ್ನು ಹೊಂದಿವೆ.



ಪೇರೆಂಟ್ಸ್ ಅಸೋಸಿಯೇಷನ್ ಆಫ್ ಡೆಫ್ ಚಿಲ್ಡ್ರನ್ ಅವರು ನಡೆಸುತ್ತಿರುವ ತಾಯಿ ಮತ್ತು ಕಿವುಡ ಮಕ್ಕಳ ಶಾಲೆಗೆ ಜೆ.ಪಿ.ನಗರದಲ್ಲಿರುವ ಚಿಂತನ ಸಂಸ್ಥೆಯ ಅಯ್ಯಪ್ಪ, ಶ್ರೀಮತಿ ಉಮಾ ಎಂ.ಕೆ. ಹಾಗೂ ಶ್ರೀಮತಿ ಚಿನ್ಮಯಿ ಭೇಟಿ ನೀಡಿ, ಇಬ್ಬರು ಮಕ್ಕಳಿಗೆ ಶ್ರವಣಯಂತ್ರ, ಓರ್ವ ವಿದ್ಯಾರ್ಥಿನಿಯ ಶಿಕ್ಷಣದ ವೆಚ್ಚ ಮತ್ತು ಶಾಲೆಯ ಗೋಡೆಯ ಮೇಲೆ ಶಿಕ್ಷಣಕ್ಕೆ ಸಂಬಂಧಿಸಿದ ಚಿತ್ರ ಬಿಡಿಸುವ ವೆಚ್ಚ ಭರಿಸುವ ದೇಣಿಗೆ ನೀಡಿ, ಮಕ್ಕಳಿಗೆ ಶುಭ ಕೋರಿದರು. ಸಂಸ್ಥೆಯ ಪದಾಧಿಕಾರಿ ಶ್ರೀಮತಿ ಜಲಜಾ ಗೋವಿಂದಪ್ಪ, ಶಿಕ್ಷಕಿಯರಾದ ಪರಿಮಳಾ ಮೂರ್ತಿ, ಸ್ವಾತಿ, ಮೀನಾಕ್ಷಿ, ತಾಯಂದಿರು, ಮಕ್ಕಳು ಇದ್ದಾರೆ.

ವರುಣ ಕ್ಷೇತ್ರದಲ್ಲಿ ಭಾರಿ ಮಳೆ; ತುಂಬಿದ ಸಣ್ಣಪುಟ್ಟ ಕೆರೆ–ಕಟ್ಟೆಗಳು



ಸುತ್ತೂರು, ಮೇ 7– ವರುಣ ಕ್ಷೇತ್ರದಲ್ಲಿ ಸುರಿದ ಧಾರಾಕಾರ ಮಳೆಯಿಂದಾಗಿ ಸುತ್ತೂರು ಗ್ರಾಮ ಪಂಚಾಯಿತಿ, ತಾಯೂರು ಗ್ರಾಪಂ ವ್ಯಾಪ್ತಿಯ ಕೆರೆ ಕಟ್ಟೆಗಳು ತುಂಬಿ ತುಳುಕುತ್ತಿವೆ. ರೈತರು ಬೆಳೆದ ಬೆಳೆಗಳಿಗೆ ನೀರು ನುಗ್ಗಿ, ಅಡ್ಡಾಳುಗಳು, ಸಣ್ಣಪುಟ್ಟ ಕಾಲುವೆಗಳು, ಸಣ್ಣಕೆರೆಗಳು ತುಂಬಿ ಹರಿದು ರಸ್ತೆಗಳ ಮೇಲೆ ನೀರು ಹರಿದು ಸಾರ್ವಜನಿಕರ ವಾಹನ ಸಂಚಾರಕ್ಕೆ ಅಡ್ಡಿಯಾಗಿದೆ.

ಸುತ್ತೂರು, ಗೆಜ್ಜಗನಹಳ್ಳಿ, ಕಹಳ್ಳಿ, ಬೆಳಗಲಿ, ತಾಯೂರು ಮುಂತಾದ ಗ್ರಾಮಗಳ ವ್ಯಾಪ್ತಿಯ ತಗ್ಗು ಪ್ರದೇಶದ ರಸ್ತೆಯಲ್ಲಿ ನೀರು ನಿಂತಿದೆ. ರೈತ ಮುಖಂಡರಾದ ಶಿವಣ್ಣ, ಮಹದೇವಸ್ವಾಮಿ, ಮಂಟಯ್ಯ, ಮಹೇಶ್ ಮಾತನಾಡಿ, ಈ ಭಾಗದಲ್ಲಿ ಕಳೆದ ಮೂರು ನಾಲ್ಕು ತಿಂಗಳಿಂದ ಬೇಸಿಗೆ ಬಿಸಿಲಿಗೆ ಜನ–ಜಾನುವಾರು ಬಳಲಿ ಬೆಂಡಾಗಿದ್ದರು. ರೈತರು ಬೆಳೆದ ಫಸಲು ಬಿಸಿಲಿನಲ್ಲಿ ಸೊರಗಿತ್ತು. ರಾತ್ರಿ ಬಿದ್ದ ಧಾರಾಕಾರ ಮಳೆ ತಂಪೆರೆಯಿತು ಎಂದು ಹರ್ಷ ವ್ಯಕ್ತಪಡಿಸಿದರು.

ಈಗ ಬಿತ್ತನೆ ಮಾಡಲು ಹದವಾದ ಮಳೆಯಾಗಿದೆ. ಬಿತ್ತನೆ ಮಾಡಲು ಆರಂಭಿಸಿದ್ದೇವೆ ಎಂದು ಹೇಳಿದರು.

ಬೋಧನೆಯಲ್ಲಿ ನಾಟಕ, ಕಲೆ ಕಾರ್ಯಾಗಾರ

ಮೈಸೂರು, ಮೇ 7 –ಶ್ರೀ ಛಾಯಾದೇವಿ ಶಿಕ್ಷಣ ಮಹಾವಿದ್ಯಾಲಯದ ವತಿಯಿಂದ ಬೋಧನೆಯಲ್ಲಿ ನಾಟಕ ಮತ್ತು ಕಲೆ ಕುರಿತು ಎರಡು ದಿನಗಳ ಶೈಕ್ಷಣಿಕ ಕಾರ್ಯಾಗಾರವು ರಾಜೇಂದ್ರನಗರದಲ್ಲಿರುವ ಕಾಲೇಜಿನ ಸಭಾಂಗಣದಲ್ಲಿ ನಾಳೆ (ಮೇ 8) ಬೆಳಗ್ಗೆ 10.30ಕ್ಕೆ ನಡೆಯಲಿದೆ.

ಕಾರ್ಯಾಗಾರವನ್ನು ಸ್ಪಂದನಾ ಸಾಂಸ್ಕೃತಿಕ ಪರಿಷತ್ತಿನ ಸಂಸ್ಥಾಪಕ ಅಧ್ಯಕ್ಷ ಹಾಗೂ ಸಾಹಿತಿ ಮತ್ತು ಟಿ.ಸತೀಶ್ ಜವರೇಗೌಡ ಉದ್ಘಾಟಿಸುವರು. ಕಾಲೇಜಿನ ಪ್ರಾಂಶುಪಾಲ ಡಾ.ಅಂತೋಣಿ ಪಾಲ್‌ರಾಜ್ ಅಧ್ಯಕ್ಷತೆ ವಹಿಸುವರು. ವಿವಿಧ ಬೋಧನಾ ವಿಷಯಗಳ ಕುರಿತು ಸುಮಾರು ನೂರು ಮಂದಿ ಪ್ರಶಿಕ್ಷಣಾರ್ಥಿಗಳು ಕುರುಕ್ಷೇತ್ರ, ತಲೆದಂಡ, ಮರ್ಚೆಂಟ್ ಆಫ್ ವೆನಿಸ್, ಜೀವನದಲ್ಲಿ ಗಣಿತದ ಪ್ರಾಮುಖ್ಯತೆ, ಆರೋಗ್ಯವೇ ಭಾಗ್ಯ, ದಿನನಿತ್ಯ ಜೀವನದಲ್ಲಿ ರಸಾಯನಶಾಸ್ತ್ರ ನಾಟಕಗಳನ್ನು ಪ್ರದರ್ಶನ ಮಾಡುವರು.

ಹರತಲೆ ಗ್ರಾಮದಿಂದ ವೃದ್ಧ ನಾಪತ್ತೆ

ನಂಜನಗೂಡು, ಮೇ 7–ತಾಲೂಕಿನ ಹರತಲೆ ಗ್ರಾಮದ 64 ವರ್ಷದ ನಾಗೇಗೌಡ ಬಿನ್ ಲೇಟ್ ಪುಟ್ಟನಂಜೇಗೌಡ ಮೇ 5ರಂದು ಬೆಳಗ್ಗೆ 5.30ರ ಸಮಯದಲ್ಲಿ ನೈಸರ್ಗಿಕ ಕ್ರಿಯೆಗೆ ಹೊರಗಡೆ ಹೋಗಿದ್ದು ಇದುವರೆಗೆ ಮನೆಗೆ ವಾಪಸ್ ಬಂದಿಲ್ಲ ಎಂದ ಅವರ ಮಗ ಶ್ರೀಕಂಠ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.



ಚಹರೆ: ಗೋಧಿ ಬಣ್ಣ, ಸಾಧಾರಣ ಮೈಕಟ್ಟು, ಎತ್ತರ 5.6 ಅಡಿ ಇದ್ದು, ಕನ್ನಡ ಮಾತನಾಡುತ್ತಾರೆ. ಮನೆಯಿಂದ ಹೋಗುವಾಗ ಕಪ್ಪು ಬಣ್ಣದ ಟಿ–ಶರ್ಟ್, ಆಕಾಶ ನೀಲಿ ಪಂಚೆ ಧರಿಸಿರುತ್ತಾರೆ. ಇವರ ಬಗ್ಗೆ ಸುಳಿವು ಸಿಕ್ಕಲ್ಲಿ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಯ ದೂ.ಸಂ. 08221 226259 ಕರೆ ಮಾಡುವಂತೆ ಪೊಲೀಸರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೈನಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ನೂತನ ಸದಸ್ಯರ ಆಯ್ಕೆ



ಜೈನಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಸದಸ್ಯರಾಗಿ ಮನು, ಪ್ರಸನ್ನ, ಅಶೋಕ, ಲೋಹಿತ್, ಮುಕುಂದ, ರಾಘವೇಂದ್ರ, ಕಮಲಮ್ಮ, ತಿಮ್ಮಪ್ಪಗೌಡ ಆಯ್ಕೆಯಾದರು. ಈ ವೇಳೆ ಗ್ರಾಮ ಪಂಚಾಯಿತಿ ಸದಸ್ಯರಾದ ಸುಂದ್ರೇಶ, ವೆಂಕಟರಾಮೇಗೌಡ, ಚನ್ನೇಗೌಡ, ಶೇಷಾದ್ರಿಗೌಡ, ಕಿರಣ್, ಅನಂತ, ಕುಮಾರ ಇನ್ನಿತರರಿದ್ದರು.

ಭೂಮಿ ನೀಡಿದ ರೈತರ ಕುಟುಂಬಗಳಿಗೆ ಉದ್ಯೋಗ ನೀಡದ ಬನ್ನಾರಿ ಸಕ್ಕರೆ ಕಾರ್ಖಾನೆ ವಿರುದ್ಧ ಹೋರಾಟ

ಜನಾಂದೋಲನ ಮಹಾಮೈತ್ರಿ ರಾಜ್ಯ ಸಂಚಾಲಕ ಉಗ್ರ ನರಸಿಂಹೇಗೌಡ ಎಚ್ಚರಿಕೆ

ಮೈಸೂರು, ಮೇ 7(ಜಿಎ)–ಮೈಸೂರು ಜಿಲ್ಲೆ ನಂಜನಗೂಡು ತಾಲೂಕಿನ ಬನ್ನಾರಿ ಅಮ್ಮನ್ ಸಕ್ಕರೆ ಕಾರ್ಖಾನೆ ಸ್ಥಾಪನೆಗೆ ಭೂಮಿ ನೀಡಿದ ರೈತ ಕುಟುಂಬಗಳಿಗೆ ನ್ಯಾಯಾಲಯ ಮತ್ತು ಜಿಲ್ಲಾಡಳಿತ ಆದೇಶದಂತೆ ಉದ್ಯೋಗ ನೀಡದೆ ಕಾರ್ಖಾನೆ ಆಡಳಿತ ಮಂಡಳಿ ಸತಾಯಿಸುತ್ತಿದ್ದು, ಸದ್ಯದಲ್ಲಿಯೇ ತೀವ್ರ ಸ್ವರೂಪದಲ್ಲಿ ಹೋರಾಟ ಮಾಡಲಾಗುವುದು ಎಂದು ಜನಾಂದೋಲನ ಮಹಾಮೈತ್ರಿಯ ರಾಜ್ಯ ಸಂಚಾಲಕ ಉಗ್ರ ನರಸಿಂಹೇಗೌಡ ಎಚ್ಚರಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೈಗಾರಿಕೆ ಸ್ಥಾಪನೆಗೆ ಭೂಮಿ ನೀಡಿದ ರೈತ ಕುಟುಂಬಗಳಿಗೆ ಉದ್ಯೋಗ ನೀಡುವಂತೆ ರಾಜ್ಯದ ಮುಖ್ಯಮಂತ್ರಿಗಳೇ ಕೈಗಾರಿಕೆಗೆ ತಾಕೀತು ಮಾಡಿದ್ದಾರೆ. ಅಲ್ಲದೆ 2024ರ ಏಪ್ರಿಲ್ 4ರಂದು ಕರ್ನಾಟಕ ಹೈಕೋರ್ಟ್ ಭೂಮಿ ಕಳೆದುಕೊಂಡ ರೈತರಿಗೆ ಉದ್ಯೋಗ ನೀಡಬೇಕು ಎಂದು ಆದೇಶ ಹೊರಡಿಸಿದೆ.

ಆದರೆ ಬನ್ನಾರಿ ಅಮ್ಮನ್ ಸಕ್ಕರೆ ಕಾರ್ಖಾನೆ ನೆಲದ ಕಾನೂನಿಗೂ ಗೌರವ ಕೊಡದೆ, ಸರ್ಕಾರದ ಆದೇಶಕ್ಕೂ ಮನ್ನಣೆ ನೀಡದೆ, ಭೂಮಿಯನ್ನು ಕಳೆದುಕೊಂಡ ರೈತ ಕುಟುಂಬಗಳನ್ನು ವಂಚಿಸುವುದಕ್ಕೆ ಯಾವೆಲ್ಲ ತಂತ್ರ–ಕುತಂತ್ರಗಳನ್ನು ಮಾಡಬಹುದೋ ಅದೆಲ್ಲವನ್ನು ಮಾಡುತ್ತಿದೆ ಎಂದು ಕಾರ್ಖಾನೆಯ ವಿರುದ್ಧ ಅವರು ಕಿಡಿಕಾರಿದರು.

ಬನ್ನಾರಿ ಅಮ್ಮನ್ ಕಾರ್ಖಾನೆ ಎಷ್ಟೇ ಪ್ರಚೋದನೆ ಮತ್ತು ಬೆದರಿಕೆಯ ತಂತ್ರಗಳು ಮಾಡಿದರು ಸಹ ಯಾವುದೇ ಆವೇಶಕ್ಕೆ ಒಳಗಾಗದೆ ನಡೆಯುತ್ತಿರುವ ರೈತರ ಪ್ರತಿಭಟನೆಯು 91ನೇ ದಿನಕ್ಕೆ ಕಾಲಿಟ್ಟಿದೆ. ಆದರೆ ರೈತರ ತಾಳ್ಮೆಗೂ ಒಂದು ಮಿತಿ ಇದೆ. ಕಾರ್ಖಾನೆ ಇದೆ ಧೋರಣೆಯನ್ನು ಮುಂದುವರೆಸಿದರೆ ರೈತರ ಹೋರಾಟವನ್ನು ತೀವ್ರಗೊಳಿಸುವ ಮೂಲಕ ನಮ್ಮ ಹಕ್ಕುಗಳನ್ನು ಪಡೆದೇ ತೀರುತ್ತೇವೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾ ಉಪಾಧ್ಯಕ್ಷ ಬೊಕ್ಕಹಳ್ಳಿ ನಂಜುಂಡಸ್ವಾಮಿ, ಉದ್ಯೋಗ ವಂಚಿತ ರೈತ ಮಹಿಳೆಯರಾದ ಪುಟ್ಟಮ್ಮ, ರಾಜಮ್ಮ, ಪುನೀತ್, ಮಹೇಶ್ ಉಪಸ್ಥಿತರಿದ್ದರು.

ವಿವಿಧ ಕೌಶಲ್ಯ ತರಬೇತಿಗೆ ಅರ್ಜಿ ಆಹ್ವಾನ

ಮೈಸೂರು, ಮೇ 7– ಮೈಸೂರಿನ ರುಡ್‌ಸೆಟ್ ಸಂಸ್ಥೆಯು ಎನ್‌ಆರ್‌ಎಲ್‌ಎಂ ಯೋಜನೆಯಡಿಯಲ್ಲಿ ಗ್ರಾಮೀಣ ಪ್ರದೇಶದ ನಿರುದ್ಯೋಗಿ ಯುವಕ ಯುವತಿಯರಿಗಾಗಿ ಸ್ವಉದ್ಯೋಗ ಮಾಡಲು ವಿವಿಧ ರೀತಿಯ ಕೌಶಲ್ಯ ತರಬೇತಿಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ಪೇಪರ್ ಕವರ್ಸ್, ಬ್ಯಾಗ್ಸ್, ಫೈಲ್ ತಯಾರಿಕೆ (ದಿನಾಂಕ: 13.05.2024 ರಿಂದ 22.05.2024 ವರೆಗೆ (10 ದಿನಗಳು); ಜೂಟ್ ಬ್ಯಾಗ್ಸ್ ತಯಾರಿಕೆ (ದಿನಾಂಕ: 16.05.2024ರಿಂದ 28.05.2024ವರೆಗೆ (13 ದಿನಗಳು)

ತರಬೇತಿ ಅವಧಿಯಲ್ಲಿ ಊಟ–ವಸತಿ ಸಂಪೂರ್ಣ ಉಚಿತವಾಗಿರುತ್ತದೆ. ಆಸಕ್ತ ಅಭ್ಯರ್ಥಿಗಳು ತಮ್ಮ ಮೊಬೈಲ್ ನಂಬರ್‌ವುಳ್ಳ ಸ್ವವಿಳಾಸದ ಅರ್ಜಿಯೊಂದಿಗೆ, ಆಧಾರ್‌ಕಾರ್ಡ್, ಬಿ.ಪಿ.ಎಲ್. ರೇಷನ್‌ಕಾರ್ಡ್ ಜೆರಾಕ್ಸ್ ಪ್ರತಿಗಳೊಂದಿಗೆ ಮೇಲ್ಕಾಣಿಸಿದ ಪ್ರಾರಂಭಿಕ ದಿನಾಂಕದೊಳಗಾಗಿ ಸಂಪರ್ಕಿಸಿ ರುಡ್‌ಸೆಟ್ ಸಂಸ್ಥೆಯಲ್ಲಿ ತರಬೇತಿಯಲ್ಲಿ ಪಾಲ್ಗೊಳ್ಳಲು ತಿಳಿಸಲಾಗಿದೆ. ತರಬೇತಿಗೆ ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆಯನ್ನು ನೇರ ಸಂದರ್ಶನ ಮೂಲಕ ನಡೆಸಲಾಗುವುದು. ಮಾಹಿತಿಗೆ 0821–2519663, 9740430061, 9844013948, 9449860466, 6361019245, 9880196581, 8746803006 ಸಂಪರ್ಕಿಸಬಹುದು.


ಅಭ್ಯರ್ಥಿಗಳ ಅರ್ಹತೆ

18ರಿಂದ 45 ವರ್ಷಗಳ ವಯೋಮಿತಿ ಹೊಂದಿರಬೇಕು. ಕನ್ನಡ ಓದು ಬರಹ ಬಲ್ಲವರಾಗಿರಬೇಕು. ಸ್ವಉದ್ಯೋಗವನ್ನು ಮಾಡಬೇಕೆಂಬ ಆಸಕ್ತಿ ಹೊಂದಿರಬೇಕು.



ನಿವೃತ್ತ ಪ್ರಧಾನ ಇಂಜಿನಿಯರ್ ಬಿಸಿ ಬಸವರಾಜ್ ಹಾಗೂ ಶ್ರೀಮತಿ ಅಂಬಿಕಾ ರಾಜ್ ವಿವಾಹ ವಾರ್ಷಿಕೋತ್ಸವದ ಹಿನ್ನೆಲೆಯಲ್ಲಿ ಅವರನ್ನು ಪುತ್ರ ಬಿ.ಬಿ.ರವಿಶಂಕರ್, ವಿಕ್ರಾಂತ್ ಪಿ.ದೇವೇಗೌಡ, ಕೊಪ್ಪಲ್ ರಾಜಣ್ಣ, ದತ್ತು ರಾಜಕುಮಾರ್, ಆರ್.ಪ್ರಶಾಂತ್ ಇತರರು ಅಭಿನಂದಿಸಿ, ಶುಭ ಕೋರಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

8.05.2024 ಬುಧವಾರ, ಮಳೆ ನಕ್ಷತ್ರ: ಭರಣಿ 27.04.2024ರಿಂದ 10.05.2024 ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ಅಮಾವಾಸ್ಯೆ, ನಕ್ಷತ್ರ: ಭರಣಿ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೊಜ್ಜು ನಿವಾರಣಾ ಚಿಕಿತ್ಸಾ ಮತ್ತು ಥೈರಾಯಿಡ್ ಗ್ರಂಥಿ ವ್ಯಾಧಿಗಳ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ಜೆಎಸ್‌ಎಸ್ ಮಹಿಳಾ ಇಂಜಿನಿಯರಿಂಗ್ ಕಾಲೇಜು:** ಗೀತಯಾನ–2024, ಉದ್ಘಾಟನೆ: ಜೆಎಸ್‌ಎಸ್‌ಎಸ್ ಅಧ್ಯಕ್ಷ ಡಾ.ಎಂ.ಜಗನ್ನಾಥ್ ಶೆಣೈ, ಉಪಸ್ಥಿತರು: ಜೆಎಸ್‌ಎಸ್‌ಎಸ್ ಕಾರ್ಯದರ್ಶಿ ಶ್ರೀಮತಿ ವನಜಾ ಬಿ.ಪಂಡಿತ್, ಪ್ರಿನ್ಸಿಪಾಲ್ ಡಾ.ಎಂ.ಶಿವಕುಮಾರ್, ಶ್ರೀಮತಿ ಅನುಪಮಾ ಬಿ. ಪಂಡಿತ್, ಆರ್.ಕೆ. ಭರತ್, ಸ್ಥಳ: ರಂಗಮಂಟಪ, ಪ್ರೊ.ಬಿ.ಎಸ್.ಪಂಡಿತ್ ಮೆಮೋರಿಯಲ್ ಬ್ಲಾಕ್, ಬೆಳಗ್ಗೆ 9.30ಕ್ಕೆ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ

■ **ಮಹಾರಾಜ ಕಾಲೇಜು, ಪಠ್ಯೇತರ ಚಟುವಟಿಕೆಗಳ ಸಮಿತಿ :** ವಿಶ್ವಜ್ಞಾನಿ ಭಾರತರತ್ನ ಡಾ. ಬಿ.ಆರ್. ಅಂಬೇಡ್ಕರ್‌ರವರ ಜನ್ಮ ದಿನಾಚರಣೆ, ಉದ್ಘಾಟನೆ : ಬುದ್ಧ ವಿಹಾರ ಚೇತವನದ ಪ್ರೊ. ಮನೋರಕ್ಖಿತ ಬಂತೇಜಿ, ಮುಖ್ಯ ಅತಿಥಿಗಳು: ಗಾಂಧಿ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ. ನರೇಂದ್ರ ಕುಮಾರ್, ಅಧ್ಯಕ್ಷತೆ : ಮಹಾರಾಜ ಕಾಲೇಜು ಪ್ರಾಂಶುಪಾಲ ಪ್ರೊ. ಹೆಚ್. ಸೋಮಶೇಖರಪ್ಪ, ಉಪಸ್ಥಿತರು : ಆಡಳಿತಾಧಿಕಾರಿ ಪ್ರೊ. ವಿ. ಷಣ್ಮುಗಂ, ಪಠ್ಯೇತರ ಚಟುವಟಿಕೆಗಳ ಸಮಿತಿ ಸಂಚಾಲಕ ಪ್ರೊ. ಸಿ.ಇ. ಲೋಕೇಶ್, ಸ್ಥಳ: ಶತಮಾನೋತ್ಸವ ಭವನ, ಮಹಾರಾಜ ಕಾಲೇಜು, ಬೆಳಗ್ಗೆ 10.30ಕ್ಕೆ.

■ **ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟಬಲ್ ಟ್ರಸ್ಟ್:** 134ನೇ ವರ್ಷದ ಶ್ರೀ ರಾಮೋತ್ಸವ, ಬೆಳಗ್ಗೆ 8ಕ್ಕೆ ಅಭಿಷೇಕ, ಅರ್ಚನೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಸಭಾದ ಆವರಣ, ಶ್ರೀರಾಮಪೇಟೆ.

■ **ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ :**ಆರ್ಟಿಸ್ಟ್ರಿ ಚಿನ್ನಾಭರಣ ಪ್ರದರ್ಶನ, ಸ್ಥಳ: ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಶೋ ರೂಂ, ಬಿ.ಎನ್. ರಸ್ತೆ, ಬೆಳಗ್ಗೆ 10 ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ :** ನಾಡಿನ ಅಪರೂಪದ ರಾಜಕಾರಣಿ ವಿ.ಶ್ರೀನಿವಾಸ ಪ್ರಸಾದರಿಗೆ ನುಡಿನಮನ, ನುಡಿನಮನ ಸಲ್ಲಿಸುವವರು: ವಿಶ್ವಮೈತ್ರಿ ಬುದ್ಧವಿಹಾರದ ಭಂತೆ ಡಾ.ಕಲ್ಯಾಣಸಿರಿ, ಮೈಸೂರು ವಿವಿ ಕಾಲೇಜು ಅಭಿವೃದ್ಧಿ ಪರಿಷತ್ ನಿರ್ದೇಶಕ ಪ್ರೊ. ಡಿ.ಆನಂದ್, ಅಧ್ಯಕ್ಷತೆ : ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ನಿರ್ದೇಶಕ ಪ್ರೊ. ಜೆ. ಸೋಮಶೇಖರ್, ಸ್ಥಳ: ಪ್ರೊ. ಬೆಟ್ರಿಕ್ಸ್ ಡಿಸೋಜ ಸಭಾಂಗಣ, ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ಬೆಳಗ್ಗೆ 11ಕ್ಕೆ

■ **ಶ್ರೀ ನಟರಾಜ ಪ್ರತಿಷ್ಠಾನ, ಶ್ರೀ ಹೊಸಮಠ :** ವಿದ್ವಾನ್ ಶ್ರೀ ಗುರುಶಾಂತ ಮಹಾಸ್ವಾಮಿಗಳವರ 29ನೇ ಪುಣ್ಯಾರಾಧನೆ, ಅಕ್ಕಮಹಾದೇವಿ ಮತ್ತು ಬಸವ ಜಯಂತ್ಯುತ್ಸವ, ಸಾನ್ನಿಧ್ಯ : ಶ್ರೀ ಹೊಸ ಮಠದ ಶ್ರೀ ಚಿದಾನಂದ ಸ್ವಾಮೀಜಿ, ಬೆಳಗ್ಗೆ 6ಕ್ಕೆ ಶ್ರೀ ಗುರುಶಾಂತ ಮಹಾಸ್ವಾಮಿಗಳವರ ಗದ್ದುಗೆಗೆ ವಿಶೇಷ ಪೂಜೆ, ಬೆಳಗ್ಗೆ 9ಕ್ಕೆ ಲಿಂಗಾಯಿತ ಹೆಣ್ಣು ಮಕ್ಕಳಿಗೆ ಲಿಂಗ ದೀಕ್ಷಾ ಸಂಸ್ಕಾರ, ಸಂಜೆ 4.30ಕ್ಕೆ ಅಕ್ಕಮಹಾದೇವಿ ಜಯಂತಿ, ಉದ್ಘಾಟನೆ : ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಮಾಜಿ ಅಧ್ಯಕ್ಷೆ ಶ್ರೀಮತಿ ಮಂಜುಳಾ ಮಾನಸ, ಅಧ್ಯಕ್ಷತೆ : ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಶಾರದಾ ಶಿವಲಿಂಗಸ್ವಾಮಿ, ಸಹಾಯಕ ಪ್ರಾಧ್ಯಾಪಕಿ ಶ್ರೀಮತಿ ಜೆ. ಪುಷ್ಪಲತಾ ಅವರಿಂದ ಅಕ್ಕನ ಆಧ್ಯಾತ್ಮ ಚಿಂತನೆ ಕುರಿತು ಉಪನ್ಯಾಸ, ಕು. ಚೂಡಾಮಣಿ ಅವರಿಂದ ವಚನ ಗಾಯನ, ಸ್ಥಳ: ಶ್ರೀ ಹೊಸ ಮಠ, ಅಗ್ರಹಾರ.

■ **ವಾತ್ಸಲ್ಯ ಶಿಕ್ಷಣ ಮಹಾವಿದ್ಯಾಲಯ :** ಬಸವ ಜಯಂತಿ ಪ್ರಯುಕ್ತ ಗಿರೀಶ್ ಕಾರ್ನಾಡ್ ಅವರ ತಲೆದಂಡ ನಾಟಕ ಪ್ರದರ್ಶನ, ಸಾನ್ನಿಧ್ಯ : ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಉಪಸ್ಥಿತರು : ಕಾರ್ತಿಕ ಉಪಮನ್ಯು, ವಾತ್ಸಲ್ಯ ಶಿಕ್ಷಣ ಮಹಾವಿದ್ಯಾಲಯ ಪ್ರಾಂಶುಪಾಲ ಡಾ. ಮಹೇಶ್ ದಳಪತಿ, ಸ್ಥಳ: ಶ್ರೀ ನಟರಾಜ ಕಾಲೇಜು ಆವರಣ, ಸಂಜೆ 7ಕ್ಕೆ.

■ **ಶಾರದಾ ವಿಲಾಸ ಕಾಲೇಜು:** ಸಂಪ್ರತಿಭೋತ್ಸವದ ಸಮಾರೋಪ ಸಮಾರಂಭ, ಉದ್ಘಾಟನೆ: ಖ್ಯಾತ ಕೊಳಲು ವಾದಕ ವಿದ್ವಾನ್ ಡಾ.ಸಿ.ಎ.ಶ್ರೀಧರ್, ಗೌರವ ಅತಿಥಿಗಳು: ಎಸ್‌ವಿಇಐ ಅಧ್ಯಕ್ಷ ಡಾ. ಬಿ.ಎಂ.ಸುಬ್ರಾಯ, ಕಾರ್ಯದರ್ಶಿ ಎನ್.ಚಂದ್ರಶೇಖರ, ಅಧ್ಯಕ್ಷತೆ: ಶಾರದಾ ವಿಲಾಸ ಕಾಲೇಜು ಪ್ರಿನ್ಸಿಪಾಲ್ ಡಾ.ಎಂ.ದೇವಿಕ, ಸ್ಥಳ: ಶತಮಾನೋತ್ಸವ ಭವನ, ಶಾರದಾ ವಿಲಾಸ ಕಾಲೇಜು, ಬೆಳಗ್ಗೆ 10ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಬದುಕು ಬದಲಿಸಿದ ಶೋಧ–ಬಾನುಲಿ ಸರಣಿ, ಪ್ರಸ್ತುತಿ – ಎನ್.ಎನ್. ಸುರೇಂದ್ರನಾಥ್ ಸಾತ್ವಿಕ್, 6.40 ಪದ ಸಂಸ್ಕೃತಿ– ಟಿ.ಎಸ್. ಗೋಪಾಲ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 9.00 ವೃತ್ತಿ ಮಾರ್ಗದರ್ಶನ, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ–ಉಸ್ತಾದ್ ಬಡೇ ಗುಲಾಮ್ ಆಲಿಖಾನ್–ಹಾಡುಗಾರಿಕೆ, 11.00 ಮಿಶ್ರಮಾಧುರ್ಯ ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ–ಪುಟ್ಟನಿಂಗಮ್ಮ ಮತ್ತು ಸಂಗಡಿಗರಿಂದ ಗಂಗೆ ಗೌರಿ ಹಾಡು, 1.00 ಚಿತ್ರಗೀತೆಗಳು, 1.20 ಭಾವಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಎ. ಎಸ್. ಪದ್ಮ–ವೀಣಾವಾದನ, 4.00 ಮಹಿಳಾರಂಗ, 4.45 ಹಿಂದಿ ಪಾಠ, 6.50 ಕೃಷಿರಂಗ–ಸಾವಯವ ಸಂಪದ – ಸಾವಯವ ಕೃಷಿ ಬದುಕಿನ ಸಮಗ್ರ ಚಿತ್ರಣ ಕುರಿತ ಬಾನುಲಿ ಸರಣಿ–ಮಳೆ ನೀರಿನ ಸಂಗ್ರಹಣೆ ಹಾಗೂ ಸದ್ಬಳಕೆ ಈ ಕುರಿತು ಮೈಸೂರು ತಾಲೂಕು ನಾಗನಹಳ್ಳಿಯ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಕೃಷಿ ಅಧಿಕಾರಿ ಜಿ.ಕೆ. ಶಿಲ್ಪಾ ಅವರೊಂದಿಗೆ ಸಂದರ್ಶನ. ಸಂದರ್ಶಕರು– ಎನ್.ಕೇಶವಮೂರ್ತಿ, 8.00 ಕ್ಷಿತಿಜ–ಸಾಹಿತ್ಯ ಸಾಧಕರೊಂದಿಗೆ ಸಂವಾದ, 9.30 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ– ಪಂಡಿತ್ ಹರಿಪ್ರಸಾದ್ ಚೌರಾಸಿಯ – ಕೊಳಲುವಾದನ, 10.00 ಜನಪದ ಸಂಗೀತ – ಮೈಸೂರು ಜಿ. ಗುರುರಾಜ್ ಮತ್ತು ಸಂಗಡಿಗರಿಂದ ಬಿಳಿಗಿರಿ ರಂಗಸ್ವಾಮಿ ಹಾಡು, 10.30 ಸವಿನೆನಪು

ಮೈಸೂರಲ್ಲಿ ಅರ್ಧಕ್ಕೇ ನಿಂತ ವಿದ್ಯುತ್ ಯುಜಿ ಕೇಬಲ್ ಅಳವಡಿಕೆ ಯೋಜನೆ

ಅನುದಾನದ ಕೊರತೆಯಿಂದಾಗಿ ಉಳಿದ ಅರ್ಧ ಭಾಗದ ಕೇಬಲ್ ಅಳವಡಿಕೆ ಪ್ರಸ್ತಾವನೆಗೆ ಎಳ್ಳು-ನೀರು



● ಹಾಲಿ ಇರುವ ವಿದ್ಯುತ್ ಲೈನ್‌ನಿಂದ ಅಪಾಯ, ನಗರದ ಸೌಂದರ್ಯಕ್ಕೆ ಧಕ್ಕೆ ತಪ್ಪಿಸುವ ಸೆಸ್ಕ್ ಉದ್ದೇಶ ಸಫಲವಾಗಲಿಲ್ಲ ● 2018-19ರಲ್ಲಿ ಕೈಗೊಂಡಿದ್ದ 300 ಕೋಟಿ ರೂ. ಯೋಜನೆಯಲ್ಲಿ ಮೈಸೂರಿನ ಕೇಂದ್ರ, ಎನ್‌ಆರ್, ವಿವಿ ಮೊಹಲ್ಲಾ ಉಪವಿಭಾಗಗಳಲ್ಲಿ ಅರ್ಧಂಬರ್ಧ ಅನುಷ್ಠಾನ

ಗ್ರಾಹಕರಿಗೆ ಪುಕ್ಕಟೆ ವಿದ್ಯುತ್ ನೀಡುತ್ತಿರುವ ಸರ್ಕಾರವು, ಸುಧಾರಿತ ವಿದ್ಯುತ್ ಯೋಜನೆ ಜಾರಿಗೊಳಿಸಲು ಹಣದ ಕೊರತೆ ನೆಪ ಹೇಳಿ ಕೈಚೆಲ್ಲಿರುವುದರಿಂದಾಗಿ ಮೈಸೂರು ನಗರದಲ್ಲಿ ವಿದ್ಯುತ್ ಯುಜಿ ಕೇಬಲ್ ಅಳವಡಿಸುವ 2ನೇ ಹಂತದ ಯೋಜನೆ ನೆಲಕಚ್ಚಿದೆ.





ಮೈಸೂರು, ಮೇ 7(ಆರ್‌ಕೆ)- ವಿಜ್ಞಾನ-ತಂತ್ರಜ್ಞಾನ ಬೆಳೆದಂತೆ ಹೊಸ ಹೊಸ ಆವಿಷ್ಕಾರ, ಸಂಶೋಧನೆಗಳು ಅಭಿವೃದ್ಧಿಗೊಂಡ ಹಿನ್ನೆಲೆಯಲ್ಲಿ ನಾಗರಿಕ ಸೌಲಭ್ಯ ವಿಧಾನಗಳನ್ನೂ ಸರ್ಕಾರ ಆಧುನೀಕರಣಗೊಳಿಸುತ್ತಿದೆ.

ಈ ಹಿಂದೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ (ಕರ್ನಾಟಕ ಎಲೆಕ್ಟ್ರಿಸಿಟಿ ಬೋರ್ಡ್)ಯು ಕರ್ನಾಟಕ ರಾಜ್ಯದಾದ್ಯಂತ ಸಾಂಪ್ರದಾಯಿಕ ವಿಧಾನಗಳ ಮೂಲಕ ಜನವಸತಿ ಬಡಾವಣೆಗಳು, ಕೈಗಾರಿಕಾ ವಲಯ ಹಾಗೂ ವಾಣಿಜ್ಯ ವಹಿವಾಟುಗಳಿಗೆ ರಸ್ತೆಗಳಲ್ಲಿ ಟ್ರಾನ್ಸ್‌ಫಾರ್ಮರ್‌ಗಳು, ಫೀಡರ್ ಘಟಕಗಳನ್ನು ಅಳವಡಿಸಿ ವಿವಿಧ ಸಾಮರ್ಥ್ಯದ ತಂತಿಗಳ ಮೂಲಕ ತನ್ನ ಗ್ರಾಹಕರಿಗೆ ವಿದ್ಯುತ್ ವಿತರಿಸುತ್ತಿತ್ತು.

ಹೊರಭಾಗದಲ್ಲಿ ವಿದ್ಯುತ್ ಮಾರ್ಗ ಅಳವಡಿಸುವ ಹಳೇ ಪದ್ಧತಿಯಿಂದ ಮಳೆ-ಗಾಳಿ, ಸಿಡಿಲು-ಮಿಂಚಿನಿಂದ ಆಗಿಂದಾಗ್ಗೆ ವಿದ್ಯುತ್ ಸಂಪರ್ಕ ಕಡಿತಗೊಳ್ಳುವುದಲ್ಲದೇ, ಇಲಾಖೆಗೆ ಆಗಿಂದಾಗ್ಗೆ ಭಾರಿ ಪ್ರಮಾಣದ ನಷ್ಟ ಉಂಟಾಗುತ್ತಿತ್ತು ಹಾಗೂ ತಂತಿ ತುಂಡರಿಸಿ, ಟ್ರಾನ್ಸ್‌ಫಾರ್ಮರ್‌ಗಳು ಸ್ಫೋಟಿಸುವುದರಿಂದ ಜನ, ಜಾನುವಾರುಗಳ ಪ್ರಾಣಹಾನಿಯಾಗುತ್ತಿತ್ತು.

ಹೊರಭಾಗದಲ್ಲಿ ಭೌತಿಕವಾಗಿ ಅಳವಡಿಸುವ 11 ಕೆವಿ ಸಾಮರ್ಥ್ಯದ ಟ್ರಾನ್ಸ್‌ಫಾರ್ಮರ್‌ಗಳ ಮೂಲಕ 430 ವೋಲ್ಟೇಜ್ ಸಾಮರ್ಥ್ಯದ ವಿದ್ಯುತ್ ಅನ್ನು ಗ್ರಾಹಕರಿಗೆ ಪೂರೈಸುವ ವ್ಯವಸ್ಥೆಯಿಂದಾಗಿ ಅಲ್ಲಲ್ಲಿ ಕಂಬ, ತುಂಡರಿಸಿ ಜೋತು ಬೀಳುವ ತಂತಿಗಳು ನಗರದ ಸೌಂದರ್ಯಕ್ಕೆ ಧಕ್ಕೆಯುಂಟು ಮಾಡುತ್ತಿವೆ.

ಯುಜಿ ಕೇಬಲ್ ಯೋಜನೆ: ಕೆಇಬಿಯಿಂದ ವಿವಿಧ ವಿದ್ಯುತ್ ಸರಬರಾಜು ನಿಗಮ ಎಂದು ಬದಲಾದ ನಂತರ 2018-19ನೇ ಸಾಲಿನಲ್ಲಿ ಕೋವಿಡ್-19 ಆರಂಭಕ್ಕೂ ಮೊದಲು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಸೆಸ್ಕ್)ವು ಮೈಸೂರು ನಗರದಲ್ಲಿ ಯುಜಿ ಕೇಬಲ್ (ಅಂಡರ್‌ಗ್ರೌಂಡ್) ಅಳವಡಿಸುವ ಯೋಜನೆಗೆ ಡಿಪಿಆರ್ ತಯಾರಿಸಿ 300 ಕೋಟಿ ರೂ. ಅಂದಾಜು ವೆಚ್ಚದ ಕಾಮಗಾರಿಗೆ ಪ್ರಸ್ತಾವನೆ ಸಲ್ಲಿಸಿತ್ತು.

ಕೆಇಆರ್‌ಸಿ ಅನುಮೋದನೆ: ಅತ್ಯಾಧುನಿಕ ರೀತಿಯಲ್ಲಿ ಸುರಕ್ಷತಾ ಕ್ರಮದೊಂದಿಗೆ ಮೈಸೂರು ನಗರದ ಸೆಂಟ್ರಲ್ ಸಬ್ ಡಿವಿಷನ್, ಎನ್‌ಆರ್ ಮತ್ತು ವಿವಿ ಮೊಹಲ್ಲಾ ಉಪವಿಭಾಗಗಳ ಭಾಗಶಃ ಪ್ರದೇಶಗಳಲ್ಲಿ ಅಂಡರ್‌ಗ್ರೌಂಡ್ ಕೇಬಲ್ ಅಳವಡಿಸುವ ಸೆಸ್ಕ್ ಪ್ರಸ್ತಾವನೆಗೆ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ)ವು ಅನುಮೋದನೆ ನೀಡಿದ ಹಿನ್ನೆಲೆಯಲ್ಲಿ ಸರ್ಕಾರವು ಅನುದಾನ ಬಿಡುಗಡೆ ಮಾಡಿ ಕಾಮಗಾರಿ ಕೈಗೊಳ್ಳಲು ಗ್ರೀನ್ ಸಿಗ್ನಲ್ ಕೊಟ್ಟಿತ್ತು.

ಎರಡು ಏಜೆನ್ಸಿಗಳಿಗೆ ಕಾರ್ಯಾದೇಶ: 144.69 ಕಿ.ಮೀ. ಉದ್ದದ 400 ಸ್ಕ್ವೇರ್ ಎಂಎಂ ಸಾಮರ್ಥ್ಯದ ಕೇಬಲ್ ಹಾಗೂ 301.25 ಕಿ.ಮೀ. ಉದ್ದದ 244 ಸ್ಕ್ವೇರ್ ಎಂಎಂ ಸಾಮರ್ಥ್ಯದ 301.25 ಕಿ.ಮೀ. ಉದ್ದದ ಅಂಡರ್‌ಗ್ರೌಂಡ್ ವಿದ್ಯುತ್ ಕೇಬಲ್ ಅಳವಡಿಸಲು ಎಲ್ ಅಂಡ್ ಟಿ ಮತ್ತು ಬೆಂಗಳೂರು ಮೂಲದ ಏಷಿಯನ್ ಫ್ಯಾಬ್‌ಟೆಕ್ ಕಂಪನಿಗಳಿಗೆ ಟೆಂಡರ್ ಮೂಲಕ ಕಾಮಗಾರಿಯನ್ನು ನಿಗಮವು ಒಪ್ಪಿಸಿ ಕಾರ್ಯಾದೇಶ ನೀಡಿತ್ತು.


ಸೆಂಟ್ರಲ್ ಉಪವಿಭಾಗದ ವ್ಯಾಪ್ತಿಯ ಮೈಸೂರು ಅರಮನೆ ಸುತ್ತಲಿನ ಪ್ರದೇಶ ಹಾಗೂ ಇದಕ್ಕೆ ಹೊಂದಿಕೊಂಡಂತಿರುವ ಹಳೇ ವಸತಿ ಬಡಾವಣೆ, ವಾಣಿಜ್ಯ ಕೇಂದ್ರಗಳು, ಎನ್‌ಆರ್ ಉಪವಿಭಾಗದ ಎನ್‌ಆರ್ ಮೊಹಲ್ಲಾ, ರಾಜೇಂದ್ರನಗರ, ವಿವಿ ಮೊಹಲ್ಲಾ ಉಪವಿಭಾಗದ ಕೆಲ ಪ್ರಮುಖ ರಸ್ತೆಗಳಲ್ಲಿ ನೆಲ ಅಗೆದು ಕೇಬಲ್ ಅಳವಡಿಸಿ ಗ್ರಾಹಕರಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿದ ಗುತ್ತಿಗೆದಾರ ಕಂಪನಿಗಳು ತಮ್ಮ ಪಾಲಿನ ಹಣ ಪಡೆದುಕೊಂಡವು.

ಈ ಯೋಜನೆಯಿಂದ ಮೈಸೂರು ನಗರದ ಶೇ.30ರಷ್ಟು ಭಾಗಕ್ಕೆ ಮಾತ್ರ ಯುಜಿ ಕೇಬಲ್‌ನಿಂದ ವಿದ್ಯುತ್ ಸಂಪರ್ಕ ಕಲ್ಪಿಸಿದಂತಾಗಿದ್ದು, ಕಾಮಗಾರಿಗೆ 300 ಕೋಟಿ ರೂ.ಗಳನ್ನು ಸೆಸ್ಕ್ ಖರ್ಚು ಮಾಡಿದೆ.

ಸಂಪನ್ಮೂಲದ ಕೊರತೆ: ರಿಂಗ್ ರಸ್ತೆ ಒಳಭಾಗದ ಪಾಲಿಕೆ ವ್ಯಾಪ್ತಿಯ ಉಳಿದ ಶೇ.70ರಷ್ಟು ವಸತಿ, ವಾಣಿಜ್ಯ, ಕೈಗಾರಿಕಾ ಪ್ರದೇಶಗಳಿಗೂ ಯುಜಿ ಕೇಬಲ್ ಅಳವಡಿಸುವ 2ನೇ ಹಂತದ ಯೋಜನೆಗೆ 600 ಕೋಟಿ ರೂ. ವೆಚ್ಚದ ಡಿಪಿಆರ್ ತಯಾರಿಸಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮವು ಕಳೆದ 8 ತಿಂಗಳ ಹಿಂದೆಯೇ ಪ್ರಸ್ತಾವನೆ ಸಲ್ಲಿಸಿದೆಯಾದರೂ, ಆರ್ಥಿಕ ಸಂಪನ್ಮೂಲದ ಕೊರತೆ ಕಾರಣ ಹೇಳಿ ಕೆಇಆರ್‌ಸಿಯು ಅನುಮೋದನೆ ನೀಡದೇ ಕಡತವನ್ನು ಹಾಗೆಯೇ ಇರಿಸಿಕೊಂಡಿದೆ.

ಮಳೆ-ಗಾಳಿಯಿಂದ ಹಾನಿ: ಮೊನ್ನೆಯಷ್ಟೇ ಮೈಸೂರಿನಲ್ಲಿ ಬೀಸಿದ ಬಿರುಗಾಳಿ, ಸಿಡಿಲು-ಮಿಂಚಿನಿಂದ ನಗರದಾದ್ಯಂತ ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟು ಹೋಗಿ ವಿದ್ಯುತ್ ಕಂಬಗಳು ಮುರಿದು ಬಿದ್ದವಲ್ಲದೆ, ತಂತಿಗಳು ತುಂಡರಿಸಿದ್ದವು. ಕೇವಲ 1 ಗಂಟೆಯ ಭಾರಿ ಗಾಳಿಯಿಂದ ಮೈಸೂರು ನಗರ ಮತ್ತು ಜಿಲ್ಲೆಯಲ್ಲಿ ಚೆಸ್ಕಾಂಗೆ 80 ಲಕ್ಷ ರೂ. ನಷ್ಟ ಉಂಟಾಗಿತ್ತು. ಆಗಿಂದಾಗ್ಗೆ ವಿದ್ಯುತ್ ಕಡಿತ, ಅವಘಡದಿಂದ ಪ್ರಾಣಾಪಾಯವಾಗುವುದು, ನಷ್ಟ ಸಂಭವಿಸುವುದು, ನಗರದ ಸೌಂದರ್ಯ ಹಾಳು ಮಾಡುವ ಹಳೇ ಪದ್ಧತಿಗೆ ತಿಲಾಂಜಲಿ ಹೇಳಿ, ಹೆಚ್ಚು ಸುರಕ್ಷಿತವಾದ ಯುಜಿ ಕೇಬಲ್ ವ್ಯವಸ್ಥೆಗೆ ಒಂದು ಬಾರಿ ಹೂಡಿಕೆ (One Time Investment) ಮಾಡಿದಲ್ಲಿ ನಿರ್ವಹಣಾ ವೆಚ್ಚ ಮತ್ತು ನಷ್ಟವನ್ನು ತಡೆಗಟ್ಟಬಹುದು ಎಂಬುದು ವಿದ್ಯುತ್ ಗ್ರಾಹಕರ ಅಭಿಪ್ರಾಯವಾಗಿದೆ.

ಕ್ಲಿಯರ್ ಮೆಡಿ ರೇಡಿಯಂಟ್ ಆಸ್ಪತ್ರೆಯಲ್ಲಿ ಯಶಸ್ವಿ ಶಸ್ತ್ರಚಿಕಿತ್ಸೆ



ಮೈಸೂರು, ಮೇ 7(ಬಿಎಲ್‌ಯು)- ಮೈಸೂರಿನ ವಿಜಯನಗರದಲ್ಲಿರುವ ಕ್ಲಿಯರ್ ಮೆಡಿ ರೇಡಿಯಂಟ್ ಆಸ್ಪತ್ರೆಯಲ್ಲಿ ಮಹಿಳೆಯೊಬ್ಬರಲ್ಲಿ ಕಾಣಿಸಿಕೊಂಡಿದ್ದ ಲಿವರ್ ಕ್ಯಾನ್ಸರ್‌ಗೆ ಅತ್ಯಾಧುನಿಕ ತ್ರಿಡಿ ಲ್ಯಾಪ್ರೋಸ್ಕೋಪಿ ತಂತ್ರಜ್ಞಾನದ ಮೂಲಕ ಯಶಸ್ವಿ ಶಸ್ತ್ರಚಿಕಿತ್ಸೆ ನಡೆಸಲಾಗಿದೆ ಎಂದು ಆಸ್ಪತ್ರೆಯ ಸರ್ಜಿಕಲ್ ಅಂಕೊಲಜಿ ವಿಭಾಗದ ಸಲಹೆಗಾರ ಡಾ.ಎಲ್.ನಿಶ್ಚಲ್‌ರಾಜ್ ತಿಳಿಸಿದ್ದಾರೆ.

ಆಸ್ಪತ್ರೆಯಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಶಸ್ತ್ರಚಿಕಿತ್ಸೆ ಬಗ್ಗೆ ವಿವರ ನೀಡಿದ ಅವರು, ಸುಮಾರು ಹತ್ತು ಗಂಟೆಗಳ ಶಸ್ತ್ರಚಿಕಿತ್ಸೆ ಸಮಯದಲ್ಲಿ ಅತ್ಯಾಧುನಿಕ ತಂತ್ರಜ್ಞಾನ ಬಳಸಿಕೊಂಡು ಒಂದೂವರೆ ಕೆ.ಜಿ.ತೂಕದ ಗೆಡ್ಡೆಯನ್ನು ಹೊರ ತೆಗೆಯಲಾಗಿದೆ ಎಂದು ಹೇಳಿದರು.

ಆಸ್ಪತ್ರೆಯ ವೈದ್ಯರಾದ ಡಾ.ಅದ್ನಾನ್ ಸಯ್ಯದ್, ಡಾ.ಸದೀಶ್, ಮುಖ್ಯ ಅರವಳಿಕೆ ತಜ್ಞೆ ಡಾ.ಜ್ಯೋತಿ ಸೇರಿದಂತೆ ನಾವೆಲ್ಲಾ ಯಶಸ್ವಿ ಶಸ್ತ್ರಚಿಕಿತ್ಸೆ ನಡೆಸಿದ್ದೇವೆ ಎಂದು ಹೇಳಿದರು.

74 ವರ್ಷದ ಮಹಿಳೆಯಲ್ಲಿ ಕಾಣಿಸಿಕೊಂಡಿದ್ದ ಅಪರೂಪದ ಖಾಯಿಲೆಗೆ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. ಮಹಿಳೆ ಕೇವಲ ಒಂದು ವಾರದಲ್ಲಿ ಚೇತರಿಸಿಕೊಂಡಿದ್ದು, ಈಗ ತಮ್ಮ ದೈನಂದಿನ ಕೆಲಸ ಕಾರ್ಯಗಳಲ್ಲಿ ತೊಡಗಿದ್ದಾರೆ ಎಂದರು. ಆಸ್ಪತ್ರೆಯ ನಿರ್ದೇಶಕ ನಾಗೇಶ್ ಶಿಂಧೆ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮೈಸೂರಿನ ಯೇಸುರಾಜ್ ಕುಕ್ಕೆ ದೇವಳದ ಎಇಓ



ಮೈಸೂರು, ಮೇ 7(ಆರ್‌ಕೆ)- ಮೈಸೂರಿನ ಮುಜರಾಯಿ ತಹಶೀಲ್ದಾರ್ ಕಚೇರಿಯಲ್ಲಿ ಸೇವೆ ಸಲ್ಲಿಸುತ್ತಿದ್ದ ಯೇಸುರಾಜ್ ಅವರನ್ನು ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಸಹಾಯಕ ಕಾರ್ಯನಿರ್ವಹಣಾಧಿಕಾರಿಯಾಗಿ ನಿಯೋಜಿಸಲಾಗಿದೆ. ಮೇ 2ರಂದು ಯೇಸುರಾಜ್ ದೇವಸ್ಥಾನದ ಪ್ರಭಾರ ಎಇಓ ಪರಮೇಶ ಅವರಿಂದ ಅಧಿಕಾರ ವಹಿಸಿಕೊಂಡರು. ಕಾರ್ಯನಿರ್ವಹಣಾಧಿಕಾರಿ ಡಾ.ನಿಂಗಯ್ಯ, ಕಚೇರಿ ಅಧೀಕ್ಷಕ ಪದ್ಮನಾಭ ಶೆಟ್ಟಿಗಾರ್, ಇಂಜಿನಿಯರ್ ಉದಯಕುಮಾರ್, ಶಿಷ್ಟಾಚಾರ ಅಧಿಕಾರಿ ಜಯರಾಮ ರಾವ್, ಎಸ್.ಮಹೇಶ್‌ಕುಮಾರ್ ಹಾಗೂ ಇತರರು ಈ ಸಂದರ್ಭ ಉಪಸ್ಥಿತರಿದ್ದರು.

ಹೊರಗೆ ಹೋದ ವ್ಯಕ್ತಿ ನಾಪತ್ತೆ

ಮೈಸೂರು, ಮೇ 7-ಕೆಲಸದ ನಿಮಿತ್ತ ಮನೆಯಿಂದ ಹೋದವರು ಮನೆಗೆ ಹಿಂದಿರುಗದೆ ಕಾಣೆಯಾಗಿರುವ ಪ್ರಕರಣ ಕೆ.ಆರ್.ಠಾಣೆಯಲ್ಲಿ ದಾಖಲಾಗಿದೆ.

ಶ್ರೀನಿವಾಸ್(50) ಕಾಣೆಯಾದವರು. 2023ರ ನವೆಂಬರ್ ತಿಂಗಳಿನಲ್ಲಿ ಮನೆಯಿಂದ ಕೆಲಸದ ನಿಮಿತ್ತ ತೆರಳಿದ್ದು, 2024ರ ಮಾ.19ರಂದು ಕರೆ ಮಾಡಿ ನನಗೆ ವ್ಯವಹಾರವಿದೆ. ಮುಗಿಸಿಕೊಂಡು ಬರುತ್ತೇನೆ. ನೀವು ಕರೆ ಮಾಡಬೇಡಿ ಎಂದು ತಿಳಿಸಿ, ಇಷ್ಟು ದಿನಗಳಾದರು ಮನೆಗೆ ಹಿಂದಿರುಗಿಲ್ಲ ಎಂದು ಶ್ರೀನಿವಾಸ್ ಅವರ ಪತ್ನಿ ಛಾಯಾದೇವಿ ಕೆ.ಆರ್.ಠಾಣೆಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಶ್ರೀನಿವಾಸ್ ಅವರ ಬಗ್ಗೆ ಮಾಹಿತಿ ತಿಳಿದು ಬಂದಲ್ಲಿ 0821-2418319, 2418519 ಸಂಪರ್ಕಿಸಿ ಎಂದು ಪೊಲೀಸ್ ಪ್ರಕಟಣೆ ತಿಳಿಸಿದೆ.

ಡಿಟಿಪಿ, ಟ್ಯಾಲಿ ಪ್ರೈಮ್ ಕಾರ್ಯಾಗಾರ

ಮೈಸೂರು,ಮೇ 7-ರಾಮಕೃಷ್ಣನಗರದ ಎಸ್‌ಎಸ್‌ಐಟಿ ಸಲ್ಯೂಷನ್ಸ್ ತರಬೇತಿ ಸಂಸ್ಥೆಯು ಡಿಟಿಪಿ ಹಾಗೂ ಟ್ಯಾಲಿ ಪ್ರೈಮ್ ಕಾರ್ಯಾಗಾರವನ್ನು ಆಯೋಜಿಸಿದೆ. 40 ದಿನಗಳ ಈ ಕಾರ್ಯಾಗಾರದಲ್ಲಿ ನುರಿತ ಉಪನ್ಯಾಸಕರಿಂದ ಸಂಬಂಧಿಸಿದ ತರಬೇತಿಯ ಬಗ್ಗೆ ಪ್ರಾಯೋಗಿಕ ತರಗತಿಗಳನ್ನು ಕಲಿಸಲಾಗುತ್ತದೆ. ಎಸ್‌ಎಸ್‌ಎಲ್‌ಸಿ ನಂತರದ ವಿದ್ಯಾಭ್ಯಾಸ ಮುಗಿಸಿರುವ ಎಲ್ಲಾ ವರ್ಗದ ಆಸಕ್ತರೂ ಈ ಶಿಬಿರದ ಫಲಾನುಭವಿಗಳಾಗಿರುತ್ತಾರೆ. ಗೃಹಿಣಿಯರಿಗೆ, ಉದ್ಯೋಗಸ್ಥರಿಗೆ, ಹಿರಿಯ ನಾಗರಿಕರಿಗೆ ವಿಶೇಷ ಸಮಯಾವಕಾಶ ದೊರೆಯಲಿದೆ. ಆಸಕ್ತರು ಅರ್ಜಿಗಳಿಗಾಗಿ ಮತ್ತು ಮಾಹಿತಿಗಾಗಿ 9964790442 / 8310306882 ಸಂಪರ್ಕಿಸಬಹುದಾಗಿದೆ.

ದಾಖಲೆಯ 5ನೇ ಬಾರಿ ರಷ್ಯಾ ಅಧ್ಯಕ್ಷರಾಗಿ ವ್ಲಾಡಿಮಿರ್ ಪುಟಿನ್ ಅಧಿಕಾರ ಸ್ವೀಕಾರ

ಕ್ರೆಮ್ಲಿನ್, ಮೇ 7- ಮುಂದಿನ 6 ವರ್ಷಗಳ ಅವಧಿಗೆ ರಷ್ಯಾ ಅಧ್ಯಕ್ಷರಾಗಿ ವ್ಲಾಡಿಮಿರ್ ಪುಟಿನ್ ಮಂಗಳವಾರ ಪ್ರಮಾಣ ವಚನ ಸ್ವೀಕರಿಸಿದರು.

ಕ್ರೆಮ್ಲಿನ್‌ನಲ್ಲಿ ನಡೆದ ಉದ್ಘಾಟನಾ ಸಮಾರಂಭದಲ್ಲಿ ದಾಖಲೆಯ ಐದನೇ ಬಾರಿಗೆ ರಷ್ಯಾ ಅಧ್ಯಕ್ಷರಾಗಿ ವ್ಲಾಡಿಮಿರ್ ಪುಟಿನ್ ಪ್ರಮಾಣ ವಚನ ಸ್ವೀಕರಿಸಿದರು.

ಪುಟಿನ್ ಅವರು ಮುಂದಿನ ಆರು ವರ್ಷಗಳ ಹೊಸ ಅವಧಿಗೆ ರಷ್ಯಾ ಅಧ್ಯಕ್ಷರಾಗಿ ಔಪಚಾರಿಕವಾಗಿ ಅಧಿಕಾರ ಸ್ವೀಕರಿಸಿದರು ಎಂದು ಸಾಂವಿಧಾನಿಕ ನ್ಯಾಯಾಲಯದ ಅಧ್ಯಕ್ಷ ವ್ಯಾಲೆರಿ ಜೋರ್ಕಿನ್ ಘೋಷಿಸಿರುವುದಾಗಿ TASS ವರದಿ ಮಾಡಿದೆ. ಪುಟಿನ್ ಪ್ರಮಾಣವಚನ ಸ್ವೀಕರಿಸಿದ ನಂತರ, ಜೋರ್ಕಿನ್ ಅವರು ಪುಟಿನ್ ಅವರಿಗೆ ಅಧ್ಯಕ್ಷೀಯ ಅಧಿಕಾರದ ಚಿಹ್ನೆಯನ್ನು ಹಸ್ತಾಂತರಿಸಿದರು. ಪ್ರಮಾಣ ವಚನ ಸ್ವೀಕಾರ ಸಮಾರಂಭದ ನಂತರ ರಾಜ್ಯ ಮುಖ್ಯಸ್ಥರು ಭಾಷಣ ಮಾಡಿದರು. 1999ರಿಂದ ವ್ಲಾಡಿಮಿರ್ ಪುಟಿನ್ ರಷ್ಯಾದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇದೀಗ ಮತ್ತೆ ರಷ್ಯಾ ಅಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ. ರಷ್ಯಾದ ಮಾಜಿ ಅಧ್ಯಕ್ಷ ಸ್ಟಾಲಿನ್ ಬಳಿಕದಲ್ಲಿ ಪುಟಿನ್ ದೇಶದ ದೀರ್ಘಾವಧಿ ಅಧ್ಯಕ್ಷರೆನಿಸಿಕೊಂಡಿದ್ದಾರೆ.



ಎನ್‌ಕೌಂಟರ್‌ನಲ್ಲಿ ಇಬ್ಬರು ಉಗ್ರರ ಹತ್ಯೆ!

ಕುಲ್ಗಾಂ, ಮೇ 7- ಕೇಂದ್ರಾಡಳಿತ ಪ್ರದೇಶ ಜಮ್ಮು ಮತ್ತು ಕಾಶ್ಮೀರದ ಕುಲ್ಗಾಂನ ರೆಡ್ವಾನಿ ಪಯೀನ್ ಪ್ರದೇಶದಲ್ಲಿ ಮಂಗಳವಾರ ಭದ್ರತಾ ಪಡೆಗಳು ನಡೆಸಿದ ಎನ್‌ಕೌಂಟರ್‌ನಲ್ಲಿ ಇಬ್ಬರು ಭಯೋತ್ಪಾದಕರು ಹತರಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಾಶ್ಮೀರ ವಲಯ ಪೊಲೀಸರು ಇದನ್ನು ಖಚಿತಪಡಿಸಿದಂತೆ ಉಗ್ರರ ಶವಗಳನ್ನು ವಶಪಡಿಸಿಕೊಳ್ಳಲಾಗಿದೆ. ಅವರ ಗುರುತು ಇನ್ನೂ ಪತ್ತೆಯಾಗಿಲ್ಲ.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಮಾಹಿತಿ ನೀಡಿರುವ ಕಾಶ್ಮೀರ ವಲಯ ಪೊಲೀಸರು, ಉಗ್ರರ ವಿರುದ್ಧದ ಕಾರ್ಯಾಚರಣೆಯಲ್ಲಿ ಇಲ್ಲಿವರೆಗೂ ಇಬ್ಬರು ಉಗ್ರರ ಮೃತದೇಹಗಳನ್ನು ವಶಕ್ಕೆ ಪಡೆಯಲಾಗಿದೆ. ಗುರುತನ್ನು ಇನ್ನೂ ಪತ್ತೆ ಹಚ್ಚಬೇಕಾಗಿದೆ. ಹೆಚ್ಚಿನ ವಿವರ ತಿಳಿದುಬರಬೇಕಾಗಿದೆ ಎಂದು ಹೇಳಿದ್ದಾರೆ.

ದಕ್ಷಿಣ ಕಾಶ್ಮೀರದ ಕುಲ್ಗಾಂನ ರೆಡ್ವಾನಿ ಪಯೀನ್ ಪ್ರದೇಶದಲ್ಲಿ ಉಗ್ರರು ಮತ್ತು ಭದ್ರತಾ ಪಡೆಗಳ ನಡುವೆ ತೀವ್ರ ಗುಂಡಿನ ಚಕಮಕಿ ನಡೆದಿದೆ. ಆದಾಗ್ಯೂ, ಪೂಂಚ್ ದಾಳಿ ಹಿಂದಿರುವ ಉಗ್ರರು ಗುಂಡಿನ ದಾಳಿಯಲ್ಲಿ ತೊಡಗಿರುವರೇ ಎಂಬುದರ ಬಗ್ಗೆ ಯಾವುದೇ ಖಚಿತ ಮಾಹಿತಿ ತಿಳಿದುಬಂದಿಲ್ಲ. ಮೇ 4ರಂದು ಜಮ್ಮು-ಕಾಶ್ಮೀರದ ಪೂಂಚ್ ಜಿಲ್ಲೆಯಲ್ಲಿ ಗಡಿಯಾಚೆಯಿಂದ ಬಂದ ಶಂಕಿತ ಉಗ್ರರು ಭಾರತೀಯ ವಾಯು ಪಡೆ ಬೆಂಗಾವಲು ಪಡೆಯನ್ನು ಗುರಿಯಾಗಿಸಿಕೊಂಡು ನಡೆಸಿದ ದಾಳಿಯಲ್ಲಿ ಇಬ್ಬರು ಅಧಿಕಾರಿಗಳು ಸಾವನ್ನಪ್ಪಿದ್ದರು.

ಬಣ್ಣ ಬಣ್ಣದ ಓಕುಳಿಯಲ್ಲಿ ಮಿಂದೆದ್ದ ಚಿಣ್ಣರು; ಬೇಸಿಗೆ ತಾಪದಲ್ಲಿ ತಂಪಿನ ಸಿಂಚನ!



ರಂಗಾಯಣದ ಆವರಣದಲ್ಲಿ ಚಿಣ್ಣರ ಮೇಳ ಸಮಾರೋಪ ಪ್ರಯುಕ್ತ ಶಿಬಿರದ ಮಕ್ಕಳು ಬಣ್ಣದ ಓಕುಳಿ ಆಡಿ ಸಂಭ್ರಮಿಸಿದರು.

ರಂಗಾಯಣದ ಚಿಣ್ಣರ ಮೇಳಕ್ಕೆ ವರ್ಣರಂಜಿತ ತೆರೆ



ಸಭಾ ಕಾರ್ಯಕ್ರಮದಲ್ಲಿ ನಿರ್ದೇಶಕ ಶಶಾಂಕ್ ಸೊಗಲ್ ಮಾತನಾಡುತ್ತಿರುವುದು. ಚಿತ್ರದಲ್ಲಿ ಚಾಮರಾಜನಗರದ ಧೀನಬಂಧು ಟ್ರಸ್ಟ್ ಸಂಸ್ಥಾಪಕ ಪ್ರೊ.ಜಯದೇವ, ರಂಗಾಯಣದ ಉಪ ನಿರ್ದೇಶಕಿ ನಿರ್ಮಲಾ ಮಠಪತಿ, ಕನ್ನಡ-ಸಂಸ್ಕೃತಿ ಇಲಾಖೆಯ ನಿರ್ದೇಶಕಿ ಡಾ.ಕೆ.ಧರಣಿದೇವಿ ಮಾಲಗತ್ತಿ ಇನ್ನಿತರರಿದ್ದಾರೆ.

ಮೈಸೂರು, ಮೇ 7(ಪಿಎಂ)- ಬಗೆಬಗೆ ಬಣ್ಣಗಳ ಓಕುಳಿಯಲ್ಲಿ ಮಿಂದೆದ್ದ ಚಿಣ್ಣರು, ಬಣ್ಣದ ನೀರಿನಲ್ಲಿ ಮುಳುಗೆದ್ದು ನಲಿದಾಡಿದರು.

ಪರಸ್ಪರ ಬಣ್ಣ ಎರಚಾಡಿ ಉತ್ಸಾಹ ಮೆರೆದರು. ಇದನ್ನು ಕಣ್ತುಂಬಿಕೊಳ್ಳುತ್ತಿದ್ದ ಪೋಷಕರಿಗೂ ಅವರ ಮಕ್ಕಳಿಂದ ಬಣ್ಣದ ನೀರಿನ ಮಜ್ಜನವಾಯಿತು!

ಹೀಗೆ ಆ ಇಡೀ ಆವರಣದಲ್ಲಿ ಬೇಸಿಗೆಯ ತಾಪವೂ ದೂರವಾಗಿ ತಂಪಿನ ಸಿಂಚನ ಉಂಟಾಯಿತು!!

ಮೈಸೂರಿನ ರಂಗಾಯಣದ ಆವರಣದಲ್ಲಿ ಮಂಗಳವಾರ ಕಂಡ ಸಂಭ್ರಮದ ಚಿತ್ರಣವಿದು. ಆ ಮೂಲಕ ಮೈಸೂರು ರಂಗಾಯಣವು 'ಸಮರಸವೇ ಜೀವನ' ಶೀರ್ಷಿಕೆಯಡಿ ಹಮ್ಮಿಕೊಂಡಿದ್ದ ಚಿಣ್ಣರ ಮೇಳ-2024ಕ್ಕೆ (ಮಕ್ಕಳ ರಂಗ ತರಬೇತಿ ಶಿಬಿರ) ವರ್ಣರಂಜಿತ ತೆರೆ ಬಿದ್ದಿತು.

ಇದಕ್ಕೂ ಮುನ್ನ ರಂಗಾಯಣದ ವನರಂಗದಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ರಂಗಕರ್ಮಿ, ಚಲನಚಿತ್ರರಂಗದ ಯುವ ನಿರ್ದೇಶಕ ಶಶಾಂಕ್ ಸೊಗಲ್ ಸಮಾರೋಪ ನುಡಿಗಳನ್ನಾಡಿದರು.

ಇದೇ ಚಿಣ್ಣರ ಮೇಳದಲ್ಲಿ ಆರೇಳು ವರ್ಷ ನಿರಂತರವಾಗಿ ಭಾಗವಹಿಸಿದ್ದೆ. ಇದರಿಂದ ನಾನು ಸಾಕಷ್ಟು ಕಲಿಯಲು ಸಾಧ್ಯವಾಯಿತು. ನನ್ನ ಬಾಲ್ಯದ ದೊಡ್ಡ ಭಾಗ ಈ ಚಿಣ್ಣರ ಮೇಳ. ನನ್ನ ವ್ಯಕ್ತಿತ್ವ ರೂಪಿಸುವಲ್ಲಿ ಚಿಣ್ಣರ ಮೇಳದ ಪಾತ್ರ ಮಹತ್ವದ್ದು ಎಂದು ಸ್ಮರಿಸಿದರು.

ತಮ್ಮ ನಿರ್ದೇಶನದ 'ಡೇರ್ ಡೆವಿಲ್ ಮುಸ್ತಾಫಾ' ಸಿನಿಮಾ ನೋಡಿದ್ದೀರಾ ಮಕ್ಕಳೇ' ಎಂದು ಕೇಳಿದ ಅವರು, ಇದು ಮಕ್ಕಳ ನೆಚ್ಚಿನ ಸಿನಿಮಾ ಎಂದರಲ್ಲದೆ, ಈ ಚಿತ್ರದ 'ಒಂದು ತೋಟದಲ್ಲಿ ನೂರು ಹೂವು ಅರಳಲಿ... ಎಲ್ಲಾ ಕೂಡಿ ಆಡುವಂತ ಗಾಳಿ ಬೀಸಲಿ...' ಗೀತೆಯನ್ನು ಹಾಡಿ ರಂಜಿಸಿ, ಶಿಬಿರದ ಮಕ್ಕಳಿಂದಲೂ ಹಾಡಿಸಿ ಅವರಲ್ಲಿ ಉತ್ಸಾಹ ತುಂಬಿ, ಸಾಮರಸ್ಯದ ಸಂದೇಶ ಸಾರಿದರು.

ಬಳಿಕ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಚಾಮರಾಜನಗರದ ಧೀನಬಂಧು ಟ್ರಸ್ಟ್ ಸಂಸ್ಥಾಪಕ ಪ್ರೊ.ಜಯದೇವ ಮಾತನಾಡಿ, ಚಿಣ್ಣರ ಮೇಳದಲ್ಲಿ ಸ್ನೇಹ ಕಲಿತಿದ್ದೀರಿ ಅಲ್ಲವೇ? ಎಂದು ಮಕ್ಕಳನ್ನು ಉದ್ದೇಶಿಸಿ ಕೇಳಿದರು. ಸ್ನೇಹ ಎಂದರೆ ಪರಸ್ಪರ ಪ್ರೀತಿಸುವುದು, ಅರ್ಥ ಮಾಡಿಕೊಳ್ಳುವುದು ಹಾಗೂ ಗೌರವಿಸುವುದಾಗಿದೆ ಎಂದರು.

ನಮ್ಮ ಮನಸ್ಸು-ಮೆದುಳಿನಲ್ಲಿ ಇನ್ನೊಬ್ಬರಿಗೆ ಸಹಾನುಭೂತಿ ತೋರಿಸುವಂತಹ ಒಂದು ಸಾಮರ್ಥ್ಯ ಇರುತ್ತದೆ. ಸಹಾನುಭೂತಿ ಎಂದರೆ ಮತ್ತೊಬ್ಬರು ಕಷ್ಟ ಮತ್ತು ದುಃಖದಲ್ಲಿದ್ದರೆ ಅವರಿಗೆ ಸ್ಪಂದಿಸುವುದಾಗಿದೆ. ಸಾಮಾನ್ಯವಾಗಿ ಶಾಲೆಯಲ್ಲಿ ಇದನ್ನು ಕಲಿಯಲು ಬಹುತೇಕ ಸಂದರ್ಭದಲ್ಲಿ ಸಾಧ್ಯವಿಲ್ಲ. ಹಲವು ವಿಷಯಗಳ ಸಂಬಂಧ ಅಧ್ಯಯನ ಮಾಡಿ ಕಲಿಯುತ್ತೀರಿ. ಶಾಲಾ ತರಗತಿಯಲ್ಲಿ ಮತ್ತೊಬ್ಬರಿಗಿಂತ ಹೆಚ್ಚು ಓದಬೇಕು ಎಂಬ ಸ್ಪರ್ಧಾತ್ಮಕ ಮನೋಭಾವ ಇರುತ್ತದೆ. ಆದರೆ ರಂಗಾಯಣದ ಈ ಶಿಬಿರದಲ್ಲಿ ಅದಕ್ಕೆ ಹೊರತಾದ ಬದುಕಿನ ಪಾಠ ಕಲಿಯಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಇದಕ್ಕೂ ಮುನ್ನ ಪ್ರಾಸ್ತಾವಿಕವಾಗಿ ಮಾತನಾಡಿದ ರಂಗಾಯಣದ ಉಪ ನಿರ್ದೇಶಕಿ ನಿರ್ಮಲಾ ಮಠಪತಿ, ರಂಗಾಯಣದಲ್ಲಿ ಕಳೆದ 25 ವರ್ಷಗಳಿಂದ ಚಿಣ್ಣರ ಮೇಳ ಆಯೋಜಿಸುತ್ತಾ ಬರಲಾಗಿದೆ. ಇಂದು ಶಿಬಿರದಲ್ಲಿ ಪಾಲ್ಗೊಂಡಿರುವ ಮಕ್ಕಳ ಪೋಷಕರಲ್ಲಿ ಹಲವರು ಆರಂಭದ ಚಿಣ್ಣರ ಮೇಳದಲ್ಲಿ ಭಾಗವಹಿಸಿದ್ದವರೇ. ಅಂದಿನಿಂದ ಇಂದಿನವರೆಗೂ ಚಿಣ್ಣರ ಮೇಳಕ್ಕೆ ಬೇಡಿಕೆ ಕುಗ್ಗಿಲ್ಲ. ಮಕ್ಕಳ ರಂಗಭೂಮಿಯನ್ನು ಪ್ರಧಾನವಾಗಿ ಇಟ್ಟುಕೊಂಡು ಚಿಣ್ಣರ ಮೇಳ ಆಯೋಜಿಸುತ್ತಾ ಬರಲಾಗಿದೆ. ಈ ಸಾಲಿನ ಶಿಬಿರದಲ್ಲಿ 320 ಮಕ್ಕಳು ಪಾಲ್ಗೊಂಡಿದ್ದರು. ಶಿಬಿರದ 25 ದಿನಗಳ ಅವಧಿಯಲ್ಲಿ ಮಕ್ಕಳಲ್ಲಿ ಸಕಾರಾತ್ಮಕ ಬದಲಾವಣೆ ಉಂಟಾಗಿದೆ. ಅವರಲ್ಲಿ ರಂಗಭೂಮಿ ಚಟುವಟಿಕೆಯ ಬೀಜ ಬಿತ್ತಲಾಗಿದೆ ಎಂದು ಹೇಳಿದರು.

ಶಿಬಿರಾರ್ಥಿಗಳಾದ ಪರೀಕ್ಷಿತ್, ಅಭಿಲಾಷ, ಶಿಬಿರಾರ್ಥಿಗಳ ಪೋಷಕರಾದ ಡಾ.ಪ್ರಿಯಾಂಕ, ವಿಶ್ವಆರಾಧ್ಯ ಶಿಬಿರದ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕಿ ಡಾ.ಕೆ.ಧರಣಿದೇವಿ ಮಾಲಗತ್ತಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶಿಬಿರದ ಸಂಚಾಲಕಿ ಗೀತಾ ಮೊಂಟಡ್ಕ ಸೇರಿದಂತೆ ಮತ್ತಿತರರು ಹಾಜರಿದ್ದರು.

ನಕ್ಕರೆ ಅದೇ ಸ್ವರ್ಗ

ಗಂಡ : "ತರಕಾರಿಗೆ ಅಂತ ಸಾವಿರ ರೂಪಾಯಿ ತಗೊಂಡಲ್ಲ ಏನಾಯ್ತು?"

ಹೆಂಡತಿ : "ಅಯ್ಯೋ! ನಿಮ್ಮಮ್ಮ ಹೇಳಿದ್ದಾರೆ ಸಂಸಾರ ಅಂದ್ಮೇಲೆ ಸಾವಿರ ಬರುತ್ತೆ ಸಾವಿರ ಹೋಗುತ್ತೆ. ಅದೆಲ್ಲ ಲೆಕ್ಕ ಇಡಬಾರದು ಅಂತ."

ಮೈಸೂರು ಮಿತ್ರ

ಬುಧವಾರ, 8 ಮೇ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಏನೂ ಮಾಡದೆ ಇರುವುದಕ್ಕಿಂತ, ತಡವಾಗಿಯಾದರೂ ಏನಾದರೂ ಒಳ್ಳೆಯದನ್ನು ಮಾಡುವುದು ಶ್ರೇಯಸ್ಕರ –ಸೂಕ್ತಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಲಕ್ಕಿ ಸೊಪ್ಪಾದ್ರೂ ಲೆಕ್ಕದ ಮುದ್ದೆ ಉಣಬೇಕು

ನಿಮ್ಮ ಪತ್ರಗಳು

■ ಆಸ್ತಿ ತೆರಿಗೆ ಪಾವತಿಸಲು ಉಂಟಾಗುತ್ತಿರುವ ತೊಂದರೆ ತಪ್ಪಿಸಿ

ಮಾನ್ಯರೆ,

ಆಸ್ತಿ ತೆರಿಗೆ ಪಾವತಿಸಲು ಇತ್ತೀಚೆಗೆ ಬಹಳ ತೊಂದರೆ ಉಂಟಾಗುತ್ತಿರುವುದರಿಂದ ಹಿಂದೆ ಇದ್ದ ಪದ್ಧತಿಯನ್ನೇ ಜಾರಿಗೆ ತಂದರೆ ಆಸ್ತಿ ತೆರಿಗೆದಾರರಿಗೆ ಬಹಳ ಅನುಕೂಲವಾಗಲಿದೆ.

ಹಿಂದೆ ಆಯಾ ಕ್ಷೇತ್ರದ ಆಸ್ತಿ ತೆರಿಗೆ ವಸೂಲಿ ಮಾಡಲು ಸಿಬ್ಬಂದಿಗಳು ಮನೆ ಮನೆಗೆ ಬಂದು ಆಸ್ತಿ ತೆರಿಗೆ ವಸೂಲು ಮಾಡುತ್ತಿದ್ದರು. ಇದರಿಂದ ಮನೆ ಮಾಲೀಕರಿಗೆ ತುಂಬಾ ಅನುಕೂಲವಾಗುತ್ತಿತ್ತು.

ಈಗ ಆಸ್ತಿ ತೆರಿಗೆ ಪಾವತಿಸಲು ಕಚೇರಿಗೆ ಹೋದಾಗ ಇಲ್ಲ ಸಲ್ಲದ ದಾಖಲೆಗಳನ್ನು ಕೇಳುತ್ತಿರುವುದರಿಂದ ಮಾನಸಿಕವಾಗಿ, ದೈಹಿಕವಾಗಿ ತೊಂದರೆ ಅನುಭವಿಸುವಂತಾಗಿದೆ. ಸಂಬಂಧಪಟ್ಟ ಕಚೇರಿಯಲ್ಲಿ ಸಿಬ್ಬಂದಿ ಕುಳಿತು ಉದಾಸೀನದಿಂದ ವರ್ತಿಸುವುದನ್ನು ಗಮನಿಸಿದರೆ, ಆಸ್ತಿ ತೆರಿಗೆ ಪಾವತಿಸಲು ಬರುವ ತೆರಿಗೆದಾರರ ಕಷ್ಟ ಅವರಿಗೆ ಅರಿವಿರುವುದಿಲ್ಲ. ಈಗಿನ ಉರಿಬಿಸಿಲಿನ ತಾಪ ಮತ್ತು ವಾಹನ ದಟ್ಟಣೆಯನ್ನು ನಿಭಾಯಿಸಿ ಬರುವುದು ಕಷ್ಟಕರವಾಗಿದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಇದನ್ನು ಪರಿಗಣಿಸಿ ಹಿಂದೆ ಇದ್ದ ಪದ್ಧತಿಯನ್ನು ಜಾರಿಗೆ ತರುವ ಮೂಲಕ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಮನವಿ.

–ಎಲ್. ಶ್ರೀನಿವಾಸರಾವ್, ಲಷ್ಕರ್ ಮೊಹಲ್ಲಾ, ಮೈಸೂರು.

■ ಸುಗಮ ಸಂಚಾರಕ್ಕೆ ಯೋಗ್ಯವಲ್ಲದ ರಸ್ತೆ

ಮಾನ್ಯರೆ,



ಮೈಸೂರು ಜಿಲ್ಲೆಯ ಸರಗೂರು ತಾಲೂಕಿನ ಕುಂದೂರು ಗ್ರಾಮದಿಂದ ನಂಜೀಪುರ, ಕಟ್ಟೆ ಹುಣಸೂರು, ರಾಜೂರು ಗ್ರಾಮದವರೆಗೆ ಸುಮಾರು 8 ಕಿ.ಮೀ. ರಸ್ತೆಯುದ್ದಕ್ಕೂ ಗುಂಡಿಮಯವಾಗಿದ್ದು, ಇಲ್ಲಿ ಸಂಚರಿಸುವವರು ತಮ್ಮ ಜೀವವನ್ನು ಕೈಯಲ್ಲಿ ಹಿಡಿದುಕೊಂಡು ವಾಹನಗಳನ್ನು ಚಲಾಯಿಸುವ ಪರಿಸ್ಥಿತಿ ಇದೆ. ರಸ್ತೆಗಳಲ್ಲಿ ಅಲ್ಲಲ್ಲಿ ಜಲ್ಲಿಕಲ್ಲುಗಳು ಮೇಲೆ ಎದ್ದು ವಾಹನ ಮತ್ತು ಮುಖಕ್ಕೆ ಬಡಿಯುತ್ತವೆ. ಸ್ವಲ್ಪ ಯಾಮಾರಿದರೆ ಜೀವಕ್ಕೆ ಕುತ್ತು ಕಟ್ಟಿಟ್ಟಬುತ್ತಿ. ಕೆಲವು ಕಡೆ ಸರ್ಕಸ್ ಮಾಡಿಕೊಂಡು ಸಂಚರಿಸುವ ಸ್ಥಿತಿ ನೋಡಿದರೆ ತುಂಬಾ ಕಿರಿಕಿರಿಯಾಗುತ್ತದೆ. ಪ್ರತಿನಿತ್ಯ ನರಕ ಯಾತನೆಯನ್ನು ಈ ಭಾಗದ ಜನರು ಅನುಭವಿಸುವಂತಾಗಿದೆ. ಮಳೆಗಾಲದಲ್ಲಂತೂ ಈ ಭಾಗದ ಜನರ ಸ್ಥಿತಿ ಚಿಂತಾಜನಕವಾಗಿದೆ. ಅನೇಕ ಬಾರಿ ಮನವಿ ಮಾಡಿದರೂ ಈ ಭಾಗದ ಶಾಸಕರು ಇತ್ತ ಗಮನ ಹರಿಸುತ್ತಿಲ್ಲ. ರಸ್ತೆಗಳು ಸರಿಯಿಲ್ಲದ ಕಾರಣ ಬಸ್‌ಗಳಿಲ್ಲದೆ ರೋಗಿಗಳು, ಸಾರ್ವಜನಿಕರು, ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳು ನಗರ ಪ್ರದೇಶಗಳಿಗೆ ತೆರಳಲು ಪ್ರತಿನಿತ್ಯ ಪರದಾಡುವಂತಾಗಿದೆ. ಸುಮಾರು 6 ವರ್ಷಗಳಿಂದ ಡಾಂಬರು ಕಾಣದೆ ಇದೇ ಸ್ಥಿತಿಯಲ್ಲಿದೆ. ಈ ಭಾಗದ ಜನರು ರಸ್ತೆಯಲ್ಲಿ ಸಂಚರಿಸುವಾಗ ಜನಪ್ರತಿನಿಧಿಗಳು ಮತ್ತು ಸರ್ಕಾರದ ವಿರುದ್ಧ ಹಿಡಿಶಾಪವನ್ನು ಹಾಕುತ್ತಿದ್ದಾರೆ. ಒಟ್ಟಿನಲ್ಲಿ ಈ ರಸ್ತೆಯು ಗುಂಡಿಮಯವಾಗಿದ್ದು, ಸಾವಿಗೆ ಎಡೆ ಮಾಡಿಕೊಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ದಯವಿಟ್ಟು ಇದಕ್ಕೆ ಸಂಬಂಧಪಟ್ಟ ಜನಪ್ರತಿನಿಧಿಗಳಾಗಲಿ, ಅಧಿಕಾರಿಗಳಾಗಲಿ ಶೀಘ್ರದಲ್ಲಿ ಈ ರಸ್ತೆಗೆ ಡಾಂಬರು ಹಾಕುವಂತಹ ಕೆಲಸವನ್ನು ಮಾಡಲಿ ಎಂದು ಮನವಿ.

–ಪರಶಿವಮೂರ್ತಿ ಎನ್. ಪಿ, ನಂಜೀಪುರ, ಸರಗೂರು ತಾಲೂಕು

■ ರಾಜಕಾರಣದ ಮುತ್ಸದ್ದಿ ಶ್ರೀನಿವಾಸಪ್ರಸಾದ್

ಮಾನ್ಯರೆ,

ಶ್ರೀನಿವಾಸಪ್ರಸಾದ್ ಅವರು ರಾಜಕೀಯದಲ್ಲಿ ಇದ್ದರೂ ರಾಜಕಾರಣ ಮಾಡದ ಅಪರೂಪದಲ್ಲಿ ಅಪರೂಪವಾದ ವ್ಯಕ್ತಿತ್ವವುಳ್ಳ ಮುತ್ಸದ್ದಿ ರಾಜಕಾರಣಿ. ಮೈಸೂರಿನಲ್ಲಿ ಯಾವುದೇ ಉತ್ತಮವಾದ ಕಾರ್ಯಕ್ರಮಗಳು ಇದ್ದರೆ ಅಲ್ಲಿ ಶ್ರೀನಿವಾಸಪ್ರಸಾದ್, ದೇಜಗೌ ಮತ್ತು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರುಗಳ ಉಪಸ್ಥಿತಿ ಇದ್ದೇ ಇರುತ್ತಿತ್ತು. ಯಾವುದೇ ವಿಷಯಗಳೇ ಇದ್ದರೂ ಶ್ರೀನಿವಾಸಪ್ರಸಾದ್ ಅವರು ಪ್ರಸ್ತುತಪಡಿಸುತ್ತಿದ್ದ ರೀತಿಯನ್ನು ಪ್ರತಿಯೊಬ್ಬರೂ ಮೆಚ್ಚೇ ಮೆಚ್ಚುತ್ತಿದ್ದರು. ಒಮ್ಮೆ ಒಬ್ಬ ಪತ್ರಕರ್ತ ಅವರಿಗೆ ನಿಮ್ಮ ರಾಜಕೀಯ ಜೀವನದಲ್ಲಿ ಸಂತಸದ ಕ್ಷಣ ಮತ್ತು ಬೇಸರದ ಕ್ಷಣ ಯಾವುದು ಎಂದು ಕೇಳಿದಾಗ ಅವರು ಮಂದಸ್ಮಿತರಾಗಿ ಉತ್ತರಿಸುತ್ತಾ ನನ್ನನ್ನು ಏಕಾಏಕಿ ಯಾವುದೇ ಕಾರಣ ನೀಡದೆ ಕರ್ನಾಟಕ ರಾಜ್ಯದ ಮಂತ್ರಿ ಸ್ಥಾನದಿಂದ 2017 ಕೈಬಿಟ್ಟ ದಿನ ನನಗೆ ಅತ್ಯಂತ ಬೇಸರದ ಕ್ಷಣ ಮತ್ತು 2019ರ ಲೋಕಸಭಾ ಚುನಾವಣೆಯಲ್ಲಿ ಚಾಮರಾಜನಗರ ಜಿಲ್ಲೆಯ ಕ್ಷೇತ್ರದಿಂದ ಲೋಕಸಭಾ ಸದಸ್ಯನಾಗಿ ಆಯ್ಕೆ ಆದ ದಿನ ನನಗೆ ತುಂಬಾ ಸಂತಸದ ಕ್ಷಣ ಎಂದು ತಿಳಿಸಿದರು.

ಸಾಮಾನ್ಯರಲ್ಲಿ ಸಾಮಾನ್ಯ ಜನರ ಪರ ಧ್ವನಿಯಾಗಿದ್ದ, ಸ್ವಾಭಿಮಾನಿ, ಸೌಜನ್ಯದ, ಶುದ್ಧಹಸ್ತ, ನೇರ ನುಡಿಯ, ಪ್ರಬುದ್ಧ, ಪ್ರಾಮಾಣಿಕ, ಮುತ್ಸದ್ದಿ ರಾಜಕಾರಣಿ ಶ್ರೀನಿವಾಸಪ್ರಸಾದ್ ಅವರು ಮತ್ತೇ ಎಂದು ಬಾರದೂರಿಗೆ ಹೋಗಿರುವುದು ತುಂಬಾ ದುಃಖದ ಸಂಗತಿ. ಹೋಗಿ ಬನ್ನಿ, ನಿಮಗೊಂದು ಸಲಾಮ್.


–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

■ ಮರು ಸಿಇಟಿ ಪರೀಕ್ಷೆ ನಡೆಸಿ

ಮಾನ್ಯರೆ,

ಕೆಇಎ ಮತ್ತು ಸರ್ಕಾರದ ಬೇಜವಾಬ್ದಾರಿತನದಿಂದಾಗಿ ಈ ಸಲದ ಸಿಇಟಿ ಪರೀಕ್ಷೆಯು ಗೊಂದಲದ ಗೂಡಾಗಿದೆ. ಸುಮಾರು ಮೂರು ಲಕ್ಷಕ್ಕೂ ಅಧಿಕ ಮಕ್ಕಳ ಜೀವನದ ಜೊತೆ ಆಟವಾಡುತ್ತಿರುವ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಐವತ್ತಕ್ಕೂ ಹೆಚ್ಚು ಔಟ್ ಆಫ್ ಸಿಲಬಸ್ ಪ್ರಶ್ನೆಗಳನ್ನು ನೀಡಿ,ಪ್ರತಿಭಾವಂತ ಮಕ್ಕಳು ತಮ್ಮ ಪ್ರತಿಭೆಯ ನಿಜವಾದ ರ್‍ಯಾಂಕ್‌ನಿಂದ ವಂಚಿತರಾಗಿದ್ದಾರೆ. ಪರೀಕ್ಷೆಯಲ್ಲಿ ಪಠ್ಯೇತರ ಪ್ರಶ್ನೆಗಳನ್ನು ನೋಡಿ ದಿಗ್ಭ್ರಮೆಗೊಂಡು ಗೊಂದಲಕ್ಕೀಡಾಗಿ ಪರೀಕ್ಷೆಯನ್ನು ಸರಿಯಾಗಿ ಬರೆಯದೇ ಕೊಠಡಿಯಿಂದ ಹೊರಬಂದ ಮಕ್ಕಳು ಸಾಕಷ್ಟಿದ್ದಾರೆ.ಈ ಸಂದರ್ಭದಲ್ಲಿ ಗ್ರೇಸ್ ಮಾರ್ಕ್ಸ್ ನೀಡುವುದು ಉಚಿತವಲ್ಲ. ಮತ್ತು ಔಟ್ ಆಫ್ ಸಿಲಬಸ್ ಪ್ರಶ್ನೆಗಳನ್ನು ಹೊರಗಿಟ್ಟು ಉಳಿದ ನಲವತ್ತು, ನಲವತ್ತೈದು ಪ್ರಶ್ನೆಗಳನ್ನು ಮೌಲ್ಯಮಾಪನ ಮಾಡಿದರೆ ಮಕ್ಕಳ ನಿಜವಾದ ಪ್ರತಿಭೆ ಅರಿಯುವುದೆಂತು?ಹಾಗಾಗಿ ತಡವಾದರೂ ಸರಿಯೇ ಮರು ಪರೀಕ್ಷೆ ನಡೆಸಿ ಮಕ್ಕಳ ನಿಜವಾದ ಪ್ರತಿಭೆ ಅಳೆಯಬೇಕಿದೆ.ಹಾಗಾಗದಿದ್ದಲ್ಲಿ ಮಕ್ಕಳು,ಪೋಷಕರು ಕೋರ್ಟ್ ಮೆಟ್ಟಿಲೇರುವ ಸನ್ನಿವೇಶ ಬಂದು ಪ್ರಕ್ರಿಯೆ ತಡವಾಗಿ, ಸರ್ಕಾರ ಮತ್ತು ಕೆಇಎ ಮತ್ತಷ್ಟು ಮುಜುಗರಕ್ಕೆ ಒಳಗಾಗುವ ಸಂದರ್ಭ ಬರಬಹುದು.

–ದೇವರಹಳ್ಳಿ ಲೋಕೇಶ್, ಪಾಂಡವಪುರ.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.


ಸಂಸ್ಕೃತಿ ಚಿಂತನಾ

ಸಾಹಿತ್ಯದ ಉದ್ದೇಶ ಏನು?

ಪ್ರಪಂಚದ ಸಾವಿರಾರು ಭಾಷೆಗಳಲ್ಲಿ ಸಾಹಿತ್ಯ ಸೃಷ್ಟಿ ನಡೆಯುತ್ತಿದೆ. ನಮ್ಮ ದೇಶದ ಅತ್ಯಂತ ಪ್ರಾಚೀನ ಸಾಹಿತ್ಯವನ್ನು ವೇದ ಎಂದು ಕರೆಯುತ್ತೇವೆ. ಸುಮಾರು ಮೂರೂವರೆ ಸಾವಿರ ವರ್ಷಗಳ ಹಿಂದೆ ವೇದಗಳು ಹುಟ್ಟಿರಬಹುದು. ಸಂಪ್ರದಾಯಾನುಸಾರವಾಗಿ ಹೇಳಬೇಕೆಂದರೆ ವೇದಗಳು ಶಾಶ್ವತ. ಅಂದಿನಿಂದ ಇಂದಿನವರೆಗೆ ನಿತ್ಯವೂ ಕಾವ್ಯ, ನಾಟಕ, ಶಾಸ್ತ್ರ ಇತಿಹಾಸ, ವಿಜ್ಞಾನ ಮುಂತಾದ ನಾನಾ ಪ್ರಕಾರಗಳಲ್ಲಿ ಸಾಹಿತ್ಯವು ಹುಟ್ಟುತ್ತಿದೆ. ಈಗಂತೂ ಒಂದೊಂದು ಕ್ಷಣದಲ್ಲೂ ಒಂದೊಂದು ಹೊಸ ಪುಸ್ತಕ ಪ್ರಕಟವಾಗುತ್ತಿದೆ ಎಂದರೆ ಅತಿಶಯೋಕ್ತಿಯಲ್ಲ. ವಿದ್ಯೆಯ ಪ್ರಸಾರ ಹೆಚ್ಚಾಗಿ ಆಗುತ್ತಿರು ವುದರಿಂದ ಓದುವವರ ಮತ್ತು ಬರೆಯುವವರ ಸಂಖ್ಯೆ ಬೆಳೆಯುವುದು ಸಹಜವೇ. ಹುಟ್ಟಿದ ಸಾಹಿತ್ಯವೆಲ್ಲ ಜನ ಪ್ರಿಯ ಆಗುವುದಿಲ್ಲ. ಅನೇಕ ಕೃತಿಗಳು ಪ್ರಕಟಿತವಾದರೂ ಜನರಿಗೆ ಇಷ್ಟ ಆಗದೆ 'ತೂಕದ ಸಾಹಿತ್ಯ' ಆಗಿಬಿಡಬಹುದು. ಅನೇಕ ಜನ ಸಾಹಿತೀಕಾರರು ತಮ್ಮ ಖರ್ಚಿನಿಂದಲೇ ಪ್ರಕಟಣೆ ಮಾಡಿ ಕೈಸುಟ್ಟುಕೊಂಡಿರುವುದೂ ಉಂಟು. ಸಾಹಿತಿಯಾಗಿ ಸಾಹಿತ್ಯ ಮಾತ್ರದಿಂದ ಶ್ರೀಮಂತರಾಗಿ ರುವವರು ಸಾಕಷ್ಟು ಸಂಖ್ಯೆಯಲ್ಲಿ ವಿದೇಶಗಳಲ್ಲಿದ್ದಾರೆ ಎಂದು ಕೇಳಿದ್ದೇನೆ. ನಮ್ಮ ದೇಶದಲ್ಲೂ ಬೆರಳೆಣಿಕೆಯ ಸಾಹಿತಿಗಳು ಹಾಗೆ ಶ್ರೀಮಂತರಾಗಿರಬಹುದು. ಹೀಗಿರುವಾಗ ವಿಫುಲವಾಗಿ, ಹೇರಳವಾಗಿ ಸಾಹಿತ್ಯ ಹುಟ್ಟುತ್ತಿರುವುದೇಕೆ? ಸಾಹಿತ್ಯದ ಉದ್ದೇಶ ಏನು? ಎಂಬ ಮೂಲಭೂತ ಪ್ರಶ್ನೆ ಹುಟ್ಟುತ್ತದೆ.

ಜ್ಞಾನ ಪ್ರಸಾರ: ವೈಜ್ಞಾನಿಕ ಗ್ರಂಥಗಳನ್ನು ಮತ್ತು ಶಾಸ್ತ್ರ ಗ್ರಂಥಗಳನ್ನು ರಚಿಸುವ ಮೇಧಾವಿಗಳ ಉದ್ದೇಶ ಜ್ಞಾನ ಪ್ರಸಾರವಾಗಿರುತ್ತದೆ. ಆರ್ಯಭಟ, ಭಾಸ್ಕರಾಚಾರ್ಯ, ಮಹಾವೀರ ಮುಂತಾದವರು ಲೋಕಾವಲೋಕದಿಂದ ಮತ್ತು ಗಾಢ ಚಿಂತನೆಯಿಂದ ಕಂಡುಕೊಂಡ ಸತ್ಯಗಳನ್ನು ಲೋಕಕ್ಕೆ ತಿಳಿಸಬೇಕೆಂಬ ಘನೋದ್ದೇಶದಿಂದ ಗಣಿತ, ಖಗೋಳ, ಇತ್ಯಾದಿ ವಿಷಯಗಳ ಮೇಲೆ ಗ್ರಂಥಗಳನ್ನು ಬರೆದರು. ಆಗ ರಾಜರೋ, ಮಹಾಜನರೋ ಅವರಿಗೆ ಆರ್ಥಿಕ ಪ್ರಯೋಜನವನ್ನೂ ಒದಗಿಸಿರಬಹುದು. ಆದರೆ ಅಂತಹ ಲಾಭ ಆ ಗ್ರಂಥಕರ್ತರ ಉದ್ದೇವಾಗಿರಲಿಲ್ಲ. ತಮ್ಮ ಬುದ್ಧಿಶಕ್ತಿಯ ಫಲವಾಗಿ ಗೋಚರವಾದ ಸತ್ಯಗಳು ಎಲ್ಲರಿಗೂ ತಿಳಿಯಬೇಕು. ತಮ್ಮೊಂದಿಗೆ ನಶಿಸಿ ಹೋಗಬಾರದು ಎಂಬುದು ಅವರ ಮನಸ್ಸಿನಲ್ಲಿದ್ದ ಬಯಕೆ. ನಮ್ಮ ದೇಶದವರು ಮಾತ್ರವಲ್ಲ, ಗೆಲಿಲಿಯೋ, ನ್ಯೂಟನ್ ಮುಂತಾದ ಪಾಶ್ಚಾತ್ಯರೂ ವಿಜ್ಞಾನದ ಮತ್ತು ಶಾಸ್ತ್ರದ ಗ್ರಂಥಗಳನ್ನು ರಚಿಸಿದಾಗ ಜ್ಞಾನಪ್ರಸಾರ ಅವರ ಮುಖ್ಯೋದ್ದೇಶವಾಗಿದ್ದುದನ್ನು ಕಾಣುತ್ತೇವೆ.

ಆನಂದೋತ್ಪಾದನ: ವಿಶ್ವದ ಸಾಹಿತ್ಯದಲ್ಲಿ ಹೆಚ್ಚು ಭಾಗದ ಸಾಹಿತ್ಯ ಕಾಲ್ಪನಿಕ ಅಥವಾ ಕಲ್ಪನಾ ಪ್ರಧಾನ. ಕಾಳಿದಾಸ, ಪಂಪ, ನನ್ನಯ ಮುಂತಾದ ಕವಿಗಳು ವಿಜ್ಞಾನಿಗಳಾಗಿರಲಿಲ್ಲ.



ಆದರೆ ಮಹಾಪ್ರತಿಭಾಶಾಲಿಗಳು. ಅವರು ಹೇಳಿದುದೆಲ್ಲ ವೈಜ್ಞಾನಿಕ ಅಥವಾ ಐತಿಹಾಸಿಕ ಸತ್ಯ ಎನ್ನಲಾಗದು. ಆದರೆ ಅವರ ಕಲ್ಪನೆಗಳು ಅದ್ಭುತ. ಅವರ ಕೃತಿಗಳನ್ನು ಓದಿದಾಗ ಮನಸ್ಸು ತನ್ಮಯತೆಯನ್ನು ಹೊಂದಿ ಲೋಕೋತ್ತರ ಆನಂದವನ್ನು ಅನುಭವಿಸುವುದಂತೂ ವಾಸ್ತವ. ಸಹೃದಯರು ಅಂತಹ ಆನಂದವನ್ನು ಸವಿಯಲಿ ಎಂಬ ಉದ್ದೇಶದಿಂದ ಹೆಚ್ಚು ಪಾಲಿನ ಕಾವ್ಯ ಸೃಷ್ಟಿ. ಇದನ್ನೇ ರಸಾನುಭವ ಎನ್ನಬಹುದು. ಕುವೆಂಪು, ಬೇಂದ್ರೆ ಮುಂತಾದ ಶ್ರೇಷ್ಠ ಕವಿಗಳ ಕೃತಿಗಳಲ್ಲಿ ಇದೇ ಪ್ರಧಾನ. ಈ ಅನುಭವ ಸಕಲರಿಗೂ ಸಾಧ್ಯವಾಗದಿರಬಹುದು. ಏಕೆಂದರೆ ಈ ಕಾವ್ಯ ರಸಾನುಭವಕ್ಕೆ ಸಹೃದಯತ್ವ ಎಂಬ ಅರ್ಹತೆ ಆವಶ್ಯಕ. ಸಾಹಿತ್ಯವೆಂದರೆ ಕಲ್ಪನಾ ಪ್ರಧಾನವಾದ ಸಾಹಿತ್ಯವೇ ಎಂಬುದು ಅನೇಕರ ಅನಿಸಿಕೆ. ಅದರಲ್ಲಿ ಸತ್ಯದ ಅನ್ವೇಷಣೆ ಅಪ್ರಸ್ತುತ. ಪತ್ತೇದಾರಿ ಕಾದಂಬರಿಗಳಲ್ಲಿ ಬರುವ ಘಟನೆಗಳು ವಾಸ್ತವವಲ್ಲದಿದ್ದರೂ ಮನಸ್ಸನ್ನು ಸೆರೆ ಹಿಡಿದು ರೋಮಾಂಚನ (ಥ್ರಿಲ್)ವನ್ನು ಉಂಟು ಮಾಡುತ್ತವೆ ಎಂಬುದು ಎಲ್ಲರಿಗೂ ತಿಳಿದ ವಿಷಯವೇ.

ನೀತಿ ಬೋಧನೆ: ಅನೇಕ ಗ್ರಂಥಗಳ ಮುಖ್ಯೋದ್ದೇಶ ನೀತಿಯ ಬೋಧನೆ. ಇಂಗ್ಲೀಷಿನಲ್ಲಿ ಇಂತಹ ಸಾಹಿತ್ಯವನ್ನು Didactic Literature ಎಂದು ಕರೆಯುತ್ತಾರೆ. ಪಂಚತಂತ್ರದಲ್ಲಿ ಬರುವ ಕಥೆಗಳೆಲ್ಲ ಕೇವಲ ಕಾಲ್ಪನಿಕ. ಸಿಂಹ, ನರಿ ಮುಂತಾದ ಪ್ರಾಣಿಗಳು ಒಂದಕ್ಕೊಂದು ಮಾತನಾಡಿಕೊಳ್ಳುವುದು, ತಮ್ಮ ಕಥೆಗಳನ್ನು ಹೇಳುವುದು ಸತ್ಯವಲ್ಲವೆಂದು ಎಲ್ಲರಿಗೂ ಗೊತ್ತು. ತನ್ಮೂಲಕವಾಗಿ ಜನರಿಗೆ ನೀತಿಯನ್ನು ಬೋಧಿಸುವುದು ಅಲ್ಲಿ ಉದ್ದೇಶ. ಕನ್ನಡದಲ್ಲಿ ಸರ್ವಜ್ಞನ ವಚನಗಳು, ಚೂಡಾರತ್ನನ ಪದ್ಯಗಳು, ತಮಿಳಿನ ತಿರುಕ್ಕುರುಳ್, ತೆಲುಗಿನ ವೇಮನ ಪದ್ಯಗಳು ಮುಂತಾದುವೆಲ್ಲ ನೀತಿ ಬೋಧನೆ ಉದ್ದೇಶದಿಂದಲೇ ರಚಿತವಾಗಿವೆ. ಸಾಹಿತ್ಯವು ನೇರವಾಗಿ ನೀತಿಯನ್ನು ಬೋಧಿಸಬಾರದು ಎಂಬ ಅಭಿಪ್ರಾಯ ಕೆಲವರದ್ದಾಗಿದೆ. ಆದರೂ ನೀತಿ ಬೋಧನೆ ಸಾಹಿತ್ಯಕ್ಕೆ ಆವಶ್ಯಕ ಎಂದು ಅನೇಕರು ಪ್ರತಿಪಾದಿಸಿದ್ದಾರೆ. ರಾಮಾಯಣದ ಮುಖ್ಯ ಉಪದೇಶ 'ರಾಮನಂತೆ ನಡೆದುಕೊಳ್ಳಬೇಕು, ರಾವಣನಂತೆ ಅಲ್ಲ' ಎಂಬುದೇ ಆಗಿದೆ ಎಂಬುದು ಹಲವರ ವಾದ.

ದಾರ್ಶನಿಕ ಮಾರ್ಗದರ್ಶನ: ಮಾನವ ಕುಲದ ವಿಶೇಷವೇನೆಂದರೆ ಆತ್ಮದರ್ಶನದ ಕುತೂಹಲ. ಆಧ್ಯಾತ್ಮಿಕ ಜಿಜ್ಞಾಸೆ ಜೀವನ ಸಾರ್ಥಕ್ಯವನ್ನುಂಟು ಮಾಡುತ್ತದೆ. ಆಧ್ಯಾತ್ಮ ಸಾಹಿತ್ಯ ಈ ದಿಶೆಯಲ್ಲಿ ಮಾಡುತ್ತಿರುವ ಕಾರ್ಯ ಸ್ತುತ್ಯಾರ್ಹ. ಉಪನಿಷತ್ತುಗಳಿಂದ ಆರಂಭಗೊಂಡು ಇಂದಿನ ಜ್ಞಾನಿಗಳ ವಾಣಿಯವರೆಗೆ ವಿಶಾಲ ದೃಷ್ಟಿಯ ದಾರ್ಶನಿಕ ಸಾಹಿತ್ಯ ಬೆಳೆದಿದೆ, ಮತ್ತೆ ಬೆಳೆಯುತ್ತಿದೆ. ಸಾಹಿತ್ಯವನ್ನು ಸೃಷ್ಟಿಸುವುದು ಜನರ ಆಧ್ಯಾತ್ಮಿಕ ಕುರುಡುತನವನ್ನು ನಿವಾರಿಸಿ ಜ್ಞಾನದ ಕಣ್ಣನ್ನು ತೆರೆಸುವುದಕ್ಕಾಗಿ ದಾರ್ಶನಿಕರಾಗಿದ್ದ ಶಂಕರಾಚಾರ್ಯರಿಗೆ ಸತ್ಯದರ್ಶನ ಮತ್ತು ವಾಸ್ತವ ಪ್ರದರ್ಶನ ಮುಖ್ಯವಾಗಿತ್ತು. ಅವರ ಮಾತುಗಳಲ್ಲಿ ಕಾವ್ಯ ಸೌಂದರ್ಯದ ಹೊಳಹುಗಳಿದ್ದರೆ ಅದು ಪ್ರಾಸಂಗಿಕ ಮಾತ್ರ. ಗೌತಮ, ಕಣಾದ, ಪತಂಜಲಿ, ವ್ಯಾಸ ಮುಂತಾದ ಸೂತ್ರಕಾರರ ಸಾಹಿತ್ಯದ ಉದ್ದೇಶ ಅವರವರು ಕಂಡಂತಹ ಸತ್ಯದ ಮುಖವನ್ನು ಅಥವಾ ಮಗ್ಗುಲನ್ನು ಜಗತ್ತಿನ ಮುಂದೆ ತೆರೆದಿಟ್ಟು ಧರ್ಮದ ಬಗೆಗೆ ಮಾರ್ಗದರ್ಶನ ಮಾಡುವುದು.

ಪ್ರಚಾರ ಸಾಹಿತ್ಯ: ಈಚೆಗೆ ಬೆಳೆಯುತ್ತಿರುವ ಸಾಹಿತ್ಯ ಒಂದು ಮತದ ಅಥವಾ ರಾಜಕೀಯ ಪಕ್ಷದ ಹಿರಿಮೆ–ಗರಿಮೆಗಳನ್ನು ಎತ್ತಿ ಹಿಡಿಯುವ, ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಇತರ ಮತಗಳ ಅಥವಾ ಪಕ್ಷಗಳ ವಿಚಾರಗಳನ್ನು ದೂಷಿಸುವ ಪ್ರಚಾರ ಸಾಹಿತ್ಯ. ಜಗತ್ತಿನ ಯಾವುದೇ ಮತ ಅಥವಾ ವ್ಯಕ್ತಿ ಸಂಪೂರ್ಣವಾಗಿ ಶುದ್ಧವೂ ಆಗಿರುವುದಿಲ್ಲ, ಅಶುದ್ಧವೂ ಆಗಿರುವುದಿಲ್ಲ. ಎಲ್ಲರಲ್ಲೂ ಗುಣವೂ–ದೋಷವೂ ಇರುವುದು ಸಹಜ. ತಮಗೆ ಬೇಕಾದವರ ಗುಣಗಳನ್ನು ದೊಡ್ಡದಾಗಿ ಹೇಳಿ ಅವರಲ್ಲಿರುವ ದೋಷಗಳ ಬಗೆಗೆ ಮೌನವನ್ನು ವಹಿಸುವುದು, ಇದಕ್ಕೆ ಪ್ರತಿಯಾಗಿ ಬೇಡದವರ ದೋಷಗಳನ್ನು ಜಗಜ್ಜಾಹೀರು ಮಾಡಿ ಗುಣಗಳ ಬಗೆಗೆ ಏನನ್ನೂ ಹೇಳದಿರುವುದು ಪ್ರಚಾರ ಸಾಹಿತ್ಯದ ಲಕ್ಷಣ. ಇದರ ಉದ್ದೇಶ ಅರ್ಧ ಸತ್ಯವನ್ನು ಹೇಳಿ ಜನರನ್ನು ಒಲಿಸಿಕೊಳ್ಳುವುದು. ಅಥವಾ ಪ್ರಚೋದಿಸಿ ಸ್ವಾರ್ಥ ಸಾಧನೆಯನ್ನು ಮಾಡಿಕೊಳ್ಳುವುದು. ಇಂದು ಜಗತ್ತಿನಲ್ಲಿ ಸಮಸ್ತವೂ ವ್ಯಾಪಾರೀಕರಣಕ್ಕೆ ಒಳಗಾಗಿರುವುದರಿಂದ ಪ್ರಚಾರ ಸಾಹಿತ್ಯ ಪ್ರಾಮುಖ್ಯವನ್ನು ಪಡೆದಿದೆ.

ಪ್ರತಿಯೊಬ್ಬರಲ್ಲಿ ವಿಚಾರ ಸ್ವಾತಂತ್ರ್ಯವನ್ನು ಬೆಳೆಸುವ, ಎಲ್ಲ ವಸ್ತುಗಳಲ್ಲಿರುವ ಸೌಂದರ್ಯವನ್ನು ಕಾಣುವ, ಎಲ್ಲರ ಲೇಸನ್ನು ಬಯಸುವ, ಪೂರ್ವಾಗ್ರಹ ಮುಕ್ತವಾದ ಸಾಹಿತ್ಯವು ನಮ್ಮ ದೇಶದಲ್ಲಿ ಬೆಳೆಯಲಿ ಎಂದು ಆಶಿಸೋಣ.

ಶಿವನ ಅಕ್ಷಿಯ ಬಿಂದು ರುದ್ರಾಕ್ಷಿ



ನಂ. ಶ್ರೀಕಂಠ ಕುಮಾರ್
ಮೈಸೂರು–34
ಚಲನವಾಣಿ– 9481067333



ಬ್ರಹ್ಮಾಂಡದ ಸೃಷ್ಟಿ–ಸ್ಥಿತಿ–ಲಯಕ್ಕೆ ಅಧಿಪತಿಗಳಾದ ಬ್ರಹ್ಮ–ವಿಷ್ಣು–ಮಹೇಶ್ವರ ತ್ರಿಮೂರ್ತಿಗಳಲ್ಲಿ ಜಗದೊಡೆಯನಾದ ಪರಮೇಶ್ವರನಿಗೆ ಪ್ರೀತಿ ಪಾತ್ರವಾದವುಗಳಲ್ಲಿ ಅಲಂಕರಿಸುವ ರುದ್ರಾಕ್ಷಿ, ಢಮರುಗ, ಗಂಗೆ, ಜಪಮಾಲೆ, ಬಿಲ್ವಪತ್ರೆ, ವ್ಯೂಮಕೇಶ, ಚಂದ್ರ, ಸರ್ಪಮಾಲೆ, ಭಸ್ಮತ್ರಿಪುಂಡ್ರ, ಕಮಂಡಲ, ತ್ರಿಶೂಲ, ತ್ರಿನೇತ್ರ, ಹುಲಿಯ ಚರ್ಮ, ನಂದಿ, ಕಪಾಲ ಮುಂತಾದವು.

ಪರಮ ಪವಿತ್ರವಾದ ರುದ್ರಾಕ್ಷಿಯು ಶಿವನಿಗೆ ತುಂಬಾ ಪ್ರಿಯವಾದುದು. ಅದನ್ನು ದರ್ಶನ ಮಾಡಿದರೂ, ಸ್ಪರ್ಶಿಸಿದರೂ, ಧರಿಸಿದರೂ ಸಹ ಸಕಲ ಪಾಪಗಳು ನಾಶವಾಗುವುದೆಂಬುದು ನಂಬಿಕೆ. ಒಮ್ಮೆ ಪರಮೇಶ್ವರನು ಮಾತೆ ಪಾರ್ವತಿಗೆ ತಿಳಿಸಿದಂತೆ ಚಂಚಲವಾದ ಮನಸ್ಸನ್ನು ನಿಯಮನ ಮಾಡಿ ದೇವ–ಮಾನವ ರೀತಿಯಿಂದ ಸಾವಿರ ವರ್ಷಗಳ ಕಾಲ ತಪಸ್ಸನ್ನಾಚರಿಸಿದೆನು. ಆ ಸಂದರ್ಭದಲ್ಲಿ ಜಗತ್ಕಲ್ಯಾಣಕ್ಕಾಗಿ ಲೀಲಾರ್ಥವಾಗಿ ಸ್ವಲ್ಪ ಕಣ್ಣನ್ನು ತೆರೆಯಲಾಗಿ ಶಿವನ ನೇತ್ರ ಪುಟಗಳಿಂದ ಜಲಬಿಂದುಗಳು ಬಿದ್ದವು. ಆ ಬಿಂದುವಿನಿಂದ ರುದ್ರಾಕ್ಷಗಳೆಂಬ ಮರಗಳು ಜನಿಸಿದವು. ಹೀಗೆ ಭಕ್ತರನ್ನನುಗ್ರಹಿಸಲು ಅಕ್ಷಿಯ ಬಿಂದುವನ್ನೇ ವೃಕ್ಷವಾಗಿಸಿ ನಾಲ್ಕೂ ವರ್ಣದವರಿಗೆ ಕೊಟ್ಟನು. ಅಂದಿನಿಂದ ಶಿವನ ಕೃಪಾ ಪ್ರಸಾದದ ರೂಪದಲ್ಲಿ ವಿವಿಧ ಮುಖ ರುದ್ರಾಕ್ಷಿಗಳನ್ನು ಧಾರಣ ಮಾಡುವವರು ಭವಜಂಜಾಟದಿಂದ ಬಿಡುಗಡೆಗೆ ಕಾರಣೀಭೂತವಾಗಿ ಭಕ್ತನು ಶಿವ ಸಾನ್ನಿಧ್ಯವನ್ನು ಹೊಂದುವುದಾಗಿ ಪುರಾಣಗಳಲ್ಲಿ ವರ್ಣಿತವಾಗಿದೆ. ಅಲ್ಲದೆ ಶ್ರೀಮದ್ಭಾಗವತದಲ್ಲಿಯೂ ಶ್ರೀಮನ್ನಾರಾಯಣನು ಕಾರ್ತಿಕೇಯನಿಗೆ ಈ ಪ್ರಸಂಗವನ್ನು ಹೇಳಿದಂತೆಯೂ ತಿಳಿದು ಬರುತ್ತದೆ.

ರುದ್ರಾಕ್ಷ ವೃಕ್ಷಗಳು ಮಧ್ಯಮ ಗಾತ್ರವಿದ್ದು ಎಲೆಗಳು ವೀಳ್ಯದ ಎಲೆಗಳಂತೆ ಉದ್ದವಾಗಿರುತ್ತದೆ. ಹೂವು ನೀಲಿ, ಶ್ಯಾಮ ಇಲ್ಲವೆ ರಕ್ತವರ್ಣದ್ದಾಗಿದ್ದು ಹೆಚ್ಚಿನದಾಗಿ ವಾಯುಗುಣಕ್ಕನುಸಾರವಾಗಿ ಭಾರತದ ಕಾಶಿ, ಅಯೋಧ್ಯಾ, ಹಿಮಾಲಯ, ನೇಪಾಳ, ಶ್ರೀಲಂಕ, ಜಾವಾ, ಸುಮಾತ್ರ, ಇಂಡೋನೇಷ್ಯಾ ದ್ವೀಪಗಳಲ್ಲೂ ವಿವಿಧ ಪ್ರಕಾರದ ರುದ್ರಾಕ್ಷದ ಉತ್ಪತ್ತಿಯ ಸ್ಥಾನಗಳಾಗಿವೆ.

ರುದ್ರಾಕ್ಷವು ತಾಮ್ರ, ಕಬ್ಬಿಣ, ರಜತ, ಸುವರ್ಣ, ಮ್ಯಾಂಗನೀಸ್ ಮುಂತಾದ ದ್ರವ್ಯದ ಗುಣಗಳಿಂದ ಕೂಡಿದ್ದಾಗಿರುವುದರಿಂದ ಅನೇಕ ಔಷಧ ಗುಣಗಳು ಹೊಂದಿರುವುದಾಗಿ ತಿಳಿದು ಬರುತ್ತದೆ. ವಿಶೇಷ ಗುಣವೆಂದರೆ ಅಲ್ಟ್ರಾಸೋನಿಕ್ ಮುಂತಾದ ಧ್ವನಿ ತರಂಗಗಳನ್ನು ಅಂತರ್ಗತ ಮಾಡುವುದರಲ್ಲಿ ಸಮರ್ಥವಾಗಿರುವುದಾಗಿದೆ. ಆದ್ದರಿಂದ ರುದ್ರಾಕ್ಷದಲ್ಲಿ ಅನೇಕ ರೋಗ ನಿವಾರಣಾ ಔಷಧಿಯ ಗುಣಗಳು ವಿದ್ಯಮಾನವಾಗಿದೆ.

ರುದ್ರಾಕ್ಷ ಬೀಜಗಳ ಮೇಲಿರುವ ಸ್ಫುಟವಾದ ರೇಖೆಗಳು ರುದ್ರಾಕ್ಷದ ಗುಣ ಪ್ರತೀಕವೆನ್ನಲಾಗಿದೆ. ವಿಭಿನ್ನ ರೇಖೆಗಳಿರುವ ರುದ್ರಾಕ್ಷಗಳ ಗುಣಗಳು ವಿಭಿನ್ನವಾಗಿರುತ್ತವೆ. ಈ ರೇಖೆಗಳನ್ನು ಮುಖಗಳೆಂದು ಕರೆಯುವುದು ವಾಡಿಕೆ. ಈ ಆಧಾರದ ಮೇಲೆ ರುದ್ರಾಕ್ಷಗಳಲ್ಲಿ ಒಂದರಿಂದ ಮೂವತ್ತೆಂಟು ಮುಖಗಳವರೆಗೆ ಇವೆ ಎನ್ನಲಾಗಿದೆ. ರುದ್ರಾಕ್ಷಗಳಲ್ಲದೆ ಭದ್ರಾಕ್ಷ, ಇಂದ್ರಾಕ್ಷ ಮತ್ತು ಸಹಸ್ರಾಕ್ಷಗಳ ಉಲ್ಲೇಖವನ್ನೂ ಕಾಣಬಹುದು. ಆದರೆ ಶುಭ ಕಾರ್ಯಗಳ ಪೂರ್ಣತೆಗಾಗಿ ರುದ್ರಾಕ್ಷವೇ ಶ್ರೇಷ್ಠ ಎನ್ನಲಾಗಿದೆ. ರುದ್ರಾಕ್ಷದಲ್ಲಿ ಏಕಮುಖ ದ್ವಿಮುಖ, ತ್ರಿಮುಖ, ಚತುರ್ಮುಖ, ಪಂಚಮುಖ, ಷಣ್ಮುಖ, ಸಪ್ತ ಮುಖ, ಅಷ್ಟಮುಖ, ನವಮುಖ ಮುಂತಾದ ರುದ್ರಾಕ್ಷಿಗಳಿವೆ ಎನ್ನಲಾಗಿದೆ.

ಈ ಹಲವಾರು ಬಗೆಯ ರುದ್ರಾಕ್ಷದಲ್ಲಿ ಏಕಮುಖ ರುದ್ರಾಕ್ಷವು ಅತ್ಯಂತ ಅಪರೂಪದ ಗಾಢವಾದ ಒಂದೇ ರೇಖೆಯುಳ್ಳ ರುದ್ರಾಕ್ಷ ಸಾಕ್ಷಾತ್ ಶಿವ ಸ್ವರೂಪವಾದುದು, ದ್ವಿಮುಖ ರುದ್ರಾಕ್ಷವು ಅರ್ಧನಾರೀಶ್ವರರ ಪ್ರತೀಕವಾಗಿದ್ದು ಎರಡು ರೇಖೆಗಳನ್ನು ಹೊಂದಿರುತ್ತದೆ, ತ್ರಿಮುಖ ರುದ್ರಾಕ್ಷವು ಮೂರು ರೇಖೆಗಳನ್ನು ಹೊಂದಿದ್ದು ಮುಕ್ತಿ ಸಾಧನವನ್ನುಂಟುಮಾಡುವುದು, ಚತುರ್ಮುಖ ರುದ್ರಾಕ್ಷವು ಬ್ರಹ್ಮ ಪ್ರತೀಕವಾಗಿ ನಾಲ್ಕು ರೇಖೆಗಳನ್ನು ಹೊಂದಿರುತ್ತದೆ, ಪಂಚಮುಖ ರುದ್ರಾಕ್ಷವು ಐದು ರೇಖೆಗಳನ್ನು ಹೊಂದಿದ್ದು ಕಾಲಾಗ್ನಿ ಎಂಬ ಹೆಸರುಳ್ಳ ರುದ್ರನ ಸ್ವರೂಪವಾಗಿರುತ್ತದೆ, ಷಣ್ಮುಖ ರುದ್ರಾಕ್ಷವು ಕಾರ್ತಿಕೇಯ ಸ್ವರೂಪವಾಗಿ ಆರು ರೇಖೆಗಳನ್ನು ಹೊಂದಿರುತ್ತದೆ. ಸಪ್ತ ಮುಖದ ರುದ್ರಾಕ್ಷಿಯು ಸಪ್ತರ್ಷಿ ಸ್ವರೂಪವಾಗಿ ಏಳು ರೇಖೆಗಳನ್ನು ಹೊಂದಿರುತ್ತದೆ. ಅಷ್ಟಮುಖ ರುದ್ರಾಕ್ಷಿಯು ಅಷ್ಟವಸು ಸ್ವರೂಪ, ಭೈರವ ಸ್ವರೂಪವೂ ಆದುದು. ನವಮುಖ ರುದ್ರಾಕ್ಷಿಯು ದುರ್ಗಾ ಶಕ್ತಿಯ ಪ್ರತೀಕವಾಗಿರುತ್ತದೆ. ದಶಮುಖ ರುದ್ರಾಕ್ಷಿಯು ವಿಷ್ಣು ಸ್ವರೂಪಿಯ ಪ್ರತೀಕ, ಏಕಾದಶ–11 ಮುಖ ರುದ್ರಾಕ್ಷಿಯು ರುದ್ರಾವತಾರ ಮತ್ತು ಏಕಮುಖಿಯ ವಿಕಲ್ಪವಾಗಿದೆ, ದ್ವಾದಶ–12 ಮುಖ ರುದ್ರಾಕ್ಷಿಯು ಸೂರ್ಯನ ಸ್ವರೂಪದ ಪ್ರತೀಕ, ತ್ರಯೋದಶ–13 ರುದ್ರಾಕ್ಷವು ವಿಶ್ವೇದೇವ ಸ್ವರೂಪ, ಚತುರ್ದಶ–14 ರುದ್ರಾಕ್ಷ ಪರಶಿವ ಸ್ವರೂಪವಾಗಿದೆ. ಪಂಚದಶ–15 ರುದ್ರಾಕ್ಷವು ಆಧ್ಯಾತ್ಮಿಕ ಶಕ್ತಿ ಸಂಚಯಕ್ಕೆ ಉಪಯುಕ್ತವಾಗಿದೆ. ಷೋಡಷಮುಖಿ–16 ರುದ್ರಾಕ್ಷವನ್ನು ಧರಿಸಿದವರಿಗೆ ವಿಶೇಷ ದೈವೀಶಕ್ತಿಯು ದೊರಕುವುದು, ಸಪ್ತದಶಮುಖ–17 ರುದ್ರಾಕ್ಷಿಯು ವಿಶ್ವಕರ್ಮನನ್ನು ಪ್ರತಿನಿಧಿಸುತ್ತದೆ, ಅಷ್ಟಾದಶ–18 ರುದ್ರಾಕ್ಷಿಯು ಪೃಥ್ವಿಯನ್ನು ಪ್ರತಿನಿಧಿಸುತ್ತದೆ. ಏಕೋನ ವಿಂಶತಿಮುಖ–19 ರುದ್ರಾಕ್ಷಿಯು ಶ್ರೀಮನ್ನಾರಾಯಣನನ್ನು ಪ್ರತಿನಿಧಿಸುತ್ತದೆ. ವಿಶಂತಿಮುಖ–20 ರುದ್ರಾಕ್ಷವು ಬ್ರಹ್ಮದೇವರನ್ನು ಪ್ರತಿನಿಧಿಸುತ್ತದೆ, ಏಕವಿಶಂತಿಮುಖ–21 ರುದ್ರಾಕ್ಷವು ದುರ್ಲಭವಾಗಿದ್ದು ಕುಬೇರ ರುದ್ರಾಕ್ಷ ಎನ್ನುತ್ತಾರೆ.

ಉಳಿದಂತೆ ಹೆಚ್ಚಿನ ಮುಖಗಳಿರುವ ರುದ್ರಾಕ್ಷಿಯನ್ನು ಧರಿಸಲು ಯಾವುದೇ ಅಭ್ಯಂತರವಿಲ್ಲ. ಹೀಗೆ ವಿವಿಧ ಮುಖಗಳಿರುವ ರುದ್ರಾಕ್ಷವನ್ನು ಧರಿಸಿದಲ್ಲಿ ಆಯಾಮುಖದ ರುದ್ರಾಕ್ಷಿಗೆ ವಿಶೇಷವಾದ ಶಕ್ತಿ ಲಭಿಸುವುದು ಎನ್ನಲಾಗುವುದು. ಇಷ್ಟೆಲ್ಲಾ ವಿಭಿನ್ನತೆ ಹಾಗೂ ವಿಶಿಷ್ಟತೆಗಳಿದ್ದರೂ ಫಲಶ್ರುತಿ ಪಡೆಯಬೇಕಾದರೆ ಅಸಲಿ ರುದ್ರಾಕ್ಷ ಬೀಜವನ್ನೇ ಧರಿಸುವುದು ಅವಶ್ಯವಾಗಿದೆ.

ಸಾಮಾನ್ಯವಾಗಿ ರುದ್ರಾಕ್ಷಗಳು ಶ್ರೇಷ್ಠ ದಾರದಿಂದಲೇ ಪೋಣಿಸಲ್ಪಟ್ಟಿರುತ್ತವೆ. ತಾಮ್ರ, ಬೆಳ್ಳಿ–ಬಂಗಾರಗಳನ್ನು ಅಪರೂಪವಾಗಿ ರುದ್ರಾಕ್ಷಿ ಮಾಲೆ ಮಾಡಲು ಬಳಸುವುದುಂಟು. ಮಾಲೆಯಲ್ಲಿ ಮುಖ್ಯವಾಗಿ ಒಂದು ಪ್ರತ್ಯೇಕ ಮಣಿಯನ್ನು ಸೇರಿಸಿರುತ್ತಾರೆ. ಈ ಮಣಿಯನ್ನು ಮೇರು ಎನ್ನುತ್ತಾರೆ. ಸಾಧಕರು ಜಪವನ್ನು ಮಾಡುವಾಗ ಮೇರು ಮಣಿಯಿಂದಲೇ ಪ್ರಾರಂಭಿಸಿ ಈ ಮೇರು ಮಣಿಯನ್ನು ದಾಟಿ ಸಾಗಕೂಡದು. ಇನ್ನೂ ಹೆಚ್ಚು ಸಂಖ್ಯೆಯಲ್ಲಿ ಜಪ ಮಾಡಬೇಕಾದಾಗ ಹಿಮ್ಮುಖವಾಗಿ ಎಣಿಸುತ್ತಾ ಮತ್ತೆ ಮೇರುವಿನತ್ತ ಸಾಗಬೇಕು ಎಂಬುದಾಗಿದೆ. ರುದ್ರಾಕ್ಷದ ಪ್ರತಿಯೊಂದು ಜಪಮಾಲೆಯಲ್ಲಿ ನೂರೆಂಟು ರುದ್ರಾಕ್ಷ ಮಣಿಗಳಿರುತ್ತವೆ. ಐವತ್ನಾಲ್ಕು ರುದ್ರಾಕ್ಷಿ ಮಣಿಗಳಿರುವ ಜಪ ಮಾಲೆಯನ್ನು ಅರ್ಧವೆಂದೂ, ಇಪ್ಪತ್ತೇಳು ರುದ್ರಾಕ್ಷಿ ಮಣಿಗಳಿರುವ ಜಪಮಾಲೆಯನ್ನು ಸಮರನಿ ಎಂದು ಕರೆಯುತ್ತಾರೆ.

ನೂರೆಂಟು ರುದ್ರಾಕ್ಷಿಗಳ ಮಾಲೆಯನ್ನು ಧರಿಸಿದವನು ರುದ್ರ ಸ್ವರೂಪವನ್ನು ಪಡೆಯುವನು. ರುದ್ರಾಕ್ಷಿ ಮಾಲೆಯಷ್ಟು ಫಲಪ್ರದವು, ಶುಭವು, ಪವಿತ್ರವೂ ಆದಂತಹ ಮಾಲೆ ಇನ್ನೊಂದಿಲ್ಲ ಎನ್ನಬಹುದು. ಮೊದಲು ನೆಲ್ಲಿಕಾಯಿ ಗಾತ್ರದ ರುದ್ರಾಕ್ಷಿಯು ಶ್ರೇಷ್ಠವಾದದ್ದು. ಆಮೇಲೆ ಅದಕ್ಕಿಂತಲೂ ಗಾತ್ರದಲ್ಲಿ ಚಿಕ್ಕದಾಗಿರುವುದು ಉತ್ತಮವಾದುದು. ಕಡಲೆಕಾಳು ಪ್ರಮಾಣದ ರುದ್ರಾಕ್ಷಿಯು ಸಕಲ ಇಷ್ಟಾರ್ಥಗಳನ್ನುಂಟು ಮಾಡುವುದು. ಚಿಕ್ಕದಾದುದು ಯಾವಾಗಲೂ ಪ್ರಶಸ್ತವಾದುದು ಹಾಗೂ ಪಾಪನಾಶಕವೂ ಎನ್ನಲಾಗಿದೆ. ರುದ್ರಾಕ್ಷವನ್ನು ಶರೀರದಲ್ಲಿ ಧರಿಸುವವರಿಗೆ ಅಪಮೃತ್ಯುವು ಉಂಟಾಗುವುದಿಲ್ಲ ಎಂಬುದು ಅನಿಸಿಕೆ. ರುದ್ರಾಕ್ಷಿಗಳನ್ನು ಧರಿಸುವುದರ ಮಹಿಮೆಯಿಂದ ಭೋಗವು, ಮುಕ್ತಿಯು ಲಭಿಸಿ ಸರ್ವ ಸಂಪೂರ್ಣನಾಗುವನು ಎಂಬುದು ನಂಬಿಕೆ.

ಕರ್ನಾಟಕ ಚಿಕ್ಕಮಗಳೂರು ಜಿಲ್ಲೆಯ, ಕೊಪ್ಪ ತಾಲೂಕಿನ ಹರಿಹರಪುರ ದಿವ್ಯ ಕ್ಷೇತ್ರವು ಜಗದ್ಗುರು ಶ್ರೀ ಶ್ರೀ ಶಂಕರ ಭಗವತ್ಪಾದಾಚಾರ್ಯರ ಪರಂಪರೆಯ ಜಗದ್ಗುರು ಶ್ರೀ ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತೀ ಮಹಾಸ್ವಾಮಿಗಳವರು ಸಾಮಾಜಿಕ ಸಾಮರಸ್ಯತೆಗಾಗಿ ಮತ್ತು ಸುಸಂಸ್ಕೃತ ಸಮಾಜ ನಿರ್ಮಾಣಕ್ಕಾಗಿ ಕಳೆದ ಇಪ್ಪತ್ತು ವರ್ಷಗಳಿಂದ ಎಲ್ಲೆಡೆ ಸಂಚರಿಸಿ ಸುಮಾರು ಇಪ್ಪತ್ತೈದು ಲಕ್ಷ ಜನರಿಗೆ ರುದ್ರಾಕ್ಷಿಯನ್ನು ನೀಡಿ ಶಾಸ್ತ್ರೋಕ್ತವಾಗಿ ಶಿವದೀಕ್ಷೆಯನ್ನು ಅನುಗ್ರಹಿಸಿರುವುದು ಆಸ್ತಿಕರ ಪುಣ್ಯವೇ ಆಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ ಬುಧವಾರ 8 ಮೇ 2024

ನಿಮ್ಮ ಪತ್ರಗಳು

ಕಟ್ಟಡ ನಿರ್ಮಾಣದಲ್ಲಿ ಈ ಪರಿ ಉಲ್ಲಂಘನೆಯೇ?

ಮಾನ್ಯರೇ,

ಮನೆ ನಿರ್ಮಿಸಿರುವ ಇಲ್ಲವೇ ಮನೆ ನಿರ್ಮಾಣಕ್ಕೆ ಮುಂದಾಗಿರುವ ಮೈಸೂರಿನ ಪ್ರತಿಯೊಬ್ಬ ಕಾನೂನು ಪಾಲಿಸುವ ನಾಗರಿಕರು ಈ ಕಟ್ಟಡ ನಿರ್ಮಾಣವನ್ನು ಸೂಕ್ಷ್ಮವಾಗಿ ಗಮನಿಸಬೇಕು. ನಗರದ ಐಷಾರಾಮಿ ಪ್ರದೇಶಗಳಲ್ಲಿ ಒಂದೆಂದು ಕರೆಯಲ್ಪಡುವ ಯಾದವಗಿರಿಯಲ್ಲಿ ಈ ನಿರ್ಮಾಣ ಮುಕ್ತಾಯದ ಹಂತದಲ್ಲಿದೆ.

ಕಾಂಪೌಂಡ್ ಗೋಡೆ ಇಲ್ಲದೆ ಮತ್ತು ನಿಯಮಾನುಸಾರ ಸೆಟ್‌ಬ್ಯಾಕ್ ಬಿಡದೆ ಈ ಮೂರು ಅಂತಸ್ತಿನ ಕಟ್ಟಡವು ಆಧುನಿಕ ವಿನ್ಯಾಸದಲ್ಲಿ ನಿರ್ಮಾಣಗೊಳ್ಳುತ್ತಿದೆ. ಲಭ್ಯವಿರುವ ಪ್ರತಿಯೊಂದು ಇಂಚು ಜಾಗವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳಲಾಗಿದೆ. ಆ ಮೂಲಕ ಈ ನಿರ್ಮಾಣದಲ್ಲಿ ಎಲ್ಲಾ ನಿಯಮಾವಳಿಗಳನ್ನು ಗಾಳಿಗೆ ತೂರಿರುವುದು ಸ್ಪಷ್ಟವಾಗಿದ್ದು, ಕಟ್ಟಡ ನಿರ್ಮಾಣಗೊಂಡ ಸ್ಥಳವು ಎಲ್ಲಾ ರೀತಿಯ ಉಲ್ಲಂಘನೆಗಳನ್ನು ಎತ್ತಿ ತೋರಿಸುವಂತಿದೆ.

ಸದರಿ ನಿರ್ಮಾಣವು ಮೈಸೂರು ಮಹಾನಗರ ಪಾಲಿಕೆಯ ವಲಯ ಕಚೇರಿ 4ರಿಂದ ನಿಖರವಾಗಿ 500 ಅಡಿ ದೂರದಲ್ಲಿದೆ. ಅಂತೆಯೇ ಪಾಲಿಕೆ ಆಯುಕ್ತರ ನಿವಾಸದಿಂದ 500 ಅಡಿ ದೂರದಲ್ಲಿದ್ದು, ವಾರ್ಡ್ 18ರ ಕಾರ್ಪೊರೇಟರ್ (ಮಾಜಿ) ನಿವಾಸದಿಂದ 200 ಅಡಿ ದೂರದಲ್ಲಿದೆ.

ತನ್ನ ನೆರೆಹೊರೆಯವರು ನಿಯಮಗಳನ್ನು ಉಲ್ಲಂಘಿಸಿ ಕಟ್ಟಡ ನಿರ್ಮಿಸಿದ್ದನ್ನು ವಿರೋಧಿಸಿದ್ದಕ್ಕಾಗಿ ಕೇಂದ್ರ ಗುಪ್ತಚರ ವಿಭಾಗದ ನಿವೃತ್ತ ಅಧಿಕಾರಿ ಆರ್.ಎನ್.ಕುಲಕರ್ಣಿ ಅವರು ಹತ್ಯೆಯಾದ 13 ತಿಂಗಳ ನಂತರ ಸುತ್ತಮುತ್ತಲಿನ ನಿವಾಸಿಗಳು ಪಾಠ ಕಲಿತಂತೆ ತೋರುತ್ತದೆ. ಅಲ್ಲದೆ, ನಾಗರಿಕ ಪ್ರಜ್ಞೆಯೂ ಮೂಡಿದಂತಾಗಿದೆ.

ನಗರಪಾಲಿಕೆಯು ಪ್ರತಿ ಮನೆ ನಿರ್ಮಾಣಕ್ಕೆ ಇದೇ ಮಾದರಿಯಲ್ಲಿ ನಿರ್ಮಿಸಲು ಅನುಮತಿ ನೀಡಿದರೆ ಭಾರತದ ಮೊದಲ ಯೋಜಿತ ನಗರಗಳ ಪೈಕಿ ಒಂದಾಗಿರುವ ಮೈಸೂರು ಭವಿಷ್ಯದಲ್ಲಿ ಯಾವ ರೀತಿ ಅವ್ಯವಸ್ಥೆಯಿಂದ ಕೂಡಿರುತ್ತದೆ ಎಂದು ಊಹಿಸುವುದು ಕಷ್ಟವೇನಲ್ಲ. ನಿಯಮ ಉಲ್ಲಂಘನೆ ಮತ್ತು ಪಾಲನೆ ಸಂಬಂಧ ಎರಡು ಕಟ್ಟಡಗಳ ಛಾಯಾಚಿತ್ರ ಪ್ರಕಟಿಸಿರುವುದನ್ನು ಗಮನಿಸಬಹುದು. ಈ ಎರಡೂ ಛಾಯಾಚಿತ್ರಗಳೇ ನಿಯಮ ಪಾಲನೆ ಮತ್ತು ಉಲ್ಲಂಘನೆಯನ್ನು ಕಣ್ಣಿಗೆ ಕಟ್ಟಿ ಕೊಡಲಿವೆ.

–ಕಳಕಳಿಯುಳ್ಳ ನೆರೆಹೊರೆಯವರು, ಯಾದವಗಿರಿ, ಮೈಸೂರು. 6.5.2024



ಪತ್ರದಲ್ಲಿ ಉಲ್ಲೇಖಿಸಿರುವ ನಿಯಮ ಉಲ್ಲಂಘಿಸಿ ನಿರ್ಮಿಸಿರುವ ಕಟ್ಟಡದ ಚಿತ್ರ.



ನಿಯಮ ಉಲ್ಲಂಘಿಸಿ ನಿರ್ಮಿಸಿರುವ ಕಟ್ಟಡ ಇರುವ ಮುಂದಿನ ರಸ್ತೆಯಲ್ಲಿ ಸರ್ಕಾರಿ ನಿಯಮಗಳಂತೆ ನಿರ್ಮಾಣಗೊಂಡಿರುವ ಕಟ್ಟಡವೊಂದರ ಚಿತ್ರ.

ಪ್ರಜ್ವಲ್ ರೇವಣ್ಣ ಬಂಧನ; ವೇಮುಲ ಸಾವಿನ ಮರು ತನಿಖೆಗೆ ಆಗ್ರಹಿಸಿ

ಮೈಸೂರು ವಿವಿ ದಲಿತ ವಿದ್ಯಾರ್ಥಿ ಒಕ್ಕೂಟ ಪ್ರತಿಭಟನೆ

ಮೈಸೂರು, ಮೇ 7– ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯವೆಸಗಿರುವ ಪ್ರಜ್ವಲ್ ರೇವಣ್ಣನನ್ನು ಬಂಧಿಸಬೇಕು ಹಾಗೂ ಹೈದರಾಬಾದ್‌ನ ವಿದ್ಯಾರ್ಥಿ ರೋಹಿತ್ ವೇಮುಲ ಸಾವು ಪ್ರಕರಣದ ಮರು ತನಿಖೆ ನಡೆಸಬೇಕೆಂದು ಆಗ್ರಹಿಸಿ ಮೈಸೂರು ವಿಶ್ವವಿದ್ಯಾಲಯದ ದಲಿತ ವಿದ್ಯಾರ್ಥಿ ಒಕ್ಕೂಟ ಮತ್ತು ಸಂಶೋಧಕರ ಸಂಘದ ಸದಸ್ಯರು ಮಂಗಳವಾರ ಪ್ರತಿಭಟನೆ ನಡೆಸಿದರು.

ನಗರದ ಮಾನಸ ಗಂಗೋತ್ರಿ ಆವರಣದ ಕುವೆಂಪು ಪ್ರತಿಮೆ ಬಳಿ ಜಮಾಯಿಸಿದ ವಿದ್ಯಾರ್ಥಿಗಳು, ಆರೋಪಿ ಪ್ರಜ್ವಲ್ ರೇವಣ್ಣ ಫೋಟೋ ಹಿಡಿದು ತಕ್ಷಣ ಬಂಧಿಸಿ, ಕಠಿಣ ಶಿಕ್ಷೆ ವಿಧಿಸಬೇಕು ಎಂದು ಘೋಷಣೆ ಕೂಗಿದರು.

ಓರ್ವ ಜವಾಬ್ದಾರಿಯುತ ಜನಪ್ರತಿನಿಧಿಯಾಗಿ ಪ್ರಜ್ವಲ್ ರೇವಣ್ಣ ಹಾಸನದಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ನಡೆಸಿದ್ದಾರೆಂಬ ವಿಡಿಯೋಗಳನ್ನು ಪೆನ್‌ಡ್ರೈವ್ ಮೂಲಕ ಹಂಚಿರುವುದು ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡುತ್ತಿರುವುದು ಅಕ್ಷಮ್ಯ ಅಪರಾಧ. ಸಂತ್ರಸ್ತೆಯರ ರಕ್ಷಣೆಗೆ ಸರ್ಕಾರ ಆದ್ಯತೆ ನೀಡಬೇಕು. ಪ್ರಜ್ವಲ್ ರೇವಣ್ಣನನ್ನು ಬಂಧಿಸಿ, ವಿಚಾರಣೆಗೊಳಪಡಿಸಿ ಕಠಿಣ ಶಿಕ್ಷೆಯಾಗುವಂತೆ ಕ್ರಮ ವಹಿಸಬೇಕು. ಜೊತೆಗೆ ವಿಡಿಯೋ ಹರಿಬಿಟ್ಟವರು ಹಾಗೂ ಹಂಚುವವರ ವಿರುದ್ಧವೂ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಪ್ರತಿಭಟನಾನಿರತರು ಒತ್ತಾಯಿಸಿದರು. ಹೈದರಾಬಾದ್‌ನ ರೋಹಿತ್ ವೇಮುಲ ಅವರದ್ದು ಹತ್ಯೆಯಲ್ಲ ಎಂದು ಬಿಂಬಿಸುವ ಮೂಲಕ ಪ್ರಕರಣವನ್ನು ಮುಚ್ಚಿಹಾಕುವ ಪ್ರಯತ್ನ ನಡೆಯುತ್ತಿದೆ. ಸುಳ್ಳು ವಿಚಾರಗಳನ್ನು ಸತ್ಯವೆನ್ನುವಂತೆ ಪ್ರತಿಬಿಂಬಿಸಿ, ಸಮಾಜಕ್ಕೆ ತಪ್ಪು ಮಾಹಿತಿ ನೀಡಲಾಗುತ್ತಿದೆ. ವೇಮುಲ ಅವರ ತಾಯಿಯ ಹೇಳಿಕೆ ಆಧರಿಸಿ, ಅವರ ಸಾವನ್ನು ಹತ್ಯೆಯೆಂದು ಪರಿಗಣಿಸಿ ಪ್ರಕರಣದ ಮರುತನಿಖೆ ಮಾಡಬೇಕು. ಆತ ಪರಿಶಿಷ್ಟ ಜಾತಿಯ ವ್ಯಕ್ತಿ ಎಂಬ ಕಾರಣಕ್ಕೆ ಹತ್ಯೆಯಾಗಿದೆ. ಇದನ್ನು ಮುಚ್ಚಿಹಾಕುವ ಕೆಲಸವಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ದಲಿತ ವಿದ್ಯಾರ್ಥಿ ಒಕ್ಕೂಟದ ಅಧ್ಯಕ್ಷ ಬಿ.ಸಚಿನ್, ಗೌರವಾಧ್ಯಕ್ಷ ಗಿರೀಶ್ ಬೆಂಡರವಾಡಿ, ಸಂಶೋಧಕ ಸಂಘದ ಮಹೇಶ್ ಆರೋಹಳ್ಳಿ ಮತ್ತಿತರರು ಭಾಗವಹಿಸಿದ್ದರು.



ಮೈಸೂರಿನ ಮಾನಸಗಂಗೋತ್ರಿ ಬಳಿ ವಿದ್ಯಾರ್ಥಿಗಳು ಪ್ರತಿಭಟಿಸಿ, ಪ್ರಜ್ವಲ್ ರೇವಣ್ಣ ಬಂಧನ ಹಾಗೂ ರೋಹಿತ್ ವೇಮುಲ ಸಾವು ಪ್ರಕರಣದ ಮರು ತನಿಖೆಗೆ ಆಗ್ರಹಿಸಿದರು.

ಹಿಂದೆ ಮುಂದೆ ನೋಡದೆ ಹಣ ಹೂಡಿಕೆ ಮಾಡಿ ಲಕ್ಷಾಂತರ ರೂ. ಕಳೆದುಕೊಂಡರು!

ಮೈಸೂರು, ಮೇ 7(ಎಸ್‌ಪಿಎನ್)– ಐಸಿಐಸಿಐ ಸೆಕ್ಯೂರಿಟೀಸ್ ಚಿಫಿಷಿಯಲ್ ಸ್ಟಾಕ್ ಡಿಐ3 ಲಿಂಕ್ ಹಾಗೂ ರಾ ಇನ್ವೆಸ್ಟ್‌ಮೆಂಟ್ ಅಕಾಡೆಮಿ ವಾಟ್ಸಾಪ್ ಗ್ರೂಪ್ ಲಿಂಕ್ ಮೂಲಕ ಲಕ್ಷಾಂತರ ರೂ.ಗಳನ್ನು ಸ್ಟಾಕ್ ಟ್ರೇಡಿಂಗ್‌ನಲ್ಲಿ ಹೂಡಿ ಹಣ ಕಳೆದುಕೊಂಡಿರುವ ಬಗ್ಗೆ ಮೈಸೂರು ಸೆನ್ ಠಾಣೆಯಲ್ಲಿ ಎರಡು ಪ್ರತ್ಯೇಕ ಪ್ರಕರಣ ದಾಖಲಾಗಿವೆ.

10 ಲಕ್ಷ ರೂ ಹಣ ವಂಚನೆ: ಮೈಸೂರು ಗಾಯಿತ್ರಿಪುರಂನ ನಿವಾಸಿ ಸಿಎಸ್‌ಎಸ್ ಕಶ್ಯಪ್ ಎಂಬುವವರು ಐಸಿಐಸಿಐ ಸೆಕ್ಯೂರಿಟೀಸ್ ಅಫೀಷಿಯಲ್ ಸ್ಟಾಕ್ ಡಿಐ3 ವಾಟ್ಸಾಪ್ ಗ್ರೂಪ್‌ನ ಲಿಂಕ್ ಮೂಲಕ ಐಸಿಐಸಿಐ ಇಂಟರ್‌ನ್ಯಾಷನಲ್ ಇನ್ಸ್ಟಿರ್ ಆ್ಯಪ್ ಅನ್ನು ಇನ್‌ಸ್ಟಾಲ್ ಮಾಡಲು ವಂಚಕರು ಹೇಳಿದ್ದಾರೆ. ಅವರ ಮಾತನ್ನು ನಂಬಿದ ಕಶ್ಯಪ್, ಹಂತ ಹಂತವಾಗಿ 10 ಲಕ್ಷ ರೂಗಳನ್ನು ಇನ್ವೆಸ್ಟ್ ಮಾಡಿದ್ದಾರೆ. ನಂತರ ಈ ಹಣವನ್ನು ಆ್ಯಪ್ ಮೂಲಕ ವಾಪಸ್ ಪಡೆಯಲು ಹೋದಾಗ, ಅನುಮತಿ ನೀಡಿಲ್ಲ. ಇದರಿಂದ ಮೋಸ ಹೋಗಿರುವುದನ್ನು ಅರಿತ ಕಶ್ಯಪ್, ಮೇ 6ರಂದು ಸೆನ್ ಠಾಣೆಯಲ್ಲಿ ವಂಚನೆ ಪ್ರಕರಣ ದಾಖಲಿಸಿದ್ದಾರೆ.

9.3 ಲಕ್ಷ ರೂ. ವಂಚನೆ: ಮೈಸೂರು ರಾಮಕೃಷ್ಣನಗರದ ವಾಸು ಬಡಾವಣೆಯ ನಿವಾಸಿ ಎ.ಪ್ರವೀಣ್ ಎಂಬುವರು ರಾ ಇನ್ವೆಸ್ಟ್‌ಮೆಂಟ್ ಅಕಾಡೆಮಿಯಲ್ಲಿ ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡುವ ಕುರಿತು ಆನ್‌ಲೈನ್ ಮೂಲಕ ತರಗತಿಗಳಿಗೆ ಸೇರಿಕೊಂಡಿದ್ದಾರೆ. ಈ ವೇಳೆ ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡಿದರೆ ಶೇ.500ರಷ್ಟು ಲಾಭದ ಆಸೆ ತೋರಿಸಿ ಲಿಂಕ್‌ವೊಂದನ್ನು ಕಳುಹಿಸಿದ್ದಾರೆ. ಇವರ ಮಾಹಿತಿ ಮೇರೆಗೆ ಪ್ರವೀಣ್ ಗ್ರೋಹ್ ಆ್ಯಪ್‌ನಲ್ಲಿ ಲಿಂಕ್ ಓಪನ್ ಮಾಡಿದ್ದಾರೆ. ಆದರೆ, ಪ್ರವೀಣ್‌ಗೆ ಈ ಆ್ಯಪ್ ಮೂಲಕ ಷೇರ್‌ಗಳನ್ನು ಖರೀದಿಸಲಾಗಿಲ್ಲ. ಪುನಃ ವಂಚಕರು, 'ಟೆಕ್‌ಸ್ಟಾರ್ ಪ್ರೋ ಆ್ಯಪ್' ಖಾತೆ ತೆರೆದು ಹಣ ಹಾಕುವಂತೆ ಸೂಚಿಸಿದ್ದಾರೆ. ಇವರ ಮಾತನ್ನು ನಂಬಿದ ಪ್ರವೀಣ್, ಐಸಿಐಸಿಐ ಬ್ಯಾಂಕ್ ಖಾತೆ ಮೂಲಕ ಮಾ.19ರಿಂದ ಏ.2ರವರೆಗೆ ಹಂತಹಂತವಾಗಿ 9.30 ಲಕ್ಷ ರೂ ಜಮೆ ಮಾಡಿದ್ದಾರೆ.

ನಂತರ ಏ.12ರಂದು ಟೆಕ್‌ಸ್ಟಾರ್ ಪ್ರೋ ಆ್ಯಪ್ ಚೆಕ್ ಮಾಡಿದಾಗ ಒಟ್ಟು 80,93,640 ರೂ. ಮೊತ್ತ ತೋರಿದೆ. ಇದನ್ನು ವಿತ್ ಡ್ರಾ ಮಾಡಲು ಪ್ರವೀಣ್ ಲಿಂಕ್ ಕೇಳಿದಾಗ, ಶೇ.10ರಷ್ಟು ಟ್ಯಾಕ್ಸ್ ಕಟ್ಟಿ ನಂತರ ಹಣ ಪಡೆಯುವಂತೆ ಮಾಹಿತಿ ನೀಡಿದೆ. ಪ್ರವೀಣ್, ಆಗ ತಾನು ಮೋಸ ಹೋಗಿರುವುದನ್ನು ಅರಿತು ಮೇ 6ರಂದು ಮೈಸೂರಿನ ಸೆನ್ ಠಾಣೆಯಲ್ಲಿ ವಂಚನೆ ಕೇಸ್ ದಾಖಲಿಸಿದ್ದಾರೆ.

ಇಂದು ವಿಶ್ರಾಂತ ಕುಲಪತಿ ಮಾದಯ್ಯ ಅಂತ್ಯಕ್ರಿಯೆ; ಮೈಸೂರು ವಿವಿಗೆ ರಜೆ

ಮೈಸೂರು, ಮೇ 7(ಎಸ್‌ಬಿಡಿ)– ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಎಂ.ಮಾದಯ್ಯ ಅವರ ಅಂತ್ಯಕ್ರಿಯೆ ಬುಧವಾರ ನಡೆಯಲಿದ್ದು, ಮೃತರ ಗೌರವಾರ್ಥ ವಿವಿ ರಜೆ ಘೋಷಿಸಿದೆ. ವಿಶ್ವವಿದ್ಯಾನಿಲಯದ ಎಲ್ಲಾ ಕಚೇರಿ, ಘಟಕ, ಕಾಲೇಜು ಹಾಗೂ ಅಂಗಸಂಸ್ಥೆಗಳಿಗೆ ಬುಧವಾರ(ಮೇ 8) ರಜೆ ಘೋಷಿಸಿದ್ದು, ನಿಗದಿತ ಪರೀಕ್ಷೆ ಹಾಗೂ ತುರ್ತು ಕಾರ್ಯಗಳು ಎಂದಿನಂತೆ ನಡೆಯಲಿವೆ ಎಂದು ವಿವಿಯ ಕುಲಸಚಿವರು ಸುತ್ತೋಲೆಯಲ್ಲಿ ತಿಳಿಸಿದ್ದಾರೆ.



ಪ್ರೊ.ಎಂ.ಮಾದಯ್ಯ

ಮಧ್ಯಾಹ್ನ ಅಂತ್ಯಕ್ರಿಯೆ: ಭಾನುವಾರ ನಿಧನರಾದ ಎಂ.ಮಾದಯ್ಯ(88) ಅವರ ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ 2 ಗಂಟೆ ನಂತರ ಹೂಟಗಳ್ಳಿ ಸಮೀಪದ ಮುಕ್ತಿಧಾಮದಲ್ಲಿ ನಡೆಯಲಿದೆ. ಬೆಳಗ್ಗೆ 9ರಿಂದ ಮಧ್ಯಾಹ್ನದವರೆಗೆ ಸರಸ್ವತಿಪುರಂ 15ನೇ ಮುಖ್ಯರಸ್ತೆಯಲ್ಲಿನ ಅವರ ನಿವಾಸದ ಬಳಿ ಮಾದಯ್ಯ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆಯಬಹುದು ಎಂದು ಪ್ರೊ.ಶಿವರಾಜಪ್ಪ ತಿಳಿಸಿದ್ದಾರೆ.

ಮುಸ್ಲಿಂ ಮೀಸಲಾತಿ ಕುರಿತ ಬಿಜೆಪಿಯ ಅನಿಮೇಟೆಡ್ ವಿಡಿಯೋವನ್ನು 'ತಕ್ಷಣ' ತೆಗೆದುಹಾಕಿ

Xಗೆ ಚುನಾವಣಾ ಆಯೋಗ ಆದೇಶ

ನವದೆಹಲಿ: ಮುಸ್ಲಿಂ ಸಮುದಾಯದ ಮೀಸಲಾತಿಗೆ ಸಂಬಂಧಿಸಿದಂತೆ ಭಾರತೀಯ ಜನತಾ ಪಕ್ಷ(ಬಿಜೆಪಿ)ದ ಕರ್ನಾಟಕ ಘಟಕ ಹಂಚಿಕೊಂಡಿರುವ ಅನಿಮೇಟೆಡ್ ಕಾರ್ಟೂನ್ ವಿಡಿಯೋವನ್ನು ತಕ್ಷಣ ತೆಗೆದುಹಾಕುವಂತೆ ಕೇಂದ್ರ ಚುನಾವಣಾ ಆಯೋಗ ಮಂಗಳವಾರ ಸಾಮಾಜಿಕ ಮಾಧ್ಯಮ ವೇದಿಕೆ 'ಎಕ್ಸ್'ಗೆ ನಿರ್ದೇಶನ ನೀಡಿದೆ.

ಈ ಸಂಬಂಧ 'X'ನ ನೋಡಲ್ ಅಧಿಕಾರಿಗೆ ಬರೆದ ಪತ್ರದಲ್ಲಿ, ಕರ್ನಾಟಕ ಬಿಜೆಪಿ ಘಟಕ ಮಾಡಿರುವ ಪೋಸ್ಟ್ ಅಸ್ತಿತ್ವದಲ್ಲಿರುವ ಕಾನೂನು ಚೌಕಟ್ಟನ್ನು ಉಲ್ಲಂಘಿಸುತ್ತದೆ. ಆದ್ದರಿಂದ ಈ ಪೋಸ್ಟ್ ಅನ್ನು ತಕ್ಷಣ ತೆಗೆದುಹಾಕುವಂತೆ ಚುನಾವಣಾ ಆಯೋಗ, ಎಕ್ಸ್‌ಗೆ ನಿರ್ದೇಶನ ನೀಡಿದೆ. ಪತ್ರದ ಜೊತೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಜೆಪಿ ನಾಯಕರ ವಿರುದ್ಧ ಈಗಾಗಲೇ ದಾಖಲಾಗಿರುವ ಎಫ್‌ಐಆರ್ ಪ್ರತಿಯನ್ನು ಸಹ ಚುನಾವಣಾ ಆಯೋಗ ಲಗತ್ತಿಸಿದೆ.

ಕರ್ನಾಟಕದ ಮುಖ್ಯ ಚುನಾವಣಾಧಿಕಾರಿ ಈ ಸಂಬಂಧ ಎಫ್‌ಐಆರ್ ದಾಖಲಿಸಿದ್ದಾರೆ ಮತ್ತು ಮಾಹಿತಿ ತಂತ್ರಜ್ಞಾನ ಕಾಯ್ದೆ ಮತ್ತು ಐಟಿ (ಮಧ್ಯವರ್ತಿ ಮಾರ್ಗಸೂಚಿಗಳು ಮತ್ತು ಡಿಜಿಟಲ್ ಮಾಧ್ಯಮ ನೀತಿ ಸಂಹಿತೆ) ಪ್ರಕಾರ ಆಕ್ಷೇಪಾರ್ಹ ಪೋಸ್ಟ್ ಅನ್ನು ತೆಗೆದುಹಾಕಲು ಮೇ 5 ರಂದು ಕರ್ನಾಟಕ ಮುಖ್ಯ ಚುನಾವಣಾ ಅಧಿಕಾರಿಗಳು 'ಎಕ್ಸ್' ಗೆ ನಿರ್ದೇಶನ ನೀಡಿದ್ದಾರೆ. ಆದಾಗ್ಯೂ ಆ ಪೋಸ್ಟ್ ಅನ್ನು ಇನ್ನೂ ತೆಗೆದು ಹಾಕಿಲ್ಲ. ಆ ಪೋಸ್ಟ್ ಅನ್ನು ತಕ್ಷಣವೇ ತೆಗೆದು ಹಾಕಲು ನಿರ್ದೇಶಿಸಲಾಗಿದೆ" ಎಂದು ಕೇಂದ್ರ ಚುನಾವಣಾ ಆಯೋಗ ತಿಳಿಸಿದೆ.



ಕರ್ನಾಟಕದ ಉಳಿದ 14 ಲೋಕಸಭಾ ಸ್ಥಾನಗಳಲ್ಲಿ ಮತದಾನ ನಡೆಯುತ್ತಿರುವ ದಿನವೇ 'ಘೆ' ಗೆ ಚುನಾವಣಾ ಆಯೋಗ ಈಗ ಹೊಸ ನಿರ್ದೇಶನ ನೀಡಿದೆ ಬಿಜೆಪಿಯು ಮುಸ್ಲಿಂ ಮತ್ತು ಎಸ್‌ಸಿ/ಎಸ್‌ಟಿ ಸಮುದಾಯಗಳ ನಡುವೆ ದ್ವೇಷ ಉತ್ತೇಜಿಸುತ್ತಿದೆ ಎಂದು ಆರೋಪಿಸಿ ಕರ್ನಾಟಕ ಕಾಂಗ್ರೆಸ್, ಅನಿಮೇಟೆಡ್ ಕಾರ್ಟೂನ್ ವಿಡಿಯೋ ವಿರುದ್ಧ ರಾಜ್ಯ ಮುಖ್ಯ ಚುನಾವಣಾಧಿಕಾರಿಗೆ ದೂರು ಸಲ್ಲಿಸಿತ್ತು.

ಜೈಲಿನಿಂದ ಬಿಡುಗಡೆಯಾದರೂ ಕೇಜ್ರಿವಾಲ್ ಕಡತಕ್ಕೆ ಸಹಿ ಹಾಕಲು ಸಾಧ್ಯವಿಲ್ಲ

ಸುಪ್ರೀಂಕೋರ್ಟ್ ಸ್ಪಷ್ಟನೆ

ನವದೆಹಲಿ: ಅಬಕಾರಿ ನೀತಿ ಹಗರಣದಲ್ಲಿ ಬಂಧನಕ್ಕೀಡಾಗಿರುವ ದೆಹಲಿ ಸಿಎಂ ಅರವಿಂದ್ ಕೇಜ್ರಿವಾಲ್ ಜೈಲಿನಿಂದ ಬಿಡುಗಡೆಯಾದರೂ ಅವರು ಮುಖ್ಯಮಂತ್ರಿಯಾಗಿ ಕಡತಗಳಿಗೆ ಸಹಿ ಹಾಕಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.

ದೆಹಲಿ ಅಬಕಾರಿ ನೀತಿ ಹಗರಣ ಪ್ರಕರಣದಲ್ಲಿ ಬಂಧನದಲ್ಲಿರುವ ಸಿಎಂ ಅರವಿಂದ್ ಕೇಜ್ರಿವಾಲ್ ಅವರು ಸಲ್ಲಿಸಿರುವ ಮಧ್ಯಂತರ ಜಾಮೀನು ಅರ್ಜಿ ವಿಚಾರಣೆಯನ್ನು ಇಂದು ನಡೆಸಿದ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳಾದ ನ್ಯಾ ಸಂಜೀವ್ ಖನ್ನಾ ಮತ್ತು ನ್ಯಾ ದಿಪಾಂಕರ್ ದತ್ತಾ ಅವರನ್ನು ಒಳಗೊಂಡ ದ್ವಿ ಸದಸ್ಯ ನ್ಯಾಯಪೀಠ, ಅರವಿಂದ್ ಕೇಜ್ರಿವಾಲ್ ಅವರನ್ನು ಮಧ್ಯಂತರ ಜಾಮೀನಿನ ಮೇಲೆ ಬಿಡುಗಡೆ ಮಾಡಿದರೂ ಅವರು ತಮ್ಮ ಅಧಿಕೃತ ಕರ್ತವ್ಯಗಳನ್ನು ನಿರ್ವಹಿಸುವುದು ಸಾಧ್ಯವಿಲ್ಲ. ಏಕೆಂದರೆ ಅದು ವ್ಯವಸ್ಥೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಕೇಜ್ರಿವಾಲ್ ರೂಢಿಗತ ಅಪರಾಧಿ ಅಲ್ಲ: ಇದೇ ವೇಳೆ ಅರವಿಂದ್ ಕೇಜ್ರಿವಾಲ್ ಅವರು 'ರೂಢಿಗತ ಅಪರಾಧಿ' ಅಲ್ಲ ಎಂದು ಹೇಳಿದ ಪೀಠ, ಇದು ಒಂದು ಅಸಾಧಾರಣ ಸನ್ನಿವೇಶ. ಚುನಾವಣೆ ಐದು ವರ್ಷಕ್ಕೆ ಒಮ್ಮೆ ಬರುತ್ತದೆ. ಪ್ರತಿ ನಾಲ್ಕರಿಂದ ಆರು ತಿಂಗಳಿಗೆ ಬೆಳೆ ಕಟಾವು ಮಾಡುವ ರೀತಿ ಅಲ್ಲ ಇದು. ಅವರನ್ನು ಮಧ್ಯಂತರ ಜಾಮೀನಿನ ಅಡಿ ಬಿಡುಗಡೆ ಮಾಡಬಹುದೇ ಎಂಬುದನ್ನು ನಾವು ಆದ್ಯತೆ ಮೇರೆಗೆ ಪರಿಗಣಿಸಬೇಕಿದೆ ಎಂದು ಹೇಳಿತು.



ಲೋಕಸಭೆ ಚುನಾವಣೆ ಇಲ್ಲದೆ ಹೋಗಿದ್ದರೆ ಮಧ್ಯಂತರ ಜಾಮೀನಿನ ಪ್ರಶ್ನೆಯೇ ಉದ್ಭವಿಸುತ್ತಿರಲಿಲ್ಲ ಎಂದು ಹೇಳಿದ ನ್ಯಾ ದತ್ತಾ ಅವರು, ಇದು ಒಡೆತನ, ಸಾರ್ವಜನಿಕ ಹಿತಾಸಕ್ತಿಯ ಪ್ರಶ್ನೆ ಎಂಬ ನ್ಯಾ ಖನ್ನಾ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದರು.

ಆದರೆ ಅಬಕಾರಿ ನೀತಿ ಹಗರಣದಲ್ಲಿ ಸಿಎಂ ಪಾತ್ರ ಮುಖ್ಯವಾಗಿದೆ ಎಂಬ ಇಡಿ ಆರೋಪವನ್ನು ಗಮನಿಸಿದ ನ್ಯಾಯಪೀಠ, ಒಂದು ವೇಳೆ ನಾವು ನಿಮ್ಮನ್ನು ಬಿಡುಗಡೆ ಮಾಡಿದರೆ ನೀವು ಚುನಾವಣೆಯಲ್ಲಿ ಭಾಗವಹಿಸಲು ಅನುಮತಿ ಪಡೆಯುತ್ತೀರಿ. ನೀವು ಅಧಿಕೃತ ಕರ್ತವ್ಯಗಳನ್ನೂ ನಿಭಾಯಿಸುತ್ತೀರಿ. ಇದು ನಕಾರಾತ್ಮಕ ಪರಿಣಾಮ ಉಂಟು ಮಾಡಬಹುದು. ನಾವು ಸ್ಪಷ್ಟವಾಗಿ ಹೇಳುತ್ತೇವೆ. ನಾವು ನಿಮ್ಮನ್ನು ಬಿಡುಗಡೆ ಮಾಡಿದರೆ ನೀವು ಅಧಿಕೃತ ಕರ್ತವ್ಯ ನಿಭಾಯಿಸುವುದನ್ನು ನಾವು ಬಯಸುವುದಿಲ್ಲ ಎಂದು ಕೋರ್ಟ್ ಪುನರುಚ್ಚರಿಸಿತು.

ಕೋರ್ಟ್ ಸಲಹೆ ತಿರಸ್ಕರಿಸಿದ ಇಡಿ ಪರ ವಕೀಲರು: ಆದರೆ, ಕೋರ್ಟ್ ಸಲಹೆಯನ್ನು ತಿರಸ್ಕರಿಸಿದ ಜಾರಿ ನಿರ್ದೇಶನಾಲಯ, ಇದು ತಪ್ಪು ಉದಾಹರಣೆ ಸೃಷ್ಟಿಸಲಿದೆ ಎಂದು ವಾದಿಸಿತು. ಈ ಕುರಿತು ತಮ್ಮ ವಾದ ಮಂಡಿಸಿದ ಜಾರಿ ನಿರ್ದೇಶನಾಲಯದ ಪರ ವಕೀಲರು, ಸಾಮಾನ್ಯ ನಾಗರಿಕರಿಗೆ ಹೋಲಿಸಿದರೆ ರಾಜಕಾರಣಿಗೆ ವಿಶೇಷ ಹಕ್ಕುಗಳು ಇರುವುದಿಲ್ಲ. ವಿಚಾರಣೆ ಎದುರಿಸುತ್ತಿರುವ ಎಲ್ಲ ಸಂಸದರು ಮತ್ತು ಶಾಸಕರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕೇ? ಎಂದು ಪ್ರಶ್ನಿಸಿದರು.

ಈ ವೇಳೆ ಇಡಿ ಪ್ರಸ್ತಾಪಿಸಿದ ವಿಚಾರಗಳಿಗೆ ಪ್ರತಿಕ್ರಿಯೆ ನೀಡುವಂತೆ ಕೇಜ್ರಿವಾಲ್ ಪರ ಹಾಜರಾದ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ಅವರಿಗೆ ಕೋರ್ಟ್ ಸೂಚಿಸಿತು.

ಆದೇಶ ಕಾಯ್ದಿರಿಸಿದ ಸುಪ್ರೀಂ ಕೋರ್ಟ್: ಇದೇ ವೇಳೆ ವಾದ–ಪ್ರತಿವಾದಗಳನ್ನು ಆಲಿಸಿದ ಸುಪ್ರೀಂ ಕೋರ್ಟ್ ಕೇಜ್ರಿವಾಲ್ ಅವರ ಮಧ್ಯಂತರ ಜಾಮೀನು ಅರ್ಜಿಯ ಆದೇಶವನ್ನು ಕಾಯ್ದಿರಿಸಿದ್ದು, ಗುರುವಾರ ಅಥವಾ ಮುಂದಿನ ವಾರ ಮತ್ತೆ ವಿಚಾರಣೆ ನಡೆಸುವುದಾಗಿ ಪೀಠ ಹೇಳಿದೆ.

ದೆಹಲಿ ಅಬಕಾರಿ ನೀತಿ ಹಗರಣ: ಬಿಆರ್‌ಎಸ್ ನಾಯಕಿ ಕೆ.ಕವಿತಾ ನ್ಯಾಯಾಂಗ ಬಂಧನ ಅವಧಿ ವಿಸ್ತರಣೆ

ನವದೆಹಲಿ: ಆಪಾದಿತ ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಿಆರ್‌ಎಸ್ ನಾಯಕಿ ಕೆ. ಕವಿತಾ ಅವರ ನ್ಯಾಯಾಂಗ ಬಂಧನ ಅವಧಿಯನ್ನು ಮಂಗಳವಾರ ದೆಹಲಿ ನ್ಯಾಯಾಲಯ ಮೇ 14ರವರೆಗೆ ವಿಸ್ತರಿಸಿದೆ. ಸಿಬಿಐ ಮತ್ತು ಇ.ಡಿ ವಿಶೇಷ ನ್ಯಾಯಾಧೀಶರಾದ ಕಾವೇರಿ ಬವೇಜಾ ಅವರು ತೆಲಂಗಾಣ ಎಂಎಲ್‌ಸಿಯ ನ್ಯಾಯಾಂಗ ಬಂಧನದ ಅವಧಿ ಮುಗಿದ ಹಿನ್ನೆಲೆಯಲ್ಲಿ ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ ನಂತರ ಅವರ ಕಸ್ಟಡಿಯನ್ನು ವಿಸ್ತರಿಸಿ ಆದೇಶಿಸಿದ್ದಾರೆ. ವಿಚಾರಣೆಯ ಸಂದರ್ಭದಲ್ಲಿ, ಜಾರಿ ನಿರ್ದೇಶನಾಲಯವು ತನಿಖೆಯು ನಿರ್ಣಾಯಕ ಹಂತದಲ್ಲಿದೆ ಮತ್ತು ಕವಿತಾ ವಿರುದ್ಧ ಒಂದು ವಾರದೊಳಗೆ ಚಾರ್ಜ್‌ಶೀಟ್ ಸಲ್ಲಿಸಬಹುದು ಎಂದು ನ್ಯಾಯಾಲಯಕ್ಕೆ ತಿಳಿಸಿತು.



ಧಾರವಾಡಕ್ಕೆ 4 ವರ್ಷದ ಬಳಿಕ ಬಂದು ಮತದಾನ ಮಾಡಿ ಹೋದ ಶಾಸಕ ವಿನಯ್ ಕುಲಕರ್ಣಿ!



ಧಾರವಾಡ: ಕ್ಷೇತ್ರದ ಹೊರಗಿದ್ದುಕೊಂಡೇ ವಿಧಾನಸಭೆ ಚುನಾವಣೆಯಲ್ಲಿ ಜಯಭೇರಿ ಬಾರಿಸಿದ ಶಾಸಕ ವಿನಯ್ ಕುಲಕರ್ಣಿ ನಾಲ್ಕು ವರ್ಷದ ಬಳಿಕ ಧಾರವಾಡಕ್ಕೆ ಕಾಲಿಟ್ಟಿದ್ದಾರೆ.

ಜಿಲ್ಲಾ ಪಂಚಾಯತ್ ಸದಸ್ಯ ಯೋಗೀಶ್ ಗೌಡ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜೈಲುವಾಸ ಅನುಭವಿಸಿ, ಜಾಮೀನಿನ ಮೇಲೆ ಹೊರಗಿರುವ ವಿನಯ್ ಕುಲಕರ್ಣಿ ಅವರು ಯಾವುದೇ ಕಾರಣಕ್ಕೂ ಧಾರವಾಡ ಜಿಲ್ಲಾ ಪ್ರವೇಶ ಮಾಡಬಾರದು ಎಂದು ಸುಪ್ರೀಂ ಕೋರ್ಟ್ ನಿರ್ಬಂಧ ಹೇರಿದೆ. ಹೀಗಿದ್ದರೂ ವಿನಯ್ ಕುಲಕರ್ಣಿ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಧಾರವಾಡ ಗ್ರಾಮೀಣ ಕ್ಷೇತ್ರದಲ್ಲಿ ಸ್ಪರ್ಧಿಸಿ ಗೆಲುವು ಸಾಧಿಸಿದ್ದರು.

ಚುನಾವಣೆ ಬಳಿಕ ಹಲವು ಬಾರಿ ತಮಗೆ ಧಾರವಾಡ ಜಿಲ್ಲಾ ಪ್ರವೇಶಕ್ಕೆ ಅನುಮತಿ ನೀಡಬೇಕು ಎಂದು ನ್ಯಾಯಾಲಯಕ್ಕೆ ಅವರು ಅರ್ಜಿ ಸಲ್ಲಿಸುತ್ತಲೇ ಬಂದಿದ್ದರೂ ನ್ಯಾಯಾಲಯ ಮಾತ್ರ ಅವರ ಅರ್ಜಿಯನ್ನು ತಿರಸ್ಕರಿಸುತ್ತಲೇ ಬಂದಿದೆ. ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಮತದಾನ ಮಾಡುವ ಸಲುವಾಗಿ ಧಾರವಾಡಕ್ಕೆ ಹೋಗಲು ಅವಕಾಶ ನೀಡಬೇಕು ಎಂದು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಈ ನ್ಯಾಯಾಲಯ ಕೂಡ ಅವರ ಅರ್ಜಿ ತಿರಸ್ಕರಿಸಿದ ಕಾರಣ ಅವರು ಬೆಂಗಳೂರಿನ ಹೈಕೋರ್ಟ್ ಮೊರೆ ಹೋಗಿದ್ದರು.

ವಿನಯ್ ಕುಲಕರ್ಣಿ ಮನವಿಗೆ ಸ್ಪಂದಿಸಿದ ಹೈಕೋರ್ಟ್, ಲೋಕಸಭಾ ಚುನಾವಣೆಗೆ ಮತದಾನ ಮಾಡಿ ಬರಬಹುದು. ಮತಗಟ್ಟೆಗೆ ತೆರಳಿ ಮತದಾನ ಮಾಡಿದ ಕೂಡಲೇ ಧಾರವಾಡ ಬಿಟ್ಟು ಮತ್ತೆ ಹೊರಡಬೇಕು ಎಂದು ಆದೇಶಿಸಿತ್ತು. ಈ ಹಿನ್ನೆಲೆಯಲ್ಲಿ ಇಂದು ಧಾರವಾಡ ಸಪ್ತಾಪುರದಲ್ಲಿರುವ ಶಾರದಾ ಸ್ಕೂಲ್‌ನ ಮತಗಟ್ಟೆ 75ಕ್ಕೆ ಬಂದ ವಿನಯ್ ಕುಲಕರ್ಣಿ ತಮ್ಮ ಹಕ್ಕು ಚಲಾಯಿಸಿ ಮತ್ತೆ ಅಲ್ಲಿಂದ ತೆರಳಿದ್ದಾರೆ.

ಧಾರವಾಡಕ್ಕೆ ಬರುತ್ತಿದ್ದಂತೆ ಸೇರಿದ್ದ ವಿನಯ್ ಅವರ ಬೆಂಬಲಿಗರು ಅವರ ಪರ ಘೋಷಣೆಗಳನ್ನು ಕೂಗಿದರು. ಅವರ ಕೈ ಕುಲುಕಿ ಖುಷಿಪಟ್ಟರು. ವಿನಯ್ ಅವರು ಆಗಮಿಸುತ್ತಿದ್ದಂತೆ ಅವರ ಪತ್ನಿ ಶಿವಲೀಲಾ ಹಾಗೂ ಪುತ್ರಿ ವೈಶಾಲಿ ಕೂಡ ಹರ್ಷ ವ್ಯಕ್ತಪಡಿಸಿ ಅವರನ್ನು ಭೇಟಿಯಾದರು. ಅಲ್ಲದೇ ಕಾರ್ಯಕರ್ತರು ವಿನಯ್ ಅವರ ಕಾರಿನ ಮೇಲೆ ಹೂಮಳೆ ಸುರಿಸಿದರು. ವಿನಯ್ ಅವರಿಗೆ ಶಾಸಕ ಎನ್.ಎಚ್.ಕೋನರೆಡ್ಡಿ ಹಾಗೂ ಧಾರವಾಡ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವಿನೋದ್ ಅಸೂಟಿ ಸಾಥ್ ನೀಡಿದರು.

ಕೇರಳದಲ್ಲಿ ವೆಸ್ಟ್ ನೈಲ್ ಜ್ವರದ ಭೀತಿ: ಐದು ಪ್ರಕರಣ ದಾಖಲು

ತೀವ್ರ ಕಟ್ಟೆಚ್ಚರ, ಸೋಂಕಿಗೆ ಚಿಕಿತ್ಸೆಯೇ ಇಲ್ಲ!

ಕೊಚ್ಚಿನ್: ನಿಫಾ, ಕೋವಿಡ್, ಹಕ್ಕಿಜ್ವರ, ಹಂದಿ ಜ್ವರದ ಭೀತಿ ಬೆನ್ನಲ್ಲೇ ಇದೀಗ ಕೇರಳದಲ್ಲಿ ವೆಸ್ಟ್ ನೈಲ್ ಜ್ವರದ ಭೀತಿ ಎದುರಾಗಿದ್ದು, ಈ ವರೆಗೂ ಕೇರಳದಲ್ಲಿ ಇಂತಹ ಐದು ಪ್ರಕರಣಗಳು ವರದಿಯಾಗಿವೆ.

ಉತ್ತರ ಕೇರಳದ ಕೋಝಿಕ್ಕೋಡ್ ಜಿಲ್ಲೆಯಲ್ಲಿ ಪಶ್ಚಿಮ ನೈಲ್ ಜ್ವರದ ಐದು ಪ್ರಕರಣಗಳು ದೃಢಪಟ್ಟಿವೆ ಎಂದು ಆರೋಗ್ಯ ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ. ಮಕ್ಕಳನ್ನು ಒಳಗೊಂಡಂತೆ ಸೋಂಕಿತ ವ್ಯಕ್ತಿಗಳು ಚಿಕಿತ್ಸೆ ಬಳಿಕ ಗುಣಮುಖರಾಗಿ ಅವರ ಮನೆಗಳಿಗೆ ಹಿಂತಿರುಗಿದ್ದಾರೆ, ಅವರು ವಾಸಿಸುವ ಪ್ರದೇಶಗಳಿಂದ ಯಾವುದೇ ಹೊಸ ಪ್ರಕರಣಗಳು ವರದಿಯಾಗಿಲ್ಲ ಎಂದು ಜಿಲ್ಲಾ ಕಣ್ಗಾವಲು ತಂಡದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಪ್ರಸ್ತುತ ಈ ವೆಸ್ಟ್ ನೈಲ್ ಜ್ವರ, ಮನುಷ್ಯರಿಂದ ಮನುಷ್ಯರಿಗೆ ಹರುಡುತ್ತದೆ ಎಂದು ಹೇಳಲಾಗಿದ್ದು, ಹಲವು ಸೋಂಕಿತರು ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಅವರು ಹೇಳಿದರು. ರೋಗದ ಲಕ್ಷಣಗಳನ್ನು ಪ್ರದರ್ಶಿಸಿದ ಮತ್ತು ಚಿಕಿತ್ಸೆಗೆ ಒಳಗಾದವರ ಮಾದರಿಗಳನ್ನು ಪುಣೆಯ ರಾಷ್ಟ್ರೀಯ ವೈರಾಲಜಿ ಸಂಸ್ಥೆಗೆ ಕಳುಹಿಸಲಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಈ ಪರೀಕ್ಷೆಯ ಫಲಿತಾಂಶಗಳು ಈಗ ಬಂದಿದ್ದು, ಅವರು ವೆಸ್ಟ್ ನೈಲ್ ಜ್ವರದಿಂದ ಬಳಲುತ್ತಿದ್ದಾರೆ. ಅವರಿಗೆ ಸೂಕ್ತಕಾಲದಲ್ಲಿ ಚಿಕಿತ್ಸೆ ನೀಡಲಾಗಿದ್ದರಿಂದ ಅವರೆಲ್ಲರೂ ಈಗ ಉತ್ತಮವಾಗಿ ಚೇತರಿಸಿಕೊಳ್ಳುತ್ತಿದ್ದಾರೆ ಎಂದು ಅವರು ಹೇಳಿದರು.

ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಸುಲಭವಾಗಿ ಹರಡುವ ಈ ವೆಸ್ಟ್‌ನೈಲ್ ವೈರಸ್ ಈ ಹಿಂದೆ ಆಫ್ರಿಕಾದಿಂದ ಏಷ್ಯಾ, ಯುರೋಪ್ ಹಾಗೂ ಉತ್ತರ ಅಮೆರಿಕಾಗೆ ಲಗ್ಗೆಯಿಟ್ಟಿತ್ತು. ಇದೀಗ ಭಾರತದಲ್ಲೂ ಇದರ ಸೋಂಕಿತರು ಕಂಡುಬಂದಿದ್ದಾರೆ. ಕಡಿಮೆ ತಾಪಮಾನ ಮತ್ತು ಅತಿಯಾದ ಮಳೆ ಇವುಗಳ ಸಂತತಿಗೆ ಹೆಚ್ಚು ಆಹ್ಲಾದಕರ ವಾತಾವರಣವನ್ನು ನಿರ್ಮಾಣ ಮಾಡಿಕೊಡುತ್ತವೆ. ಸೊಳ್ಳೆಗಳ ಮೂಲಕ ಈ ಕಾಯಿಲೆ ಬಹಳ ವೇಗವಾಗಿ ಹರಡುವ ಸಾಧ್ಯತೆ ಇದೆ. ಈ ಸಂದರ್ಭದಲ್ಲಿ ಕೇವಲ ಇದು ಮಾತ್ರವಲ್ಲದೆ ಹಲವು ಬಗೆಯ ಕಾಯಿಲೆಗಳನ್ನು ನಾವು ನಿರೀಕ್ಷೆ ಮಾಡಬಹುದು. ಸೊಳ್ಳೆ ಕಚ್ಚುವುದರಿಂದ ಹರಡುವ ಈ ಕಾಯಿಲೆ ಮನುಷ್ಯನ ನರಮಂಡಲದ ಸಮಸ್ಯೆಗಳಿಗೆ ಕಾರಣವಾಗುತ್ತದೆ.



ರೋಗಲಕ್ಷಣ: ಸಾಮಾನ್ಯವಾಗಿ ಮೊಟ್ಟಮೊದಲ ಬಾರಿಗೆ ಈ ಸೋಂಕಿಗೆ ಒಳಗಾದ ಜನರಲ್ಲಿ ಯಾವುದೇ ಬಗೆಯ ರೋಗ ಲಕ್ಷಣಗಳು ಕಂಡುಬರುವುದಿಲ್ಲ. ಆದರೆ ಆನಂತರದಲ್ಲಿ ತಲೆನೋವು, ಜ್ವರ, ಚರ್ಮದಲ್ಲಿ ದದ್ದುಗಳು, ಮೈಕೈ ನೋವು ಮತ್ತು ಉರಿಯೂತದಿಂದ ಬಳಲುವ ದುಗ್ಧರಸ ಗ್ರಂಥಿಗಳು ಕಾಣಿಸುತ್ತವೆ.

ಈ ವೈರಸ್ ರೋಗ ಲಕ್ಷಣಗಳು ವ್ಯಕ್ತಿಯಲ್ಲಿ ಕೆಲವು ದಿನಗಳಿಂದ ಹಲವು ವಾರಗಳವರೆಗೆ ಇರಬಹುದು. ಅಪ್ಪಿತಪ್ಪಿ ವೈರಸ್ ಮೆದುಳಿನ ಭಾಗಕ್ಕೆ ಸೇರ್ಪಡೆಯಾದರೆ, ಅಲ್ಲಿ ಮೆದುಳಿನ ಜೀವಕೋಶಗಳ ಉರಿಯೂತ ಉಂಟಾಗುತ್ತದೆ. ಮುಖ್ಯವಾಗಿ ಬೆನ್ನುಹುರಿಯಲ್ಲಿ ಸಮಸ್ಯೆ ಕಾರಣ ಮೆನಿಂಜೈಟಿಸ್ ಕಂಡುಬರುತ್ತದೆ.

ಮಕ್ಕಳು, ದೊಡ್ಡವರು ಮತ್ತು ವಯಸ್ಸಾದವರು ಮತ್ತು ಯಾರಿಗೆ ದೇಹದಲ್ಲಿ ರೋಗನಿರೋಧಕ ಶಕ್ತಿ ತುಂಬ ದುರ್ಬಲವಾಗಿರುತ್ತದೆ. ಅಂತಹವರು ಈ ವಿಚಾರದಲ್ಲಿ ತುಂಬಾ ಎಚ್ಚರಿಕೆ ಮತ್ತು ಆರೋಗ್ಯದಲ್ಲಿ ಜಾಗ್ರತೆಯನ್ನು ವಹಿಸಬೇಕು.

ಈ ವೈರಸ್ ಸೋಂಕಿಗೆ ಚಿಕಿತ್ಸೆಯೇ ಇಲ್ಲ: ವಿಶ್ವ ಆರೋಗ್ಯ ಸಂಸ್ಥೆ ಮೊದಲೇ ಹೇಳಿದ ಹಾಗೆ ಮನುಷ್ಯರಿಗೆ ಎದುರಾಗುವ ವೆಸ್ಟ್ ನೈಲ್ ವೈರಸ್ ಕಾಯಿಲೆಗೆ ಪ್ರಸ್ತುತ ಯಾವುದೇ ಚಿಕಿತ್ಸೆ ಇಲ್ಲ. ಆದರೆ ಸೊಳ್ಳೆಗಳ ಹಾವಳಿಯನ್ನು ಮತ್ತು ಸಂತತಿಯನ್ನು ತಡೆಯುವುದು ಇದಕ್ಕಿರುವ ಪ್ರಮುಖ ಪರಿಹಾರವಾಗಿದೆ.

ಮೈಸೂರು ಮಿತ್ರ ಬುಧವಾರ 8 ಮೇ 2024

ವೈಭವದಿಂದ ನಡೆದ ಶ್ರೀ ಲಕ್ಷ್ಮೀದೇವಮ್ಮನವರ ಸಿಡಿ ಹಬ್ಬ



ಕೆ.ಆರ್.ಪೇಟೆ, ಮೇ 7– ತಾಲೂಕಿನ ಅಗ್ರಹಾರಬಾಚಹಳ್ಳಿ ಗ್ರಾಮದಲ್ಲಿ ಗ್ರಾಮ ದೇವತೆ ಶ್ರೀ ಲಕ್ಷ್ಮೀದೇವಮ್ಮನವರ ಸಿಡಿಹಬ್ಬವು ಐದು ದಿನಗಳ ಕಾಲ ಸಡಗರ ಸಂಭ್ರಮ ದಿಂದ ನಡೆಯಿತು.

ಸಿಡಿ ಹಬ್ಬದ ಅಂಗವಾಗಿ ರಂಗಕುಣಿತ, ಹೂವಿನ ರಥೋತ್ಸವ(ಚಿಕ್ಕತೇರು), ಸಿಡಿ, ಬಾಯಿಬೀಗ, ಕನ್ನಂಕಾಡಿ ಉತ್ಸವ, ಕಳಸ ಮೆರವಣಿಗೆ, ಸರ್ವಾಲಂಕೃತ ವಾಹನ ದಲ್ಲಿ ಶ್ರೀ ಲಕ್ಷ್ಮೀದೇವಿ ಅಮ್ಮನವರ ಭವ್ಯ ಮೆರವಣಿಗೆ, ಬ್ರಹ್ಮ ರಥೋತ್ಸವ, ಕೋಲಾಟ, ಓಕುಳಿಯಾಟ, ದೇವರ ದರ್ಶನ ವಿಶೇಷ ಪೂಜಾ ಕಾರ್ಯಕ್ರಮ, ಸೋಮದೇವರ ಕುಣಿತ ಸೇರಿದಂತೆ ಹತ್ತು ಹಲವು ಕಾರ್ಯ ಕ್ರಮಗಳು ಐದು ದಿನಗಳ ಕಾಲ ಜಾನಪದ ಶೈಲಿಯಲ್ಲಿ ಯಶಸ್ವಿಯಾಗಿ ನಡೆದವು.

ಮೇ 4ರಂದು ಶನಿವಾರ ಶ್ರೀ ಲಕ್ಷ್ಮೀ ದೇವಿ ಅಮ್ಮನವರ ಬ್ರಹ್ಮ ರಥೋತ್ಸವವು ವಿಜೃಂಭಣೆಯಿಂದ ಸುಮಾರು ಒಂದು ಕಿ.ಮೀ ದೂರ ಹೊಲಗದ್ದೆಗಳ ಕ್ಲಿಷ್ಟಕರ ದಾರಿಯಲ್ಲಿ ಸುಮಾರು 60ಅಡಿ ಎತ್ತರದ ರಥವು ನಿರ್ವಿಘ್ನವಾಗಿ ನಡೆಯುವ ಮೂಲಕ ನೆರೆದಿದ್ದ ಭಕ್ತರನ್ನು ಮೂಕವಿಸ್ಮಿತಗೊಳಿಸಿತು.

ಶನಿವಾರ ಸಂಜೆ ದೇವಾಲಯದ ಆವರಣ ದಲ್ಲಿ ಶ್ರೀ ಲಕ್ಷ್ಮೀದೇವಿ ಕೃಪಾ ಪೋಷಿತ ನಾಟಕ ಮಂಡಳಿಯವರು ಅಭಿನಯಿಸಿದ ಕುರುಕ್ಷೇತ್ರ ಅಥವಾ ಧರ್ಮರಾಜ್ಯ ಸ್ಥಾಪನೆ ಪೌರಾಣಿಕ ನಾಟಕವನ್ನು ಸಿಡಿಹಬ್ಬಕ್ಕೆ ಆಗಮಿಸಿದ್ದ ಸಾವಿರಾರು ಭಕ್ತಾದಿಗಳು ವೀಕ್ಷಿಸುವ ಮೂಲಕ ಮೆಚ್ಚುಗೆ ವ್ಯಕ್ತಪಡಿಸಿದರು.

ಮೇ 5 ಭಾನುವಾರ ಜಾತ್ರೆ ಕೋಲಾಟ, ಓಕುಳಿಯಾಟ, ದೇವರ ದರ್ಶನ ಹಣ್ಣು ಕಾಯಿ ಪೂಜೆ ನಡೆಯಿತು. ಮೇ 6ರಂದು ಸೋಮವಾರ ಸಂಜೆ ಸೋಮದೇವರ ಕುಣಿತ, ಸೋಮ ದೇವರಿಗೆ ವಿಶೇಷ ಪೂಜಾ ಕಾರ್ಯಕ್ರಮ ಮನೆ ಮನೆಗಳಲ್ಲಿ ಪೂಜೆ ಸಲ್ಲಿಸುವ ಮೂಲಕ ತಮ್ಮ ಭಕ್ತಿ ಭಾವ ಪ್ರದರ್ಶನ ಮಾಡಿದರು.

ಭಕ್ತಾದಿಗಳಿಗೆ ಕೋಸಂಬರಿ ಪ್ರಸಾದ, ಮಜ್ಜಿಗೆ ಪಾನಕ ವಿತರಣೆ ಮಾಡಲಾಯಿತು. ಗ್ರಾಮದ ದೇವರ ಒಕ್ಕಲಿನ ಮನೆಗಳಲ್ಲಿ ಸೋಮ ದೇವರುಗಳನ್ನು ಪ್ರತಿಷ್ಠಾಪಿಸಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಕಳೆದ ಗುರುವಾರದಂದು ರಂಗನ ಕುಣಿತ ದಿಂದ ಆರಂಭವಾಗಿ ಐದು ದಿನಗಳಿಂದ ನಡೆಯುತ್ತಿದ್ದ ಸಿಡಿ ಹಬ್ಬವು ಸೋಮವಾರ ರಾತ್ರಿಯಿಡೀ ನಡೆದ ಸೋಮದೇವರ ವಿಶೇಷ ಪೂಜೆಯೊಂದಿಗೆ ಸಂಪನ್ನಗೊಂಡಿತು. ಐದು ದಿನಗಳ ಕಾಲ ಸಡಗರ ಸಂಭ್ರಮದಿಂದ ನಡೆದ ಸಿಡಿಹಬ್ಬದ ಸಂಭ್ರಮದಲ್ಲಿ ಸುಮಾರು 15 ಸಾವಿರಕ್ಕೂ ಹೆಚ್ಚಿನ ಭಕ್ತಾದಿಗಳು ಭಾಗ ವಹಿಸಿ ದೇವಿಯ ಕೃಪೆಗೆ ಪಾತ್ರರಾದರು.

ಸಂಸದ ಪ್ರಜ್ವಲ್ ಪೆನ್‌ಡ್ರೈವ್ ಪ್ರಕರಣ

ಡಿಕೆಶಿ, ಶಿವರಾಮೇಗೌಡ ವಿರುದ್ಧ ದಳಪತಿಗಳ ಬೃಹತ್ ಪ್ರತಿಭಟನೆ

ಪ್ರಕರಣವನ್ನು ಸಿಬಿಐಗೆ ವಹಿಸಲು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಆಗ್ರಹ



ಮಂಡ್ಯ,ಏ.7– ಸಂಸದ ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಪ್ರಕರಣಕ್ಕೆ ಸಂಬಂಧಿಸಿದಂತೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಮಾಜಿ ಸಂಸದ ಎಲ್.ಆರ್. ಶಿವರಾಮೇಗೌಡ ವಿರುದ್ಧ ಜಾತ್ಯಾತೀತ ಜನತಾದಳದ ಜಿಲ್ಲಾ ಘಟಕ ಮಂಗಳವಾರ ಬೃಹತ್ ಪ್ರತಿಭಟನೆ ನಡೆಸಿತು.

ನಗರದ ಸರ್‌ಎಂವಿ ಪ್ರತಿಮೆ ಎದುರು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ನೇತೃತ್ವದಲ್ಲಿ ಜಮಾವಣೆ ಗೊಂಡ ನೂರಾರು ಮಂದಿ ಕಾರ್ಯಕರ್ತರು ಪ್ರಕರಣವನ್ನು ಸಿಬಿಐಗೆ ಒಪ್ಪಿಸಬೇಕು. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಕುಟುಂಬಕ್ಕೆ ಚ್ಯುತಿ ತರಲು ಮುಂದಾಗಿದ್ದಾರೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವ ಕುಮಾರ್, ಮಾಜಿ ಸಂಸದ ಎಲ್.ಆರ್.ಶಿವರಾಮೇ ಗೌಡ ಪ್ರತಿಕೃತಿ ದಹಿಸಿ ಆಕ್ರೋಶ ವ್ಯಕ್ತಪಡಿಸಿದರು.

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿ, ರಾಜ್ಯದ ಹೆಣ್ಣುಮಕ್ಕಳ ರಕ್ಷಣೆ ಮಾಡುವ ಜವಾಬ್ದಾರಿ ಸರ್ಕಾರ ದಾಗಿದೆ. ಆದರೆ ಪ್ರಜ್ವಲ್ ಮಾಡಿರುವ ಕೃತ್ಯದ ಬಗ್ಗೆ SIT ತನಿಖೆ ನಡೆಸುತ್ತಿದೆ. ಸರ್ಕಾರದ ಡಿಸಿಎಂ ಕೆಲಸಕ್ಕೆ ಬಾರದ ನಾಯಕನನ್ನು ಮುಂದೆ ಇಟ್ಟುಕೊಂಡು ಇವತ್ತು ಲಕ್ಷಾಂತರ ಪೆನ್‌ಡ್ರೈವ್ ಮಾಡಿ ಹಂಚಿರುವುದು ಹೆಣ್ಣು ಮಕ್ಕಳಿಗೆ ಮಾಡಿರುವ ದೊಡ್ಡ ದ್ರೋಹ. ಮಂಡ್ಯದಲ್ಲಿ ಪ್ರತಿಭಟನೆ ನಡೆಸಿ ಡಿಸಿಎಂ ನಡೆ ಖಂಡಿಸಿದ್ದೇವೆ ಎಂದರು.

ಮುಂದಿನ ದಿನಗಳಲ್ಲಿ ಎಲ್ಲಾ ವಿಧಾನಸಭಾ ಕ್ಷೇತ್ರದಲ್ಲಿ ಉಗ್ರ ಹೋರಾಟ ಮಾಡಲಿದ್ದೇವೆ. ನಾಳೆ ನಾಗಮಂಗಲ ದಲ್ಲೂ ಬೃಹತ್ ಹೋರಾಟ ಮಾಡುತ್ತಿದ್ದು, ಎಸ್‌ಐಟಿ ರಾಜ್ಯ ಸರ್ಕಾರದ ಕೈಗೊಂಬೆಯಾಗಿ ಕೆಲಸ ಮಾಡುತ್ತಿದೆ. ಈ ಪ್ರಕರಣವನ್ನು ಸಿಬಿಐಗೆ ವಹಿಸಿ ತನಿಖೆ ನಡೆಸಿ ಹೆಣ್ಣುಮಕ್ಕಳಿಗೆ ನ್ಯಾಯಸಿಗಬೇಕು ಎಂದು ಆಗ್ರಹಿಸಿದರು.

ಹಾಸನದ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ ಪೆನ್ ಡ್ರೈವ್ ಹಂಚಿಕೆ ಮಾಡಿ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಕುಟುಂಬಕ್ಕೆ ಕಳಂಕ ತರಲು ಕಾಂಗ್ರೆಸ್ ನಾಯಕರು ಷಡ್ಯಂತ್ರ ರೂಪಿಸಿದ್ದಾರೆ. ಪೆನ್‌ಡ್ರೈವ್ ಹಿಂದಿನ ರಾಜಕೀಯ ದುರುದ್ದೇಶ ಬಯಲಾಗಿದೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಾಜಿ ಸಂಸದ ಎಲ್.ಆರ್.ಶಿವ ರಾಮೇಗೌಡ ಸೇರಿದಂತೆ ಕಾಂಗ್ರೆಸ್‌ನ ಹಲವು ನಾಯಕರು ಭಾಗಿಯಾಗಿರುವುದು ಕಂಡು ಬಂದಿದೆ ಎಂದು ಹೇಳಿದರು.

ಮಾಜಿ ಪ್ರಧಾನಿ ದೇವೇಗೌಡರ ಕುಟುಂಬವನ್ನು ಗುರಿಯಾಗಿಸಿ ಅವರ ಕುಟುಂಬಕ್ಕೆ ಚ್ಯುತಿ ತರಲು ಮುಂದಾಗಿದ್ದು, ಬೀದಿ ಬೀದಿಯಲ್ಲಿ ಪೆನ್‌ಡ್ರೈವ್ ಹಂಚಿಕೆ ಮಾಡುವ ಮೂಲಕ ಮಹಿಳೆಯರ ಮಾನಹಾನಿ ಮಾಡಲಾಗಿದೆ. ಪೆನ್‌ಡ್ರೈವ್ ಪ್ರಕರಣದ ಹಿಂದೆ ದೊಡ್ಡ ಷಡ್ಯಂತ್ರ ಅಡಗಿದೆ. ಇದರ ಸತ್ಯಾಸತ್ಯತೆ ಹೊರ ಬರಬೇಕಾಗಿದ್ದು, ರಾಜ್ಯದ ಕಾಂಗ್ರೆಸ್ ಸರ್ಕಾರ ವಿಶೇಷ ತನಿಖಾ ತಂಡದ ಮೇಲೆ ಪ್ರಭಾವ ಬೀರುತ್ತಿರುವುದು ಬೆಳಕಿಗೆ ಬರುತ್ತಿದೆ, ಎಸ್‌ಐಟಿ ತನಿಖೆ ಕೈ ಬಿಟ್ಟು ಸಿಬಿಐಗೆ ಪ್ರಕರಣ ವಹಿಸುವಂತೆ ಒತ್ತಾಯಿಸಿದರು.

ಜೆಡಿಎಸ್ ಪ್ರತಿಭಟನೆ ವೇಳೆ ಹೈಡ್ರಾಮಾ: ಡಿಕೆಶಿ ಪ್ರತಿಕೃತಿಗೆ ಜೆಡಿಎಸ್ ಕಾರ್ಯಕರ್ತರಿಂದ ಚಪ್ಪಲಿ ಹಾರ ಹಾಕುವ ವೇಳೆ ಪೊಲೀಸರು, ಜೆಡಿಎಸ್ ಕಾರ್ಯಕರ್ತರ ನಡುವೆ ಗಲಾಟೆ ನಡೆಯಿತು. ಡಿಕೆಶಿ ಪ್ರತಿಕೃತಿಗೆ ಚಪ್ಪಲಿ ಹಾರ ಹಾಕಬೇಡಿ ಎಂದ ಪೊಲೀಸರು, ಮನವಿ ಮಾಡಿ, ಈ ವೇಳೆ ಪ್ರತಿಕೃತಿಯನ್ನು ಕಿತ್ತುಕೊಂಡರು. ಈ ನಡುವೆ ಪೊಲೀಸರು ಹಾಗೂ ಜೆಡಿಎಸ್ ಕಾರ್ಯಕರ್ತರ ನಡುವೆ ಮಾತಿನ ಚಕಮಕಿ ನಡೆದು ಪ್ರತಿಭಟನಾ ಸ್ಥಳದಲ್ಲಿ ಕೆಲಕಾಲ ಗೊಂದಲದ ವಾತಾವರಣ ನಿರ್ಮಾಣವಾಯಿತು.

ಈ ವೇಳೆ ಪೊಲೀಸರ ನಡೆಗೆ ಆಕ್ರೋಶ ವ್ಯಕ್ತಪಡಿಸಿದ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಪೊಲೀಸರು ಡಿಕೆಶಿ ಪ್ರತಿಕೃತಿ ಕೊಂಡೊಯ್ದ ಕುರಿತು ಮಾತನಾಡಿ, ಪೊಲೀಸ್ ಮುಖ್ಯಸ್ಥರು ಈಗ ಬಂದು ಉತ್ತರ ಕೊಡಬೇಕು. ದೇಶದ ಮಾಜಿ ಪ್ರಧಾನಿ ಭಾವಚಿತ್ರ ಸುಡುವಾಗ ಕತ್ತೆ ಮೇಯಿಸುತ್ತಿದ್ರಾ? ಒಬ್ಬರ ಏಜೆಂಟ್ ಆಗಿ ನೀವು ಕೆಲಸ ಮಾಡಬೇಡಿ. ಇದೊಂದು ಧರ್ಮಯುದ್ಧ. ಹೆಣ್ಣುಮಕ್ಕಳ ಮಾನಹಾನಿ ಮಾಡುವ ಕೆಲಸ ಡಿಕೆಶಿ ಮಾಡಿದ್ದಾರೆ. ಎಸ್‌ಐಟಿ ತನಿಖೆಯಿಂದ ನ್ಯಾಯ ಸಿಗುವ ನಂಬಿಕೆ ಇಲ್ಲ. ಈ ಪ್ರಕರಣ ಸಿಬಿಐಗೆ ನೀಡಬೇಕು. ರಾಜಕೀಯ ಪಿತೂರಿಗಳು ಹೊರಬರಬೇಕು ಎಂದು ಕಿಡಿಕಾರಿದರು.

ಪ್ರತಿಭಟನೆ ವೇಳೆ ಶಾಸಕ ಹೆಚ್.ಟಿ.ಮಂಜು, ಮಾಜಿ ಶಾಸಕರಾದ ಡಾ.ಕೆ.ಅನ್ನದಾನಿ, ಕೆ.ಸುರೇಶ್‌ಗೌಡ, ರವೀಂದ್ರ ಶ್ರೀಕಂಠಯ್ಯ, ಕೆ.ಟಿ.ಶ್ರೀಕಂಠೇಗೌಡ, ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್ ಮುಖಂಡರಾದ ಬಿ.ಆರ್.ರಾಮಚಂದ್ರ ಎಂ.ಎಸ್.ರಘುನಂದನ್, ಅಮರಾವತಿ ಚಂದ್ರಶೇಖರ್, ಕೆ.ಎಸ್.ವಿಜಯಾನಂದ, ಸುರೇಶ್, ನಗರಸಭಾ ಸದಸ್ಯರಾದ ಮಂಜುಳಾ ಉದಯ್‌ಶಂಕರ್, ಮೀನಾಕ್ಷಿ ಪುಟ್ಟಸ್ವಾಮಿ, ನಾಗೇಶ್ ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ಬಿಂಡಿಗನವಿಲೆ ಸುತ್ತ–ಮುತ್ತ ಭಾರಿ ಮಳೆ

ನೆಲಕ್ಕುರುಳಿದ ಮರಗಳು, ವಿದ್ಯುತ್ ಕಂಬಗಳು



ರಾಮಚಂದ್ರ ಅಗ್ರಹಾರ ಗ್ರಾಮದ ಕಾಳೇಗೌಡ ಎಂಬುವರಿಗೆ ಸೇರಿದ ನೂರಾರು ಬಾಳೆಗಿಡಗಳು ನೆಲಕ್ಕುರುಳಿರುವುದು.

ನಾಗಮಂಗಲ, ಮೇ 7– ತಾಲೂಕಿನ ಬಿಂಡಿಗನವಿಲೆ ಸುತ್ತ–ಮುತ್ತ ಸೋಮವಾರ ಮಧ್ಯರಾತ್ರಿ ಸುರಿದ ಧಾರಾಕಾರ ಮಳೆಯಿಂದಾಗಿ ಅನೇಕ ಗಿಡಮರಗಳು ಮತ್ತು ವಿದ್ಯುತ್ ಕಂಬಗಳು ನೆಲಕ್ಕುರುಳಿ ಸಂಚಾರ ಅಸ್ತವ್ಯಸ್ತಗೊಂಡಿದ್ದು, ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ.

ಅನೇಕ ದಿನಗಳಿಂದ ಬಿಸಿಲಿನ ಝಳದಿಂದಾಗಿ ತತ್ತರಿಸಿದ್ದ ಗ್ರಾಮದಲ್ಲಿ ಸೋಮವಾರ ತಡರಾತ್ರಿ ಸುರಿದ ಮಳೆ ಇಳೆಯನ್ನು ತಂಪಾಗಿಸಿದೆ. ಸಂತೆಕೊಪ್ಪಲು, ಕಂಬದಹಳ್ಳಿ, ಸಾತೇನಹಳ್ಳಿ, ತಟ್ಟೆಕೆರೆ, ಅದ್ದೀಹಳ್ಳಿ ಗ್ರಾಮದ ಸುತ್ತಮುತ್ತ ಬಿರುಗಾಳಿ ಸಹಿತ ಗುಡುಗು ಮಿಂಚಿನೊಂದಿಗೆ ಭಾರಿ ಮಳೆಯಾಗಿದ್ದು, ಕೆಲವು ತೋಟಗಳಲ್ಲಿ ನೀರು ನಿಂತಿದ್ದು, ಕೃಷಿ ಚಟುವಟಿಕೆಗೆ ಅನುಕೂಲವಾಗಿದೆ.

ಹೋಬಳಿಯ ಸಂತೆಕೊಪ್ಪಲು ಗ್ರಾಮದ ಬಳಿ ಬಿರುಗಾಳಿ ಸಹಿತ ಮಳೆಯಾಗಿದ್ದು, ಅನೇಕ ಮರಗಳು ಧರೆಗುರುಳಿ ಸಂಚಾರ ಅಸ್ತವ್ಯಸ್ತಗೊಂಡಿದೆ. ಜೊತೆಗೆ ವಿದ್ಯುತ್ ತಂತಿಗಳ ಮೇಲೆ ಮರದ ಕೊಂಬೆಗಳು ಬಿದ್ದ ಪರಿಣಾಮ ಕಂಬಗಳು ನೆಲಕಚ್ಚಿದ್ದು, ಗಂಟೆಗಳ ಕಾಲ ವಿದ್ಯುತ್ ವ್ಯತ್ಯಯ ಉಂಟಾಗಿತ್ತು.

ಇದೇ ಹೋಬಳಿಯ ರಾಮಚಂದ್ರ ಅಗ್ರಹಾರ ಗ್ರಾಮದ ಎಲ್ಲೆಯ ಜಮೀನಿನ ಮಾಲೀಕ ಕಾಳೇಗೌಡ ಬೆಳೆದಿದ್ದ ನೂರಾರು ಬಾಳೆಗಿಡಗಳು ನೆಲಕ್ಕುರುಳಿದ್ದು, ಲಕ್ಷಾಂತರ ರೂ. ನಷ್ಟವುಂಟಾಗಿದೆ. ಹೊಣಕೆರೆ ಹೋಬಳಿಯ ಬೋಗಾದಿಯ ವಿಶ್ವನಾಥ್ ಮತ್ತು ಶ್ರೀರಾಮನಹಳ್ಳಿ ಗ್ರಾಮದ ತೆಂಗಿನಮರಗಳು ಸಿಡಿಲಿಗೆ ಆಹುತಿಯಾಗಿವೆ.

ಬಲಮುರಿಯಲ್ಲಿ ಮುಳುಗಿ ಯುವಕ ಸಾವು

ಶ್ರೀರಂಗಪಟ್ಟಣ, ಮೇ 7– ತಾಲೂಕಿನ ಬೆಳಗೊಳ ಗ್ರಾಮದ ಬಳಿ ಬಲಮುರಿ ಪ್ರವಾಸಿ ತಾಣದಲ್ಲಿ ಈಜಲು ಹೋದ ಯುವಕನೋರ್ವ ಸಾವನ್ನಪ್ಪಿರುವ ಘಟನೆ ನಡೆದಿದೆ.

ಮಂಗಳವಾರ ನಂಜನಗೂಡು ತಾಲೂಕಿನ ಸಾಲುಂಡಿ ಗ್ರಾಮದ ಬೀರಪ್ಪ ಎಂಬುವರ ಮಗ ರವಿಕುಮಾರ್ (18) ಸ್ನೇಹಿತರ ಜೊತೆ ಬಲಮುರಿಗೆ ಬಂದಿದ್ದ ಸಂದರ್ಭದಲ್ಲಿ ಈಜಲು ಹೋಗಿ ಮುಳುಗಿ ಸಾವನ್ನಪ್ಪಿದ್ದಾರೆ ಎಂದು ಕೆ.ಆರ್.ಸಾಗರ ಪೊಲೀಸರು ತಿಳಿಸಿದ್ದಾರೆ. ಪೊಲೀಸ್ ಪ್ರಕರಣ ದಾಖಲಾಗಿದೆ.

ಬೈಕ್‌ಗಳ ನಡುವೆ ಡಿಕ್ಕಿ: ಓರ್ವ ಸಾವು

ನಾಗಮಂಗಲ, ಮೇ 7– ಎರಡು ಬೈಕ್ ನಡುವೆ ಸಂಭವಿಸಿದ ಡಿಕ್ಕಿಯಿಂದ ವ್ಯಕ್ತಿಯೊಬ್ಬರು ಮೃತಪಟ್ಟ ಘಟನೆ ನಾಗಮಂಗಲ ಹಾಲತಿ ರಸ್ತೆಯಲ್ಲಿ ಬರುವ ಕೆಂದನಹಳ್ಳಿ ಗ್ರಾಮದ ಬಳಿ ನಡೆದಿದೆ.

ಬಿಂಡಿಗನವಿಲೆ ಹೋಬಳಿ ಅದ್ದಿಹಳ್ಳಿ ಗ್ರಾಮದ ಜಯರಾಂ ಮೃತ ದುರ್ದೈವಿ. ಶನಿವಾರ ಸಂಜೆ ಮೈಲಾರ ಪಟ್ಟಣದಿಂದ ಅಡುಗೆ ಕೆಲಸ ಮುಗಿಸಿ ಮನೆಗೆ ಬರುತ್ತಿದ್ದ ಸಮಯದಲ್ಲಿ ನಾಗಮಂಗಲ ಕಡೆಯಿಂದ ಬರುತ್ತಿದ್ದ ಮತ್ತೊಂದು ಬೈಕ್ ಡಿಕ್ಕಿ ಹೊಡೆದ ಪರಿಣಾಮ ತೀವ್ರವಾಗಿ ಗಾಯಗೊಂಡ ಜಯರಾಂ ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯದಲ್ಲಿ ಮೃತಪಟ್ಟಿದ್ದು, ಹಿಂಬದಿಯಲ್ಲಿ ಕುಳಿತಿದ್ದ ಕೃಷ್ಣಮೂರ್ತಿ ಗಾಯ ಗೊಂಡಿದ್ದು, ಅವರನ್ನು ಮಂಡ್ಯದ ಮಿಮ್ಸ್ ಆಸ್ಪತ್ರೆಗೆ ಸೇರಿಸಲಾಗಿದೆ.

ವಸಂತಕುಮಾರಿ ನಿಧನ



ಪಾಂಡವಪುರ, ಮೇ7– ಪಟ್ಟಣದ ಕೃಷ್ಣಾ ನಗರದ ನಿವಾಸಿ ವಸಂತ್ ಅವರ ಪತ್ನಿ ವಸಂತಕುಮಾರಿ (45) ಅವರು ಅನಾರೋಗ್ಯ ದಿಂದ ನಿಧನ ಹೊಂದಿದರು.

ಇವರನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸ ಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೆ ಸೋಮವಾರ ಮಧ್ಯಾಹ್ನ ಕೊನೆಯುಸಿರೆಳೆದರು. ಮೃತರಿಗೆ ಓರ್ವ ಪುತ್ರಿ ಇದ್ದಾಳೆ. ಮೃತರ ಅಂತ್ಯಕ್ರಿಯೆ ಮಂಗಳವಾರ ಪಟ್ಟಣದ ರುದ್ರಭೂಮಿಯಲ್ಲಿ ಜರುಗಿತು.

ಪಾಂಡವಪುರದಲ್ಲಿ ಹೆಣ್ಣು ಭ್ರೂಣ ಹತ್ಯೆ ಪ್ರಕರಣ

ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಭೇಟಿ

ಅಧಿಕಾರಿಗಳೊಂದಿಗೆ ಚರ್ಚೆ, ಎಚ್ಚರಿಕೆ ವಹಿಸಲು ಸೂಚನೆ



ಪಾಂಡವಪುರದ ಆರೋಗ್ಯ ಇಲಾಖೆ ವಸತಿಗೃಹದಲ್ಲಿ ನಡೆಯುತ್ತಿದ್ದ ಹೆಣ್ಣು ಭ್ರೂಣ ಹತ್ಯೆ ಘಟನಾ ಸ್ಥಳಕ್ಕೆ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಕಾಡೇನಹಳ್ಳಿ ನಾಗಣ್ಣಗೌಡ ಭೇಟಿ ನೀಡಿ, ಪರಿಶೀಲಿಸಿದರು.

ಪಾಂಡವಪುರ, ಮೇ 7– ಪಟ್ಟಣದ ಆರೋಗ್ಯ ಇಲಾಖೆ ವಸತಿ ಗೃಹದಲ್ಲಿ ನಡೆಯುತ್ತಿದ್ದ ಹೆಣ್ಣು ಭ್ರೂಣಹತ್ಯೆ ಪ್ರಕರಣ ಬೆಳಕಿಗೆ ಬರುತ್ತಿದ್ದಂತೆ ಮಂಗಳವಾರ ಬೆಳಗ್ಗೆ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಅಧಿಕಾರಿಗಳ ಸಭೆ ನಡೆಸಿತು.

ಆಯೋಗದ ಅಧ್ಯಕ್ಷ ಕಾಡೇನಹಳ್ಳಿ ನಾಗಣ್ಣಗೌಡ ನೇತೃತ್ವದ ತಂಡ ಪಾಂಡವಪುರ ಆರೋಗ್ಯ ಇಲಾಖೆ ವಸತಿ ಗೃಹ, ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ತಾಲೂಕು ಪಂಚಾಯ್ತಿ ಸಭಾಂಗಣದಲ್ಲಿ ಸಭೆ ನಡೆಸಿತು. ಈ ವೇಳೆ ನಾಗಣ್ಣಗೌಡ ಮಾತನಾಡಿ, ತಾಲೂಕು ಆರೋಗ್ಯ ಅಧಿಕಾರಿಗಳ ಕಚೇರಿ ಪಕ್ಕದಲ್ಲಿ ಮತ್ತು ಆರೋಗ್ಯ ಇಲಾಖೆ ವಸತಿ ಗೃಹದಲ್ಲಿ ಇಂತಹ ಕಾನೂನುಬಾಹಿರ ಕೃತ್ಯ ನಡೆಯುತ್ತಿರುವುದು ಆಘಾತಕಾರಿ ವಿಷಯ. ಇದರಲ್ಲಿ ಯಾವ ಯಾವ ಅಧಿಕಾರಿಗಳ ಕೈವಾಡವಿದೆ ಎನ್ನುವುದು ತನಿಖೆಯಿಂದಷ್ಟೇ ಬೆಳಕಿಗೆ ಬರಬೇಕಿದೆ. ಇದೊಂದು ಗಂಭೀರ ಪ್ರಕರಣ. ಈ ಬಗ್ಗೆ ಜಿಲ್ಲಾಡಳಿತದಿಂದ ವರದಿ ಕೇಳಲಾಗಿದೆ. ಇದರಲ್ಲಿ ದೊಡ್ಡ ಜಾಲವೇ ಇದೆ. ತಾಲೂಕು ಆರೋಗ್ಯಾಧಿಕಾರಿ, ಸಿಡಿಪಿಓ ಸೇರಿದಂತೆ ಎಲ್ಲರೂ ಇದಕ್ಕೆ ಉತ್ತರ ನೀಡಬೇಕಿದೆ. ಮುಂದೆ ಇಂತಹ ಪ್ರಕರಣ ನಡೆಯದಂತೆ ಎಚ್ಚರಿಕೆ ವಹಿಸಬೇಕಿದೆ ಎಂದರು.

ಯಾರ ಗಮನಕ್ಕೂ ಬಾರದೆ ಹಲವು ವರ್ಷಗಳಿಂದ ಹೆಣ್ಣು ಭ್ರೂಣಹತ್ಯೆ ನಡೆಯುತ್ತಿರುವುದು ಸಮಾಜ ತಲೆ ತಗ್ಗಿಸುವ ಕೆಲಸವಾಗಿದೆ. ಈ ಬಗ್ಗೆ ಸೂಕ್ತ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು ಎಂದರು.

ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ವೆಂಕಟೇಶ್ ಮಾತನಾಡಿ, ಇದೊಂದು ತೀವ್ರವಾದ ಗಂಭೀರ ಪ್ರಕರಣ. ಹಾಡ್ಯ ಆಲೆಮನೆ ಘಟನೆಗಳ ನೆನಪು ಮಾಸುವ ಮುನ್ನವೇ ಈ ಪ್ರಕರಣ ನಡೆದಿರುವುದು ಆತಂಕಕಾರಿ. ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ತನಿಖೆಗೆ ಸಂಪೂರ್ಣ ಸಹಕಾರ ನೀಡಲಿದೆ ಎಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿ ರಾಜಮೂರ್ತಿ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ರಶ್ಮಿ, ತಹಸೀಲ್ದಾರ್ ಶ್ರೇಯಸ್, ಇಒ ಲೋಕೇಶ್ ಮೂರ್ತಿ, ಆರೋಗ್ಯ ಇಲಾಖೆ ನೋಡಲ್ ಅಧಿಕಾರಿ ಸೋಮಶೇಖರ್, ಸಿಪಿಐ ಕುಮಾರ್, ಸರ್ಕಾರಿ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ.ಅರವಿಂದ್, ಬಿಇಓ ಚಂದ್ರಶೇಖರ್, ಸಿಡಿಪಿಓ ಪೂರ್ಣಿಮಾ ಮುಂತಾದವರು ಇದ್ದರು.

79,839 ರೈತರ ಖಾತೆಗೆ 34.94 ಕೋಟಿ ರೂ ಬೆಳೆಹಾನಿ ಪರಿಹಾರ ಹಣ ಜಮೆ: ಡಾ.ಕುಮಾರ



ಮಂಡ್ಯ, ಮೇ 7– ಜಿಲ್ಲೆಯಲ್ಲಿ ಬರದ ಹಿನ್ನೆಲೆ ಬೆಳೆಹಾನಿ ಪರಿಹಾರ ಬಾಬ್ತು 34,94,97,157 ರೂ. ಹಣವನ್ನು 79,839 ರೈತರ ಖಾತೆಗೆ ಜಮೆ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಡಾ. ಕುಮಾರ ತಿಳಿಸಿದರು.

ವಿಡಿಯೋ ಸಂವಾದದ ಮೂಲಕ ತಹಶೀಲ್ದಾರ್ ಗಳೊಂದಿಗೆ ಮಾತನಾಡಿ, ಬರದ ಹಿನ್ನೆಲೆ ಬೆಳೆ ನಷ್ಟವಾಗಿರುವ ರೈತರಿಗೆ ಪರಿಹಾರದ ಹಣವನ್ನು ಜಮೆ ಮಾಡಲಾಗಿದ್ದು, ಬಹಳಷ್ಟು ರೈತರು ತಮಗೆ ಹಣ ಬಂದಿರುವುದಿಲ್ಲ ಎಂದು ಮೌಖಿಕವಾಗಿ ಕರೆ ಮಾಡಿ ದೂರು ಸಲ್ಲಿಸುತ್ತಿದ್ದು, ತಾಲೂಕು ಮಟ್ಟದಲ್ಲಿ ಹೆಲ್ಪ್ ಡೆಸ್ಕ್ ಅಥವಾ ಸಹಾಯವಾಣಿ ಪ್ರಾರಂಭಿಸಿ ರೈತರ ಸಮಸ್ಯೆ ಪರಿಹರಿಸುವಂತೆ ತಿಳಿಸಿದರು.

ಜಿಲ್ಲೆಯಲ್ಲಿ ಮಳೆಯ ಕೊರತೆ ಹಿನ್ನೆಲೆ ಬೆಳೆ ನಷ್ಟ ಕುರಿತಂತೆ ಸಮೀಕ್ಷೆ ನಡೆಸಿ ಸುಮಾರು 79,839 ರೈತರ 39812 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ನಷ್ಟವಾಗಿರುವುದಾಗಿ ವರದಿ ಸಲ್ಲಿಸಲಾಗಿತ್ತು. ಎಸ್.ಡಿ.ಆರ್.ಎಫ್ ನಿಯಮದ ಅನುಸಾರ ಪರಿಹಾರ ಹಣವನ್ನು ಬಿಡುಗಡೆ ಮಾಡಲಾಗಿರುತ್ತದೆ. ರೈತರ ಖಾತೆಗೆ ಜಮೆ ಮಾಡಿರುವ ಪರಿಹಾರ ಹಣ ಹಾಗೂ ಫಲಾನುಭವಿಗಳ ವಿವರವನ್ನು ತಾಲೂಕು ಪಂಚಾಯತ್, ಗ್ರಾಮ ಪಂಚಾಯತ್ ಹಾಗೂ ತಹಶೀಲ್ದಾರ್ ಕಚೇರಿಯಲ್ಲಿ ಪ್ರಕಟಿಸುವಂತೆ ತಿಳಿಸಿದರು.

ಬೆಳೆಹಾನಿ ರೈತರ ಖಾತೆಗೆ ಜಮೆ ಮಾಡಿರುವ ವಿವರವನ್ನು ಗ್ರಾಮ ಪಂಚಾಯಿತಿಗಳ ವೆಬ್‌ಸೈಟ್ ಗಳಲ್ಲೂ ಸಹ ಪ್ರಕಟಿಸಲಾಗುವುದು ಎಂದರು.

ಕೆ.ಆರ್.ಪೇಟೆಯಲ್ಲಿ 17298 ರೈತರ ಒಟ್ಟು 9322.06 ಹೆಕ್ಟೇರ್ ಪ್ರದೇಶದ ಬೆಳೆ ಹಾನಿಗೆ ಒಟ್ಟು 7,70,60,982 ರೂ ಪರಿಹಾರದ ಹಣ ಪಾವತಿಸಲಾಗಿದೆ. ಮದ್ದೂರಿನಲ್ಲಿ 12499 ರೈತರ ಒಟ್ಟು 3050.20 ಹೆಕ್ಟೇರ್ ಪ್ರದೇಶದ ಬೆಳೆ ಹಾನಿಗೆ ಒಟ್ಟು 3,62,56,911 ರೂ ಪರಿಹಾರದ ಹಣ ಪಾವತಿಸಲಾಗಿದೆ.

ಮಳವಳ್ಳಿಯಲ್ಲಿ 11599 ರೈತರ ಒಟ್ಟು 4240.50 ಹೆಕ್ಟೇರ್ ಪ್ರದೇಶದ ಬೆಳೆ ಹಾನಿಗೆ ಒಟ್ಟು 4,63,86,485 ರೂ. ಪರಿಹಾರದ ಹಣ ಪಾವತಿಸಲಾಗಿದೆ. ಮಂಡ್ಯ ತಾಲೂಕಿನಲ್ಲಿ 4408 ರೈತರ ಒಟ್ಟು 2078.04 ಹೆಕ್ಟೇರ್ ಪ್ರದೇಶದ ಬೆಳೆ ಹಾನಿಗೆ ಒಟ್ಟು 1,74,35,984 ರೂ. ಪರಿಹಾರದ ಹಣ ಪಾವತಿಸಲಾಗಿದೆ. ನಾಗಮಂಗಲ ತಾಲೂಕಿನಲ್ಲಿ 28926 ರೈತರ ಒಟ್ಟು 18646.80 ಹೆಕ್ಟೇರ್ ಪ್ರದೇಶದ ಬೆಳೆ ಹಾನಿಗೆ ಒಟ್ಟು 15,15,74,633 ರೂ. ಪರಿಹಾರದ ಹಣ ಪಾವತಿಸಲಾಗಿದೆ.

ಪಾಂಡವಪುರ ತಾಲೂಕಿನಲ್ಲಿ 4700 ರೈತರ ಒಟ್ಟು 2323.86 ಹೆಕ್ಟೇರ್ ಪ್ರದೇಶದ ಬೆಳೆ ಹಾನಿಗೆ ಒಟ್ಟು 1,94,82,867 ರೂ. ಪರಿಹಾರದ ಹಣ ಪಾವತಿಸಲಾಗಿದೆ. ಶ್ರೀರಂಗಪಟ್ಟಣ ತಾಲೂಕಿನಲ್ಲಿ 409 ರೈತರ ಒಟ್ಟು 150.66 ಹೆಕ್ಟೇರ್ ಪ್ರದೇಶದ ಬೆಳೆ ಹಾನಿಗೆ ಒಟ್ಟು 12,99,295/– ರೂ ಪರಿಹಾರದ ಹಣ ಪಾವತಿಸಲಾಗಿದೆ.

ಸಭೆಯಲ್ಲಿ ಎಡಿಸಿ ಡಾ. ಹೆಚ್.ಎಲ್. ನಾಗರಾಜು, ಉಪವಿಭಾಗಾಧಿಕಾರಿ ಮಹೇಶ್, ಪಶುಸಂಗೋಪನೆ ಇಲಾಖೆ ಉಪನಿರ್ದೇಶಕ ಡಾ. ಸುರೇಶ್, ಜಂಟಿ ಕೃಷಿ ನಿರ್ದೇಶಕ ಅಶೋಕ್, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ತುಷಾರಮಣಿ ಉಪಸ್ಥಿತರಿದ್ದರು.

ಪ್ರಜ್ವಲ್ ವಿರುದ್ಧ ಮಹಿಳಾ ಕಾಂಗ್ರೆಸ್‌ನಿಂದ ಮೆರವಣಿಗೆ



ಚಾಮರಾಜನಗರದಲ್ಲಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ ಜಿಲ್ಲಾ ಮಹಿಳಾ ಕಾಂಗ್ರೆಸ್ ಕಾರ್ಯಕರ್ತೆಯರು ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ಮೇ 7– ಲೈಂಗಿಕ ದೌರ್ಜನ್ಯ ನಡೆಸಿ ವಿದೇಶಕ್ಕೆ ಪರಾರಿಯಾಗಿರುವ ಸಂಸದ ಪ್ರಜ್ವಲ್ ರೇವಣ್ಣನನ್ನು ಕೂಡಲೇ ಬಂಧಿಸಬೇಕು ಎಂದು ಆಗ್ರಹಿಸಿ ಜಿಲ್ಲಾ ಮಹಿಳಾ ಕಾಂಗ್ರೆಸ್ ವತಿಯಿಂದ ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ನಗರದ ಚಾಮರಾಜೇಶ್ವರ ದೇವಸ್ಥಾನ ಮುಂಭಾಗ ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಲತಾ ರಾಜಶೇಖರ್ ಜತ್ತಿ ನೇತೃತ್ವದಲ್ಲಿ ಸಮಾವೇಶಗೊಂಡು ಮಹಿಳಾ ಕಾರ್ಯಕರ್ತೆಯರು ಪ್ರಜ್ವಲ್ ಹಾಗೂ ಮಾಜಿ ಸಚಿವ ಎಚ್.ಡಿ. ರೇವಣ್ಣ ಭಾವಚಿತ್ರ ಹಿಡಿದು ಮೆರವಣಿಗೆ ನಡೆಸಿದರು. ನಂತರ ಭುವನೇಶ್ವರಿ ವೃತ್ತದಲ್ಲಿ ಕೆಲಕಾಲ ರಸ್ತೆ ತಡೆ ನಡೆಸಿದರು.

ನೂರಾರು ಹೆಣ್ಣು ಮಕ್ಕಳ ಭವಿಷ್ಯದಲ್ಲಿ ಚೆಲ್ಲಾಟವಾಡಿರುವ ಸಂಸದ ಪ್ರಜ್ವಲ್ ರೇವಣ್ಣನನ್ನು ಕೂಡಲೇ ಬಂಧಿಸಿ, ಉಗ್ರ ಶಿಕ್ಷೆ ನೀಡಬೇಕು. ಇದಕ್ಕೆ ಸಹಕಾರ ನೀಡಿದ ಅವರ ತಂದೆ ಎಚ್.ಡಿ. ರೇವಣ್ಣಗೂ ಶಿಕ್ಷೆಯಾಗಬೇಕು. ಲೈಂಗಿಕ ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ನ್ಯಾಯ ಒದಗಿಸಲು ಸರ್ಕಾರ ಮುಂದಾಗಬೇಕು ಎಂದು ಒತ್ತಾಯಿಸಿದರು.

ಈ ಪ್ರಕರಣವನ್ನು ಎಸ್‌ಐಟಿ ಅಧಿಕಾರಿಗಳು ಶೀಘ್ರವಾಗಿ ತನಿಖೆ ನಡೆಬೇಕು. ಪ್ರಜ್ವಲ್ ರೇವಣ್ಣನ ಅಟ್ಟಹಾಸಕ್ಕೆ ನೂರಾರು ಹೆಣ್ಣು ಮಕ್ಕಳ ಭವಿಷ್ಯ ಹಾಳಾಗಿದೆ. ಅವರ ಕುಟುಂಬಗಳು ಬೀದಿ ಪಾಲಾಗಿವೆ. ಆ ಶಾಪ ಆತನಿಗೆ ಗ್ಯಾರಂಟಿ ತಟ್ಟಲಿದೆ. ವಿದೇಶದಲ್ಲಿರುವ ಈತನನ್ನು ಕೂಡಲೇ ಬಂಧಿಸಿ, ವಿಚಾರಣೆಗೊಳಪಡಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ರಾಜ್ಯ ಕಾಂಗ್ರೆಸ್ ಕಾರ್ಯದರ್ಶಿ ಪದ್ಮಾ ಪುರುಷೋತ್ತಮ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಾಗರತ್ನ, ಚಾ.ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷೆ ನಾಗಶ್ರೀ, ಯಳಂದೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷೆ ಉಮ್ಮತ್ತೂರು ಭಾಗ್ಯ, ನಗರಸಭಾ ಸದಸ್ಯೆ ಕಲಾವತಿ, ಜಿಪಂ ಮಾಜಿ ಸದಸ್ಯೆ ಕಾವೇರಿ ಶಿವಕುಮಾರ್, ಕೊಳ್ಳೇಗಾಲ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷೆ ಕೃಷ್ಣವೇಣಿ, ಜಿಲ್ಲಾ ಸಂಚಾಲಕಿ ಶಿವಮ್ಮ, ಗುಂಡ್ಲುಪೇಟೆ ರತ್ನಮ್ಮ, ಜನ್ನೂರು ಹೊಸೂರು ವೀಣಾ ಮತ್ತಿತರರು ಭಾಗವಹಿಸಿದ್ದರು.

ಅರ್ಜಿ ಆಹ್ವಾನ

ಚಾಮರಾಜನಗರ, ಮೇ 7– ಕೈಮಗ್ಗ ಮತ್ತು ಜವಳಿ ಇಲಾಖೆ ವತಿಯಿಂದ 2024–25ನೇ ಸಾಲಿನ ಶೈಕ್ಷಣಿಕ ಅವಧಿಯ ಕೈಮಗ್ಗ ಮತ್ತು ಜವಳಿ ತಂತ್ರಜ್ಞಾನದ ಪ್ರಥಮ ವರ್ಷ ಮತ್ತು ಲ್ಯಾಟರಲ್ ಎಂಟ್ರಿಯ 2ನೇ ವರ್ಷದ ಡಿಪ್ಲೋಮಾ ಕೋರ್ಸ್ (ಡಿಹೆಚ್‌ಟಿಟಿ) ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಕೈಮಗ್ಗ ಮತ್ತು ಜವಳಿ ತಂತ್ರಜ್ಞಾನದ ಪ್ರಥಮ ವರ್ಷಕ್ಕೆ 44 ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಹಾಗೂ ಲ್ಯಾಟರಲ್ ಎಂಟ್ರಿಯ 2ನೇ ವರ್ಷದ ಡಿಪ್ಲೋಮಾ ಕೋರ್ಸ್‌ಗೆ 32 ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.

ಆಸಕ್ತರು ಹೆಚ್ಚಿನ ವಿವರ ಮತ್ತು ಅರ್ಜಿಗಳಿಗೆ ಗದಗ–ಬೆಟಗೇರಿಯ ನರಸಾಪೂರದ ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆಯ ಪ್ರಾಂಶುಪಾಲರು (ದೂ.ಸಂ:08372–297221) ಅಥವಾ ನಗರದ ಜಿಲ್ಲಾಡಳಿತ ಭವನದ ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪನಿರ್ದೇಶಕರ (ದೂ.ಸಂ: 08226–222883)ನ್ನು ಸಂಪರ್ಕಿಸಬಹುದು. ಮಾಹಿತಿಗೆ ವೆಬ್‌ಸೈಟ್ https://khtigadag.ac.in/adminsion Form.pdf ಮೂಲಕ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿ ಅಗತ್ಯ ದಾಖಲಾತಿಗಳೊಂದಿಗೆ ಮೇ 31ರೊಳಗಾಗಿ ಪ್ರಾಂಶುಪಾಲರು, ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ನರಸಾಪೂರ, ಗದಗ–ಬೆಟಗೇರಿ–582102 ಈ ವಿಳಾಸಕ್ಕೆ ಸಲ್ಲಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಪ್ರಜ್ವಲ್ ರೇವಣ್ಣ ಬಂಧನಕ್ಕೆ ಒತ್ತಾಯಿಸಿ ಪ್ರತಿಭಟನೆ



ಚಾಮರಾಜನಗರದಲ್ಲಿ ಸಂಸದ ಪ್ರಜ್ವಲ್ ವಿರುದ್ಧ ವಿವಿಧ ಸಂಘಟನೆಯ ಕಾರ್ಯಕರ್ತರು ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ಮೇ 7– ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅತ್ಯಾಚಾರ ಹಾಗೂ ಲೈಂಗಿಕ ದೌರ್ಜನ್ಯ ಪ್ರಕರಣದಡಿಯಲ್ಲಿ ಬಂಧಿಸಿ ತನಿಖೆ ಚುರುಕುಗೊಳಿಸುವಂತೆ ಒತ್ತಾಯಿಸಿ ವಿವಿಧ ಸಂಘಟನೆಯ ಕಾರ್ಯಕರ್ತರು ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ನಗರದ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗ ಜಮಾಯಿಸಿದ ಎದ್ದೇಳು ಕರ್ನಾಟಕ, ಮಾನವ ಬಂಧುತ್ವ ವೇದಿಕೆಯ ಕಾರ್ಯಕರ್ತರು ಹಾಗೂ ಪುನರ್‌ಜೀವನ, ಶಾಂತಲಾ ಕಲಾವಿದರು, ಸಂಸದ ಪ್ರಜ್ವಲ್ ಹಾಗೂ ಶಾಸಕ ಹೆಚ್.ಡಿ. ರೇವಣ್ಣ ವಿರುದ್ಧ ಘೋಷಣೆ ಕೂಗಿದರು. ನಂತರ ಅಲ್ಲಿಂದ ಭುವನೇಶ್ವರಿ ವೃತ್ತದವರೆಗೆ ಮೆರವಣಿಗೆ ನಡೆಸಿ, ಕೆಲಕಾಲ ಮಾನವ ಸರಪಳಿ ನಿರ್ಮಿಸಿ ರಸ್ತೆ ತಡೆ ನಡೆಸಿದರು. ಪ್ರಜ್ವಲ್ ರೇವಣ್ಣ ಪೆನ್ ಡ್ರೈವ್ ಪ್ರಕರಣ ಇಡೀ ದೇಶವೇ ತಲೆ ತಗ್ಗಿಸುವಂತಹ ಅಮಾನವೀಯ ಘಟನೆಯಾಗಿದೆ. ಈ ಕುರಿತು ಸರ್ಕಾರ ಈಗಾಗಲೇ ಕ್ರಮ ಜರುಗಿಸಿದ್ದು, ತನಿಖೆಯನ್ನು ಚುರುಕುಗೊಳಿಸಬೇಕು. ಪ್ರಕರಣ ಕುರಿತು ತಕ್ಷಣ ಚಾರ್ಜ್‌ಶೀಟ್ ಸಲ್ಲಿಸಬೇಕು. ಪ್ರತಿದಿನ ವಿಚಾರಣೆ ನಡೆಸಿ ವರದಿ ಸಲ್ಲಿಸಬೇಕು. ದೌರ್ಜನ್ಯಕ್ಕೊಳಗಾಗಿರುವ ಮಹಿಳೆಯರು ಹಾಗೂ ಅವರ ಕುಟುಂಬದವರು ಮುಜುಗರಕ್ಕೆ ಒಳಗಾಗದೆ ತಮಗಾಗಿರುವ ಅನ್ಯಾಯದ ಬಗ್ಗೆ ದೂರು ಸಲ್ಲಿಸಬೇಕು. ಇದಕ್ಕೆ ಪ್ರತಿಯೊಬ್ಬರು ಬೆಂಬಲ ನೀಡಲಿದ್ದಾರೆ ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸಂಘಟನೆಯ ಕೆ.ವೆಂಕಟರಾಜು, ಮಾನವ ಬಂಧುತ್ವ ವೇದಿಕೆ ಅಧ್ಯಕ್ಷ ಸುಭಾಷ್ ಮಾಡ್ರಳ್ಳಿ, ವೀರಭದ್ರನಾಯಕ, ಎ.ಡಿ. ಸಿಲ್ವ, ಆರ್.ಡಿ.ಉಲ್ಲಾಸ್, ದೊಡ್ಡರಾಯಪೇಟೆ ಸಿದ್ದರಾಜು, ಪುಟ್ಟಮ್ಮ, ರಾಜೇಶ್ವರಿ, ರಾಣಿ, ಪುಟ್ಟಗೌರಿ, ಮುತ್ತಯ್ಯ, ನಾಗೇಂದ್ರ ಇತರರು ಭಾಗವಹಿಸಿದ್ದರು.

ಮೈಸೂರು ವಿವಿ ಅಂತರ ಕಾಲೇಜು, ಅಂತರ ವಲಯ ಪುರುಷರ ಕ್ರೀಡಾಕೂಟಕ್ಕೆ ಚಾಲನೆ

ಕ್ರೀಡೆಯಲ್ಲಿ ಭಾಗವಹಿಸುವುದರೊಂದಿಗೆ ಪರಿಸರ ಕಾಳಜಿ ಕೂಡ ಅಗತ್ಯ



ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ಆಯೋಜಿಸಲಾಗಿರುವ ಮೂರು ದಿನಗಳ ಅಂತರ ಕಾಲೇಜು, ಅಂತರ ವಲಯ ಪುರುಷರ ಕ್ರೀಡಾಕೂಟಕ್ಕೆ ಮಂಗಳವಾರ ಚಾಲನೆ ನೀಡಲಾಯಿತು.

ಮೈಸೂರು, ಮೇ 7(ಜಿಎ)–ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ಆಯೋಜಿಸಲಾಗಿರುವ ಮೂರು ದಿನಗಳ ಅಂತರ ಕಾಲೇಜು, ಅಂತರ ವಲಯ ಪುರುಷರ ಕ್ರೀಡಾ ಕೂಟಕ್ಕೆ ಮೈವಿವಿ ಯೋಜನಾ ಮಾನಿಟರಿಂಗ್ ಮತ್ತು ಮೌಲ್ಯಮಾಪನ ಮಂಡಳಿ (ಪಿಎಂಇಬಿ) ಮುಖ್ಯಸ್ಥ ಪ್ರೊ. ನಾಗರಾಜು ಮಂಗಳವಾರ ಚಾಲನೆ ನೀಡಿದರು.


ನಂತರ ಮಾತನಾಡಿದ ಅವರು, ಕ್ರೀಡೆಯಲ್ಲಿ ಸೋಲು–ಗೆಲುವು ಮುಖ್ಯವಲ್ಲ. ಕ್ರೀಡಾಸ್ಫೂರ್ತಿಯಿಂದ ಭಾಗವಹಿಸುವುದು ಮುಖ್ಯ. ಯುವಕರು ಕ್ರೀಡೆಯಲ್ಲಿ ಭಾಗವಹಿಸುವುದರ ಜೊತೆಗೆ ಪರಿಸರದ ಬಗ್ಗೆ ಕೂಡ ಕಾಳಜಿ ವಹಿಸಬೇಕು. ಕ್ರೀಡಾಕೂಟದ ನೆನಪಿನಲ್ಲಿ ಪ್ರತಿಯೊಂದು ಕಾಲೇಜಿನಲ್ಲೂ ಕೂಡ ಒಂದು ಗಿಡವನ್ನು ನೆಡಬೇಕು ಎಂದು ಸಲಹೆ ನೀಡಿದರು.

ಕ್ರಿಕೆಟ್ ಆಟಗಾರರೂ ಆದ ಕೇಂದ್ರ ಅಬಕಾರಿ ಮತ್ತು ಸುಂಕ ಇಲಾಖೆ ಅಧೀಕ್ಷಕ ಎ.ವಿ.ಸಂದೀಪ್ ಮಾತನಾಡಿ, ಮಹಾರಾಜ ಕಾಲೇಜು ವಿದ್ಯಾರ್ಥಿಯಾಗಿದ್ದಾಗ ನಾನು ಕ್ರಿಕೆಟ್‌ನಲ್ಲಿ ಹಲವಾರು ಪಂದ್ಯಾವಳಿಗಳಲ್ಲಿ ಭಾಗವಹಿಸಿದ್ದೆ. ರಣಜಿ ತಂಡಕ್ಕೂ ಕೂಡ ಆಯ್ಕೆಯಾಗಿದ್ದೆ. 20 ವರ್ಷಗಳ ಹಿಂದೆ ನಿಮ್ಮಂತೆ ಮೈದಾನದಲ್ಲಿ ಕುಳಿತಿದ್ದ ನಾನು ಇವತ್ತು ವೇದಿಕೆ ಏರಲು ಕ್ರೀಡೆಯೇ ಅವಕಾಶ ಮಾಡಿಕೊಟ್ಟಿದೆ. ಆದ್ದರಿಂದ ಪ್ರತಿಯೊಬ್ಬರೂ ಕೂಡ ಪಠ್ಯದ ಜೊತೆಗೆ ಕ್ರೀಡೆಯಲ್ಲಿ ಕೂಡ ಭಾಗವಹಿಸಿ, ಸಾಧಕರಾಗಬೇಕು ಎಂದು ಕರೆ ನೀಡಿದರು.

ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಸಿ.ವೆಂಕಟೇಶ್ ಮಾತನಾಡಿ, ಮೈಸೂರು ವಿವಿ ವಿಭಜನೆಯಾಗಿರುವುದರಿಂದ ಮೈಸೂರು, ಚಾಮರಾಜನಗರ, ಮಂಡ್ಯ ಹಾಗೂ ಹಾಸನ ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸುವ ಕೊನೆಯ ಕ್ರೀಡಾಕೂಟ ಇದಾಗಬಹುದು. ಕಾಲೇಜು ಮಟ್ಟದಲ್ಲಿ ಮತ್ತೊಂದು ಕ್ರೀಡಾಕೂಟ ನಡೆಯಬಹುದು. ಆದ್ದರಿಂದ ಇಂತಹ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಿ ಎಂದರು. ಈ ಕ್ರೀಡಾಕೂಟದಲ್ಲಿ ವಿಶ್ವವಿದ್ಯಾನಿಲಯ ವ್ಯಾಪ್ತಿಯ ಮೈಸೂರು, ಚಾಮರಾಜನಗರ, ಮಂಡ್ಯ ಹಾಗೂ ಹಾಸನ ಜಿಲ್ಲೆಗಳ 40 ಕಾಲೇಜುಗಳಿಂದ 800 ಮಂದಿ ಪಾಲ್ಗೊಂಡಿದ್ದರು. ಈ ವೇಳೆ ಉಪ ನಿರ್ದೇಶಕ ಡಾ.ಪಿ.ಕೃಷ್ಣಯ್ಯ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ದೈಹಿಕ ಶಿಕ್ಷಣ ವಿಭಾಗದ ಅಧ್ಯಾಪಕರು, ಅಧ್ಯಾಪಕೇತರರು, ತರಬೇತುದಾರರು, ವಿವಿಧ ಕಾಲೇಜುಗಳ ದೈಹಿಕ ಶಿಕ್ಷಣ ನಿರ್ದೇಶಕರು ಉಪಸ್ಥಿತರಿದ್ದರು.

ಲೋಕಸಭೆ ಚುನಾವಣೆ: ದೇಶದ 93 ಕ್ಷೇತ್ರಗಳಲ್ಲಿ 3ನೇ ಹಂತದ ಮತದಾನ

ಹಕ್ಕು ಚಲಾಯಿಸಿದ ಮೋದಿ, ಅಮಿತ್ ಶಾ





ನವದೆಹಲಿ, ಮೇ 7– ಲೋಕಸಭೆ ಚುನಾವಣೆ 2024ರ 3ನೇ ಹಂತದ ಮತದಾನ ದೇಶದ 93 ಕ್ಷೇತ್ರಗಳಲ್ಲಿ ನಡೆಯಿತು. ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಸೇರಿದಂತೆ ಹಲವು ಪ್ರಮುಖರು ಇಂದು ತಮ್ಮ ಹಕ್ಕು ಚಲಾಯಿಸಿದರು.

ಗುಜರಾತ್‌ನ 25 ಕ್ಷೇತ್ರಗಳಿಗೆ ಒಂದೇ ಹಂತದ ಮತದಾನದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಗಾಂಧಿನಗರ ಲೋಕಸಭಾ ಕ್ಷೇತ್ರದ ಮತಗಟ್ಟೆಯಲ್ಲಿ ಮತ ಚಲಾಯಿಸಿದರು. ಬೆಳಗ್ಗೆ 7 ಗಂಟೆಗೆ ಮತದಾನ ಆರಂಭವಾದ ಬೆನ್ನಲ್ಲೇ ಮೋದಿ ಅವರು ಅಹಮದಾ ಬಾದ್ ನಗರದ ರಾನಿಪ್ ಪ್ರದೇಶದ ನಿಶಾನ್ ಪಬ್ಲಿಕ್ ಸ್ಕೂಲ್‌ನಲ್ಲಿರುವ ಮತಗಟ್ಟೆಗೆ ಆಗಮಿಸಿ ಮತದಾನ ಮಾಡಿ ದರು. ಗಾಂಧಿನಗರ ಲೋಕಸಭಾ ಕ್ಷೇತ್ರದಿಂದ ಕೇಂದ್ರ ಸಚಿವ ಮತ್ತು ಬಿಜೆಪಿಯ ಹಿರಿಯ ನಾಯಕ ಅಮಿತ್ ಶಾ ಸ್ಪರ್ಧಿಸಿದ್ದಾರೆ. 3ನೇ ಹಂತದ ಲೋಕಸಭೆ ಚುನಾವಣೆಯಲ್ಲಿ ದಾಖಲೆ ಸಂಖ್ಯೆಯಲ್ಲಿ ಮತ ಚಲಾಯಿಸು ವಂತೆ ಜನರನ್ನು ಒತ್ತಾಯಿಸಿದ ಅವರು, ಮತದಾರರ ಸಕ್ರಿಯ ಭಾಗವಹಿಸುವಿಕೆ ಚುನಾವಣೆಯನ್ನು ಇನ್ನಷ್ಟು ರೋಮಾಂಚನಗೊಳಿಸುತ್ತದೆ ಎಂದು ಹೇಳಿದರು.

ಸಂಸತ್ತಿನ ಮೂರನೇ ಹಂತದ ಮತದಾನದಲ್ಲಿ 11 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ 93 ಕ್ಷೇತ್ರಗಳಲ್ಲಿ ಮತದಾನ ನಡೆಯಿತು. ಪ್ರಧಾನಿಯವರು ಬೆಂಗಾಲಿ, ಅಸ್ಸಾಮಿ, ಕನ್ನಡ, ಗುಜರಾತಿ, ಮರಾಠಿ ಮತ್ತು ಹಿಂದಿ ಭಾಷೆಗಳಲ್ಲಿ ಮೈಕ್ರೋ ಬ್ಲಾಗಿಂಗ್ ವೇದಿಕೆಯಲ್ಲಿ ಸಂದೇಶ ವನ್ನು ಪೋಸ್ಟ್ ಮಾಡಿದ್ದಾರೆ. ಮೂರನೇ ಹಂತದ ಚುನಾವಣೆಯಲ್ಲಿ ಸುಮಾರು 120 ಮಹಿಳೆಯರು ಸೇರಿದಂತೆ 1,300ಕ್ಕೂ ಹೆಚ್ಚು ಅಭ್ಯರ್ಥಿಗಳು ಕಣ ದಲ್ಲಿದ್ದರು. ಕೇಂದ್ರ ಸಚಿವರಾದ ಅಮಿತ್ ಶಾ (ಗಾಂಧಿನಗರ), ಜ್ಯೋತಿರಾಧಿತ್ಯ ಸಿಂಧಿಯಾ (ಗುಣ), ಮನ್ಸುಖ್ ಮಾಂಡವಿಯಾ (ಪೋರಬಂದರ್), ಪರ್ಷೋತ್ತಮ್ ರೂಪಾಲಾ (ರಾಜ್‌ಕೋಟ್), ಪ್ರಲ್ಹಾದ್ ಜೋಶಿ (ಧಾರವಾಡ) ಮತ್ತು ಎಸ್‌ಪಿ ಸಿಂಗ್ ಬಘೇಲ್ (ಆಗ್ರಾ) ಪ್ರಮುಖರು. 83.9 ಮಿಲಿಯನ್ ಮಹಿಳೆಯರು ಸೇರಿದಂತೆ 172.4 ಮಿಲಿಯನ್ ಜನರು ಮತ ಚಲಾಯಿಸಲು ಅರ್ಹರಾಗಿದ್ದಾರೆ ಮತ್ತು 1.85 ಮಿಲಿಯನ್ ಅಧಿಕಾರಿಗಳು ನಿರ್ವಹಿಸುವ 185,000 ಮತದಾನ ಕೇಂದ್ರಗಳನ್ನು ಸ್ಥಾಪಿಸಲಾಗಿತ್ತು.

ಸ್ಕಾಲ್ ಇಂಟರ್‌ನ್ಯಾಷನಲ್ ಮೈಸೂರು ನೂತನ ಪದಾಧಿಕಾರಿಗಳು



ಮೈಸೂರು: ನಗರದ ಖಾಸಗಿ ಹೋಟೆಲ್‌ನಲ್ಲಿ ಸೋಮವಾರ ನಡೆದ ಸ್ಕಾಲ್ ಇಂಟರ್‌ನ್ಯಾಷನಲ್ ಮೈಸೂರು ವಿಭಾಗದ ವಾರ್ಷಿಕ ಮಹಾಸಭೆಯಲ್ಲಿ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಅಧ್ಯಕ್ಷರಾಗಿ ಸಿ.ಎ.ಜಯಕುಮಾರ್, ಕಾರ್ಯದರ್ಶಿಯಾಗಿ ನಾಗೇಶ್, ಉಪಾಧ್ಯಕ್ಷರಾಗಿ ಎಸ್.ಜೆ.ಅಶೋಕ್, ಖಜಾಂಚಿಯಾಗಿ ಸಮರ್ಥ್ ವೈದ್ಯ ಹಾಗೂ ಪಿಆರ್ ಡೈರೆಕ್ಟರ್ ಆಗಿ ಧಾತ್ರಿ ಭಾರದ್ವಾಜ್ ಆಯ್ಕೆಯಾದರು.

ಈ ವೇಳೆ ನೂತನ ಅಧ್ಯಕ್ಷರಾದ ಸಿ.ಎ.ಜಯಕುಮಾರ್ ಮಾತನಾಡಿ, ಮೈಸೂರು ಪ್ರವಾಸಿಗರ ಅಚ್ಚುಮೆಚ್ಚಿನ ತಾಣ. ಪ್ರವಾಸೋದ್ಯಮ ಇನ್ನೂ ಅಭಿವೃದ್ಧಿಯಾಗಬೇಕಿದೆ. ಸ್ಕಾಲ್ ಅಧ್ಯಕ್ಷನಾಗಿ ಇನ್ನು ಮುಂದೆ ಮೈಸೂರಿನ ಪ್ರವಾಸೋದ್ಯಮ ಅಭಿವೃದ್ಧಿಗೆ ಶ್ರಮಿಸುವುದಾಗಿ ಹೇಳಿದರು. ಪದಾಧಿಕಾರಿಗಳು, ಸದಸ್ಯರ ಸಹಕಾರದಿಂದ ಹತ್ತು ಹಲವು ಕಾರ್ಯಕ್ರಮ ಹಮ್ಮಿಕೊಳ್ಳುವ ಯೋಜನೆ ಇದೆ ಇದಕ್ಕೆ ಎಲ್ಲರ ಸಹಕಾರ ಅತ್ಯಗತ್ಯ ಎಂದರು.

ಸ್ಕಾಲ್ ಇಂಟರ್‌ನ್ಯಾಷನಲ್ ಮೈಸೂರು ವಿಭಾಗದ ನಿಕಟಪೂರ್ವ ಅಧ್ಯಕ್ಷ ಬಿ.ಎಸ್.ಪ್ರಶಾಂತ್ ಮಾತನಾಡಿ, ಈ ಎರಡು ವರ್ಷಗಳಲ್ಲಿ ಸ್ಕಾಲ್ ವತಿಯಿಂದ ಮೈಸೂರಿನಲ್ಲಿ ಸಾಕಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ನಾನು ಅಧ್ಯಕ್ಷನಾಗಿ ಕಾರ್ಯನಿರ್ವಹಿಸಲು ಅವಕಾಶ ಮಾಡಿಕೊಟ್ಟ ನನ್ನ ತಂಡಕ್ಕೆ ವಂದನೆಗಳು. ಕಳೆದ ವರ್ಷ ಮೈಸೂರಿನಲ್ಲಿ ನಡೆದ ಸ್ಕಾಲ್ ಇಂಡಿಯಾ ಕಾಂಗ್ರೆಸ್ ಯಶಸ್ವಿಯಾಯಿತು. ನನ್ನ ಅವಧಿಯಲ್ಲಿ ನಡೆದ ಅತಿದೊಡ್ಡ ಕಾರ್ಯಕ್ರಮ ಇದು. ನೂತನ ತಂಡಕ್ಕೆ ನನ್ನ ಸಂಪೂರ್ಣ ಸಹಕಾರ ಇದೆ ಎಂದರು.

ಈ ವೇಳೆ ಸ್ಕಾಲ್ ಇಂಟರ್‌ನ್ಯಾಷನಲ್ ಬೆಂಗಳೂರು ವಿಭಾಗದ ಪದಾಧಿಕಾರಿಗಳಾದ ಸುದೀಪ್ತಾ ದೇಬ್, ಅಯ್ಯಪ್ಪ ಸೋಮಯ್ಯ, ಮಣಿಮೇಗಲೈ ಹಾಗೂ ಸ್ಕಾಲ್ ಮೈಸೂರು ವಿಭಾಗದ ಸದಸ್ಯರು ಉಪಸ್ಥಿತರಿದ್ದರು.

6ನೇ ತರಗತಿ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು: 2024–25ನೇ ಸಾಲಿಗೆ ಪರಿಶಿಷ್ಟ ಪಂಗಡದ ವಿದ್ಯಾರ್ಥಿ ಗಳಿಗೆ 6ನೇ ತರಗತಿ ಪ್ರವೇಶಕ್ಕಾಗಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಯಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಪರಿಶಿಷ್ಟ ಪಂಗ ಡದ ವಿದ್ಯಾರ್ಥಿಗಳು 5ನೇ ತರಗತಿ ಯಲ್ಲಿ ಶೇ.60ರಷ್ಟು ಅಂಕ ಪಡೆದು ಉತ್ತೀರ್ಣರಾಗಿರಬೇಕು ಹಾಗೂ ಕುಟುಂಬದ ವಾರ್ಷಿಕ ಆದಾಯ 2 ಲಕ್ಷ ರೂ.ಗಳ ಒಳಗಿರಬೇಕು. ಅರ್ಜಿಗಳನ್ನು 21ರವರೆಗೆ ತಾಲೂಕು ಕಚೇರಿಗಳಲ್ಲಿ ಪಡೆಯಬಹುದು. ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯ ದಾಖಲಾತಿಗಳೊಂದಿಗೆ ಸಂಬಂಧಿ ಸಿದ ಕಚೇರಿಗಳಿಗೆ ಮೇ 21ರೊಳಗೆ ಸಲ್ಲಿಸುವುದು. ಹೆಚ್ಚಿನ ಮಾಹಿತಿಗಾಗಿ ಸಮಾಜ ಕಲ್ಯಾಣ ಇಲಾಖೆಯವರ ದೂ.ಸಂ: 0821–2427140 ಅನ್ನು ಸಂಪರ್ಕಿಸಬಹುದು.

ಹೃದಯಾಘಾತ: ಕರ್ತವ್ಯನಿರತ ಚುನಾವಣಾ ಸಿಬ್ಬಂದಿ ಸಾವು



ರಾಯಚೂರು: ಚುನಾವಣಾ ಕರ್ತವ್ಯ ನಿರತ ಬೂತ್ ಮಟ್ಟದ ಅಧಿಕಾರಿ ಹೃದಯಾಘಾತದಿಂದ ಸಾವನ್ನಪ್ಪಿರುವ ಘಟನೆ ದೇವದುರ್ಗ ತಾಲೂಕಿನ ಜಾಗೀರಜಾಡಲದಿನ್ನಿ ಗ್ರಾಮದ ಮತಗಟ್ಟೆಯಲ್ಲಿ ನಡೆದಿದೆ. ಬಸವರಾಜ್(56) ಮೃತರು.

ಮುಖ್ಯೋಪಾಧ್ಯಾಯರಾಗಿದ್ದ ಬಸವರಾಜ್ ಅವರನ್ನು ಬಿಎಲ್‌ಓ ಕರ್ತವ್ಯಕ್ಕೆ ನಿಯೋಜಿಸಲಾಗಿತ್ತು. ಕರ್ತವ್ಯದ ವೇಳೆ ಏಕಾಏಕಿ ಕುಸಿದುಬಿದ್ದ ಬಸವರಾಜ್ ಅವರನ್ನು ಇತರೆ ಸಿಬ್ಬಂದಿ ಆಸ್ಪತ್ರೆಗೆ ಸಾಗಿಸುತ್ತಿದ್ದರು. ಈ ವೇಳೆ ಮಾರ್ಗ ಮಧ್ಯೆಯೇ ಬಸವರಾಜ್ ಕೊನೆಯುಸಿರೆಳೆದಿದ್ದಾರೆ.

ಅಕ್ಷಯ ತೃತೀಯ: ಜೋಯಾಲುಕ್ಕಾಸ್‌ನಿಂದ ವಿಶೇಷ ಆಫರ್

ಮೈಸೂರು: ಭಾರತದ ಪ್ರಮುಖ ಆಭರಣ ಬ್ರಾಂಡ್‌ಗಳಲ್ಲಿ ಒಂದಾದ ಜೋಯಾಲುಕ್ಕಾಸ್ ಅಕ್ಷಯ ತೃತೀಯ ಹಬ್ಬದ ಶುಭ ಸಂದರ್ಭದಲ್ಲಿ ವಿವಿಧ ಕೊಡುಗೆಗಳನ್ನು ಘೋಷಿಸಿದೆ.

Joyalukkas

ಅಕ್ಷಯ ತೃತೀಯ ಕೊಡುಗೆಗಳು ಭಾರತದಾದ್ಯಂತ ಜೋಯಾಲುಕ್ಕಾಸ್ ಶೋರೂಮ್‌ಗಳಲ್ಲಿ ಲಭ್ಯವಿದೆ

ರೂ. 50,000 ಮತ್ತು ಅಧಿಕ ಮೌಲ್ಯದ ವಜ್ರಗಳು, ಅನ್‌ಕಟ್ ವಜ್ರಗಳು ಮತ್ತು ಬೆಲೆಬಾಳುವ ರತ್ನಾಭರಣಗಳ ಖರೀದಿ ಮೇಲೆ ರೂ. 2000 ಮೌಲ್ಯದ ಉಚಿತ ಗಿಫ್ಟ್ ವೋಚರ್ ನೀಡಲಾಗುವುದು. ಈ ಆಫರ್ ಮೇ 12ರವರೆಗೆ ಅನ್ವಯ. ರೂ. 50,000 ಕ್ಕಿಂತ ಮತ್ತು ಅಧಿಕ ಮೌಲ್ಯದ ಚಿನ್ನಾಭರಣಗಳನ್ನು ಖರೀದಿಸುವಾಗ ಗ್ರಾಹಕರಿಗೆ ರೂ. 1000 ಮೌಲ್ಯದ ಗಿಫ್ಟ್ ವೋಚರ್, ರೂ. 10,000 ಮೌಲ್ಯದ ಬೆಳ್ಳಿ ಆಭರಣಗಳನ್ನು ಖರೀದಿಸಿದಾಗ ರೂ. 500 ಮೌಲ್ಯದ ಗಿಫ್ಟ್ ವೋಚರ್ ನೀಡಲಾಗುವುದು. ಗ್ರಾಹಕರು ಮೇ 3ರಿಂದ 12ರವರೆಗೆ ಭಾರತದಾದ್ಯಂತ ಇರುವ ಜೋಯಾಲುಕ್ಕಾಸ್‌ನ ಎಲ್ಲಾ ಮಳಿಗೆಗಳಲ್ಲಿ ಈ ಹಬ್ಬದ ಕೊಡುಗೆ ಪಡೆಯಬಹುದು. ಅಕ್ಷಯ ತೃತೀಯ ಸಂದರ್ಭದಲ್ಲಿ ಜೋಯಾಲುಕ್ಕಾಸ್‌ನಲ್ಲಿ ಗ್ರಾಹಕರಿಗೆ ಆಯ್ದುಕೊಳ್ಳಲು ಒಂದು ಮಿಲಿಯನ್‌ಗಿಂತಲೂ ಹೆಚ್ಚಿನ ಅನನ್ಯ ವಿನ್ಯಾಸಗಳನ್ನು ಹೊಂದಿರುವ ವ್ಯಾಪಕ ಶ್ರೇಣಿಯ ಆಭರಣಗಳಿವೆ. ಈ ಆಭರಣಗಳು ಸಮಕಾಲೀನ ಪ್ರವೃತ್ತಿಗಳೊಂದಿಗೆ ಸಾಂಪ್ರದಾಯಿಕ ಸೊಬಗುಗಳ ಸಮ್ಮಿಲನವಾಗಿದೆ.

ಹಬ್ಬದ ಆಫರ್ ಕುರಿತು ಪ್ರತಿಕ್ರಿಯಿಸಿದ ಜೋಯಾಲುಕ್ಕಾಸ್ ಸಮೂಹದ ಅಧ್ಯಕ್ಷ, ವ್ಯವಸ್ಥಾಪಕ ನಿರ್ದೇಶಕ ಜೋಯ್ ಆಲುಕ್ಕಾಸ್, ಈ ಶುಭ ಸಂದರ್ಭದಲ್ಲಿ ಕೊಡುಗೆಗಳು ನಮ್ಮ ಗ್ರಾಹಕರಿಗೆ ಹೆಚ್ಚಿನ ಪ್ರಯೋಜನ ನೀಡಲಿವೆ ಎಂದು ಸಂತಸ ವ್ಯಕ್ತಪಡಿಸಿದರು.

ಡಿಪ್ಲೊಮಾ ಕೋರ್ಸ್ ಪ್ರವೇಶಕ್ಕಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನ



ಮೈಸೂರು ಮೇ 7– 2024–25ನೇ ಸಾಲಿನ ಶೈಕ್ಷಣಿಕ ಅವಧಿಗೆ ಕೈಮಗ್ಗ ಮತ್ತು ಜವಳಿ ತಂತ್ರಜ್ಞಾನದಲ್ಲಿ ಲ್ಯಾಟರಲ್ ಎಂಟ್ರಿ ಮುಖಾಂತರ ನೇರವಾಗಿ 2ನೇ ವರ್ಷದ ಡಿಪ್ಲೋಮಾ ಕೋರ್ಸ್ ಪ್ರವೇಶಕ್ಕಾಗಿ 32 ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಅರ್ಹ ಅಭ್ಯರ್ಥಿ ಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಆಯ್ಕೆಯಾದ ಅಭ್ಯರ್ಥಿಗಳಿಗೆ ವ್ಯಾಸಂಗದ ಸಮಯದಲ್ಲಿ ಪ್ರತಿ ತಿಂಗಳು 2,500 ರೂ. ಶಿಷ್ಯವೇತನ ನೀಡಲಾಗುವುದು ಹಾಗೂ ವಸತಿನಿಲಯದ ಸೌಲಭ್ಯವನ್ನು ಕಲ್ಪಿಸಲಾಗುವುದು.

ವಿದ್ಯಾರ್ಹತೆ: ಗಣಿತ, ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರದೊಂದಿಗೆ 12ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು ಅಥವಾ ಯಾವುದೇ ಜವಳಿ ವಿಭಾಗದ ವೃತ್ತಿಪರ ವಿಭಾಗದಲ್ಲಿ 12ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. ಅಥವಾ 10ನೇ ತರಗತಿ ತೇರ್ಗಡೆ (2 ವರ್ಷಗಳ ಐಟಿಐ) ತೇರ್ಗಡೆ ಎರಡನೇ ವರ್ಷದ ಡಿಪ್ಲೊಮಾ ಕೋರ್ಸ್‌ಗೆ ಪ್ರವೇಶಕ್ಕೆ ಅರ್ಹರಾಗಿರುತ್ತಾರೆ.

12ನೇ ತರಗತಿ ಪಾಸ್ (2 ವರ್ಷಗಳ ಐಟಿಐ) ತೇರ್ಗಡೆ 2ನೇ ವರ್ಷದ ಡಿಪ್ಲೋಮಾ ಕೋರ್ಸ್‌ಗೆ ಪ್ರವೇಶ ಪಡೆಯಲು ಅರ್ಹರಾಗಿರುತ್ತಾರೆ.

ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಜುಲೈ 01, 2024ಕ್ಕೆ ಅನ್ವಯಿಸುವಂತೆ ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ವಯೋಮಿತಿ 25 ವರ್ಷ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ವಯೋಮಿತಿ 27 ವರ್ಷ ಆಗಿರಬೇಕು.

ಆಸಕ್ತ ಅಭ್ಯರ್ಥಿಗಳು ಅರ್ಜಿಗಳನ್ನು https://khtigadag.ac.in/Lateralentryadmissionform.pdf ಲಿಂಕ್ ಮೂಲಕ ಆನ್ಲೈನ್ ನಲ್ಲಿ ಡೌನಲೋಡ್ ಮಾಡಿಕೊಂಡು, ಪೂರ್ಣವಾಗಿ ಭರ್ತಿ ಮಾಡಿ ಅಗತ್ಯ ದಾಖಲಾತಿಗಳೊಂದಿಗೆ ಗದಗ ಜಿಲ್ಲೆಯ ಬೆಟಗೇರಿಯ ನರಸಾಪುರದಲ್ಲಿರುವ ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆಯ ಪಾಂಶುಪಾಲರ ಕಚೇರಿಗೆ ಮೇ 31ರೊಳಗಾಗಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಗದಗ ಜಿಲ್ಲೆಯ ಬೆಟಗೇರಿಯ ನರಸಾಪುರದಲ್ಲಿರುವ ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆಯ ಪಾಂಶುಪಾಲರ ದೂ.ಸಂ. 08372–297221 ಅಥವಾ ಸಯ್ಯಾಜಿರಾವ್ ರಸ್ತೆಯಲ್ಲಿರುವ ಕೈಮಗ್ಗ ಮತ್ತು ಜವಳಿ ಇಲಾಖೆ ಉಪ ನಿರ್ದೇಶಕರ ದೂ. ಸಂ.0821–2441353 ಸಂಪರ್ಕಿಸಬಹುದು.

ಸುಧನ್ವಗೆ ಶೇ.85 ಅಂಕ



ಮೈಸೂರು: ಸೌಮ್ಯ ನಾಯಕಮ್ಮ ರಾಜಗೋಪಾಲ್ ಅಯ್ಯಂಗಾರ್ ಅವರ ಮರಿಮೊಮ್ಮಗನಾದ ಆರ್.ಸುಧನ್ವ, ಬೆಂಗಳೂರಿನ ರಾಜಾಜಿನಗರದ ಶ್ರೀ ವಾಣಿ ಪಬ್ಲಿಕ್ ಸ್ಕೂಲ್ ವಿದ್ಯಾರ್ಥಿಯಾಗಿದ್ದು, ಐಸಿಎಸ್‌ಸಿ 10ನೇ ತರಗತಿಯ ಪರೀಕ್ಷೆಯಲ್ಲಿ ಶೇಕಡ 85 ಅಂಕಗಳನ್ನು ಪಡೆದು ಉನ್ನತ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾನೆ.

ಶಕ್ತಿಧಾಮದಿಂದ ಯುವತಿ ನಾಪತ್ತೆ

ಮೈಸೂರು, ಮೇ 7–ತಾತ್ಕಾಲಿಕ ಆಶ್ರಯಕ್ಕಾಗಿ ಶಕ್ತಿಧಾಮಕ್ಕೆ ಪೊಲೀಸರು ಕರೆತಂದಿದ್ದ ಯುವತಿ ಕಾಣೆಯಾಗಿರುವ ಪ್ರಕರಣ ಕೆ.ಆರ್.ಠಾಣೆಯಲ್ಲಿ ದಾಖಲಾಗಿದೆ. ಎಂ.ಪ್ರಿಯಾ (21) ಕಾಣೆಯಾದ ಯುವತಿ. ಏ.4ರಂದು ಸರಗೂರು ಪೊಲೀಸ್ ಠಾಣೆಯಿಂದ ಪ್ರಿಯಾಳನ್ನು ತಾತ್ಕಾಲಿಕ ಆಶ್ರಯಕ್ಕಾಗಿ ಕರೆತಂದು ಶಕ್ತಿಧಾಮದಲ್ಲಿ ಬಿಡಲಾಗಿತ್ತು. ಆದರೆ, ಏ.30ರಂದು ರಾತ್ರಿ 9.30ಕ್ಕೆ ಊಟ ಮುಗಿಸಿಕೊಂಡು ಸಾಂತ್ವಾನ ಕೊಠಡಿಗೆ ತೆರಳಿದ್ದು, ನಂತರ ಅಲ್ಲಿ ನೋಡಿದಾಗ ಇಲ್ಲದಿರುವುದನ್ನು ಕಂಡು ಕೆ.ಆರ್.ಠಾಣೆಗೆ ದೂರು ನೀಡಲಾಗಿದೆ. ಈ ಯುವತಿ ಬಗ್ಗೆ ಮಾಹಿತಿ ತಿಳಿದು ಬಂದಲ್ಲಿ 0821–2418319,2418519 ಸಂಪರ್ಕಿಸಿ ಎಂದು ಪೊಲೀಸ್ ಪ್ರಕಟಣೆ ತಿಳಿಸಿದೆ.

ಅಶ್ಲೀಲ ವಿಡಿಯೋ ಪ್ರಕರಣ; ಪ್ರಜ್ವಲ್ ವಿರುದ್ಧ ಬ್ಲೂ ಕಾರ್ನರ್ ನೋಟಿಸ್ ಜಾರಿ



ಬೆಂಗಳೂರು, ಮೇ 7– ಅಶ್ಲೀಲ ವಿಡಿಯೋ ಪ್ರಕರಣಕ್ಕೆ ಸಂಬಂಧಿಸಿದಂತೆ ಹಾಸನ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ ಬ್ಲೂ ಕಾರ್ನರ್ ನೋಟಿಸ್ ಜಾರಿ ಮಾಡಲಾಗಿದ್ದು, ಇಂಟರ್‌ಪೋಲ್ 196 ರಾಷ್ಟ್ರಗಳಿಗೆ ಮಾಹಿತಿ ರವಾನಿಸಿರುವುದಾಗಿ ವಿಶೇಷ ತನಿಖಾ ತಂಡ (SIT) ತಿಳಿಸಿದೆ.

ಅಶ್ಲೀಲ ವಿಡಿಯೋ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಜ್ವಲ್ ರೇವಣ್ಣ ವಿಚಾರಣೆಗೆ ಹಾಜರಾಗಿಲ್ಲ ಮತ್ತು ಎಲ್ಲಿದ್ದಾರೆ ಎಂಬ ವಿಚಾರ ಯಾರಿಗೂ ತಿಳಿದಿರಲಿಲ್ಲ. ಪ್ರಜ್ವಲ್ ರೇವಣ್ಣ ಎಲ್ಲಿದ್ದಾರೆ ಎನ್ನುವ ಬಗ್ಗೆ ಮಾಹಿತಿ ನೀಡುವಂತೆ ಎಸ್‌ಐಟಿ ತಂಡ ಇಂಟರ್‌ಪೋಲ್‌ಗೆ ನೋಟಿಸ್ ನೀಡಿತ್ತು. ಈ ನೋಟಿಸ್‌ಗೆ ಇಂಟರ್‌ಪೋಲ್ ಉತ್ತರಿಸಿದ್ದು, ಸಿಬಿಐ ಮೂಲಕ ಎಸ್‌ಐಟಿಗೆ ಮಾಹಿತಿ ನೀಡಿದೆ. 196 ದೇಶಗಳಿಗೆ ನೋಟಿಸ್ ತಲುಪಿಸಲಾಗಿದೆ. ಕರ್ನಾಟಕದ ಏರ್‌ಪೋರ್ಟ್, ಬಂದರುಗಳು ಹಾಗೂ ಬಾರ್ಡರ್, ಚೆಕ್‌ಪೋಸ್ಟ್ ಎಲ್ಲಾ ಕಡೆಯೂ ಅಲರ್ಟ್ ಘೋಷಿಸಲಾಗಿದೆ. ಪ್ರಜ್ವಲ್ ರೇವಣ್ಣ ಬಗ್ಗೆ ಮಾಹಿತಿ ಸಿಕ್ಕಿದ್ದೇ ತಕ್ಷಣ ಹೇಳುವಂತೆ ಇಂಟರ್‌ಪೋಲ್ ಹೇಳಿದೆ. ಸದ್ಯ ಎಲ್ಲಾ ದೇಶಗಳಲ್ಲೂ ಪ್ರಜ್ವಲ್ ರೇವಣ್ಣನಿಗಾಗಿ ತೀವ್ರ ಶೋಧ ನಡೆಸಲಾಗುತ್ತಿದೆ.

ಬ್ಲೂ ಕಾರ್ನರ್ ನೋಟಿಸ್: ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿರುವ ವ್ಯಕ್ತಿ ಯಾವುದೇ ವಿಮಾನ ನಿಲ್ದಾಣ, ಬಂದರು, ಗಡಿಯಲ್ಲಿ ಕಾಣಿಸಿಕೊಂಡರೆ ಮಾಹಿತಿ ನೀಡಲಾಗುವುದು. ಯಾವುದೇ ಒಬ್ಬ ವ್ಯಕ್ತಿಯ ಕುರಿತಾಗಿ ಹೆಚ್ಚಿನ ಮಾಹಿತಿ ಸಂಗ್ರಹ ಮಾಡಲು, ಆತನ ಗುರುತು, ಆತ ಇರುವ ನಿಖರ ಸ್ಥಳ ಹಾಗೂ ಆತನ ಚಟುವಟಿಕೆಗಳನ್ನು ಗಮನಿಸಿ ಅಪರಾಧಿಕ ಕೃತ್ಯಗಳ ತನಿಖಾ ತಂಡಕ್ಕೆ ನೆರವಾಗಲು ಬ್ಲೂ ನೋಟಿಸ್ ಜಾರಿ ಮಾಡಲಾಗುತ್ತದೆ. ಸದ್ಯ ಪ್ರಜ್ವಲ್ ಪ್ರಕರಣದಲ್ಲಿ ಇದೇ ನೋಟಿಸ್ ಜಾರಿಯಾಗಿದೆ.

ಸಂಶೋಧಕ ಜಯಪ್ಪಗೌಡರಿಗೆ 'ಡಾ.ಚಿದಾನಂದಮೂರ್ತಿ' ಪ್ರಶಸ್ತಿ

ಮೈಸೂರು, ಮೇ 7–ಬೆಂಗಳೂರಿನ ಕನ್ನಡ ಗೆಳೆಯರ ಬಳಗದ ವತಿಯಿಂದ ಮೇ10ರಂದು ಸಂಶೋಧಕ ಡಾ.ಡಿ.ಎಸ್.ಜಯಪ್ಪಗೌಡ ಅವರಿಗೆ 'ಡಾ.ಎಂ. ಚಿದಾನಂದಮೂರ್ತಿ ಕನ್ನಡ ಸಂಸ್ಕೃತಿ' ಪ್ರಶಸ್ತಿ ಪ್ರದಾನ ಮಾಡಲಾಗುವುದು. ಅಂದು ಬೆಳಗ್ಗೆ 10.30ಕ್ಕೆ ಮೈಸೂರಿನ ಟಿ.ಕೆ.ಬಡಾವಣೆಯ 4ನೇ ಹಂತದ 1ನೇ ಅಡ್ಡರಸ್ತೆಯಲ್ಲಿರುವ ಡಾ.ಡಿ.ಎಸ್.ಜಯಪ್ಪಗೌಡರ ಕಾರ್ಯಕ್ರಮ ಆಯೋಜಿಸಿದ್ದು, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ.ಸಂತೋಷ ಹಾನಗಲ್ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಹಿರಿಯ ಸಂಶೋಧಕ ಡಾ.ಆರ್.ಶೇಷಶಾಸ್ತ್ರಿ ಅಧ್ಯಕ್ಷತೆ ವಹಿಸಲಿದ್ದಾರೆ. ವಿಶೇಷ ಅತಿಥಿಗಳಾಗಿ ಸ.ರ.ಸುದರ್ಶನ್, ವ.ಚ.ಚನ್ನೇಗೌಡ, ಕ್ಯಾತನಹಳ್ಳಿ ರಾಮಣ್ಣ ಮತ್ತು ಡಾ.ಸ್ಮಿತಾರೆಡ್ಡಿ ಆಗಮಿಸಲಿದ್ದಾರೆ.



ಡಾ.ಜಯಪ್ಪಗೌಡ


ಮೀನುಗಳು, ಇನ್ನಿತರೆ ಜಲಚರಗಳ ಸಾವು ಹಿನ್ನೆಲೆ: ಹೂಟಗಳ್ಳಿ ನಗರಸಭೆಯಿಂದ

ಹೆಬ್ಬಾಳು ಕೆರೆ ನೀರು ಸ್ವಚ್ಛತಾ ಕಾರ್ಯ ಆರಂಭ



ಹೂಟಗಳ್ಳಿ ನಗರಸಭೆ ವತಿಯಿಂದ ಮೈಸೂರಿನ ಹೆಬ್ಬಾಳು ಕೆರೆ ನೀರು ಸ್ವಚ್ಛಗೊಳಿಸುತ್ತಿರುವುದನ್ನು ಚಿತ್ರದಲ್ಲಿ ಕಾಣಬಹುದು.

> "ರಿಂಗ್ ರೋಡ್ ವ್ಯಾಪ್ತಿ ಒಳಗೆ ಮೈಸೂರು ಮಹಾನಗರಪಾಲಿಕೆ ವ್ಯಾಪ್ತಿಯ ಹೆಬ್ಬಾಳು ಭಾಗದಿಂದ ಭಾರಿ ಪ್ರಮಾಣದಲ್ಲಿ ಒಳಚರಂಡಿ ನೀರು ಕೆರೆಗೆ ಸೇರುತ್ತಿರುವುದರಿಂದ ಅಲ್ಲಿನ ನೀರು ಕಲುಷಿತಗೊಂಡು, ಅಪಾರ ಸಂಖ್ಯೆಯ ಮೀನುಗಳು ಹಾಗೂ ಇನ್ನಿತರೆ ಜಲಚರಗಳು ಸಾವನ್ನಪ್ಪಿವೆ ಎಂಬುದು ಪರಿಶೀಲನೆ ವೇಳೆ ಕಂಡು ಬಂದಿದೆ.
>
> –ಚಂದ್ರಶೇಖರ್, ಹೂಟಗಳ್ಳಿ ನಗರಸಭೆ ಆಯುಕ್ತ



ಮೈಸೂರು, ಮೇ 7 (ಆರ್‌ಕೆ)– ಸುತ್ತಮುತ್ತಲಿನ ಕೈಗಾರಿಕಾ ಪ್ರದೇಶಗಳಿಂದ ರಾಸಾಯನಿಕ ತ್ಯಾಜ್ಯ ಮಿಶ್ರಿತ ನೀರು ಹರಿದು ಬಂದು ಸೇರುತ್ತಿರುವುದರಿಂದ ಅಪಾರ ಪ್ರಮಾಣದ ಮೀನುಗಳು, ಇನ್ನಿತರೆ ಜಲಚರಗಳು ಸಾವನ್ನಪ್ಪಿರುವ ಹಿನ್ನೆಲೆಯಲ್ಲಿ ಮೈಸೂರಿನ ಹೆಬ್ಬಾಳು ಕೆರೆ ನೀರು ಸ್ವಚ್ಛಗೊಳಿಸುವ ಕಾರ್ಯವನ್ನು ಹೂಟಗಳ್ಳಿ ನಗರಸಭೆ ಆರಂಭಿಸಿದೆ.

ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿರುವ ಹೂಟಗಳ್ಳಿ ನಗರಸಭೆ ಆಯುಕ್ತ ಚಂದ್ರಶೇಖರ್, ಮೀನುಗಳು ಸಾವನ್ನಪ್ಪಿರುವ ವಿಷಯ ತಿಳಿಯುತ್ತಿದ್ದಂತೆಯೇ ಸೋಮವಾರ ಸಂಜೆಯೇ ತಾವು ಅಧಿಕಾರಿಗಳೊಂದಿಗೆ ಹೆಬ್ಬಾಳು ಕೆರೆಯ ಪರಿಸ್ಥಿತಿಯನ್ನು ಪರಿಶೀಲಿಸಿದ್ದೇನೆ ಎಂದರು.

ಹೆಬ್ಬಾಳು ಬಡಾವಣೆಯ ಬಹುತೇಕ ವಸತಿ ಪ್ರದೇಶಗಳ ಕಲುಷಿತ ನೀರು ಚರಂಡಿ ಮೂಲಕ ಹರಿದು ಹೆಬ್ಬಾಳು ಕೆರೆ ಸೇರುತ್ತಿದೆ. ಆದರೆ, ಯಾವುದೇ ಕೈಗಾರಿಕಾ ಘಟಕಗಳಿಂದ ರಾಸಾಯನಿಕಯುಕ್ತ ತ್ಯಾಜ್ಯ ನೀರು ಕೆರೆಗೆ ಸೇರುತ್ತಿರುವುದು ನಾವು ಪರಿಶೀಲನೆ ನಡೆಸಿದ ವೇಳೆ ಕಂಡು ಬಂದಿಲ್ಲ. ಆದಾಗ್ಯೂ ನಮ್ಮ ನಗರಸಭೆ ವ್ಯಾಪ್ತಿಯಲ್ಲಿನ ಕೈಗಾರಿಕೆಗಳಿಂದ ರಾಸಾಯನಿಕಯುಕ್ತ ತ್ಯಾಜ್ಯ ನೀರು ಕೆರೆಗೆ ತಲುಪುತ್ತಿದೆಯೇ ಎಂಬುದನ್ನು ಅರಿಯಲು ಮತ್ತೊಮ್ಮೆ ಸರ್ವೆ ಮಾಡಿಸುತ್ತೇವೆ ಎಂದು ಚಂದ್ರಶೇಖರ್ 'ಮಿತ್ರ'ನಿಗೆ ತಿಳಿಸಿದ್ದಾರೆ. ಇಂದಿನಿಂದ ಹೆಬ್ಬಾಳು ಕೆರೆ ನೀರು ಸ್ವಚ್ಛ ಗೊಳಿಸುವ ಕಾಮಗಾರಿಯನ್ನು ಆರಂಭಿಸಿದ್ದೇವೆ. ಇದು ಶಾಶ್ವತ ಪರಿಹಾರವಲ್ಲ. ಅಲ್ಲಿಗೆ ಹರಿದು ಬರುವ ಕಲುಷಿತ ನೀರನ್ನು ಸಂಪೂರ್ಣ ಬಂದ್ ಮಾಡಿ, ಶುದ್ಧ ನೀರು ಹರಿದು ಬರುವ ಮಾರ್ಗದಲ್ಲಿನ ಅಡೆ ತಡೆ ತೆರವುಗೊಳಿಸಿದರಷ್ಟೇ ಶಾಶ್ವತ ಪರಿಹಾರ ಸಾಧ್ಯ. ನಾವು ಆ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾಗಿದ್ದೇವೆ ಎಂದು ತಿಳಿಸಿದರು.

ಒಂದು ವೇಳೆ ಯಾವುದೇ ಕೈಗಾರಿಕೆಯಿಂದ ಉತ್ಪತ್ತಿಯಾಗುವ ತ್ಯಾಜ್ಯ ಕೆರೆ ಸೇರುತ್ತಿದೆ ಎಂಬುದು ಕಂಡು ಬಂದಲ್ಲಿ ತಕ್ಷಣವೇ ಅದನ್ನು ಬಂದ್ ಮಾಡಿ, ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ಚಂದ್ರಶೇಖರ್ ತಿಳಿಸಿದರು.

ಡಾಂಬರೀಕರಣ ಸ್ಥಗಿತಗೊಳಿಸಲು ಸ್ಥಳೀಯರ ಪಟ್ಟು

● ಸಿದ್ದಾಪುರ-ಕರಡಿಗೋಡು ರಸ್ತೆಯ ಕಾಮಗಾರಿ ಕಳಪೆ ● ಕಾಂಗ್ರೆಸ್ ಮುಖಂಡರೊಂದಿಗೆ ಮಾತಿನ ಚಕಮಕಿ




ಸಿದ್ದಾಪುರ-ಕರಡಿಗೋಡು ರಸ್ತೆಯ ಡಾಂಬರೀಕರಣ. ಮತ್ತೊಂದು ಚಿತ್ರದಲ್ಲಿ ಸಿದ್ದಾಪುರ-ಕರಡಿಗೋಡು ರಸ್ತೆ ಡಾಂಬರೀಕರಣ ಕುರಿತು ಸ್ಥಳೀಯರು, ಚಾಲಕರು ಹಾಗೂ ಕಾಂಗ್ರೆಸ್ ಮುಖಂಡರ ನಡುವೆ ಮಾತಿನ ಚಕಮಕಿ ನಡೆಯಿತು.

ಸಿದ್ದಾಪುರ, ಮೇ 7-ಸಿದ್ದಾಪುರ-ಕರಡಿಗೋಡು ರಸ್ತೆಗೆ ಕಳಪೆ ಡಾಂಬರೀಕರಣ ಮಾಡಲಾಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಗುತ್ತಿಗೆದಾರರು ಸ್ಥಳಕ್ಕೆ ಬರುವವರೆಗೂ ಕಾಮಗಾರಿ ಸ್ಥಗಿತಗೊಳಿಸಬೇಕು ಎಂದು ಸ್ಥಳೀಯರು ಹಾಗೂ ಆಟೋ ಚಾಲಕರು ಪಟ್ಟುಹಿಡಿದರು.

ಇದೇ ವೇಳೆ ಗುತ್ತಿಗೆದಾರರು ಹಾಗೂ ಇಂಜಿನಿಯರ್ ಪರವಾಗಿ ಮಾತನಾಡಿದವರನ್ನು ತರಾಟೆಗೆ ತೆಗೆದುಕೊಂಡ ಸ್ಥಳೀಯರು, ಕಳೆದ 20 ವರ್ಷಗಳಿಂದಲೂ ಅಭಿವೃದ್ಧಿ ಕಾಣದ ಸಿದ್ದಾಪುರ-ಕರಡಿಗೋಡು ರಸ್ತೆಗೆ ಇದೀಗ 30 ಲಕ್ಷ ರೂ. ವೆಚ್ಚದಲ್ಲಿ ಡಾಂಬರೀಕರಣ ಮಾಡಲಾಗುತ್ತಿದೆ. ಇದು ಕಳಪೆಯಾಗಿದ್ದು, ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಗುತ್ತಿಗೆದಾರರು ಸ್ಥಳಕ್ಕೆ ಬರುವವರೆಗೂ ಕಾಮಗಾರಿ ಸ್ಥಗಿತಗೊಳಿಸಬೇಕು ಎಂದು ಆಗ್ರಹಿಸಿದರು.

ಸ್ಥಳದಲ್ಲಿದ್ದ ಲೋಕೋಪಯೋಗಿ ಇಲಾಖೆಯ ವರ್ಕ್ ಇನ್ಸ್‌ಪೆಕ್ಟರ್ ದೀಪಕ್ ಅವರನ್ನು ಸ್ಥಳೀಯರು, ಕಾಮಗಾರಿಯ ಯೋಜನೆ, ವೆಚ್ಚ, ಅಗಲ, ಉದ್ದದ ಬಗ್ಗೆ ಪ್ರಶ್ನಿಸಿದರು. ನಂತರ ದೀಪಕ್, ಅಂದಾಜು ಮೊತ್ತವು ಲಕ್ಷ ರೂ. ವೆಚ್ಚದ ಕಾಮಗಾರಿಯಾಗಿದ್ದು 380 ಮೀಟರ್ ಉದ್ದ, ಮೂರು ಮೀಟರ್ ಅಗಲದ ರಸ್ತೆ ಡಾಂಬರೀಕರಣ ಮಾಡಲಾಗುತ್ತಿದೆ ಎಂದು ಮಾಹಿತಿ ನೀಡಿದರು. ಆದರೂ ಸ್ಥಳೀಯರು, ಗುಣಮಟ್ಟದ ಕಾಮಗಾರಿ ನಡೆಸಬೇಕು. ಗುತ್ತಿಗೆದಾರರು ಹಾಗೂ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಬರುವವರೆಗೂ ಕಾಮಗಾರಿ ಸ್ಥಗಿತಗೊಳಿಸಬೇಕು ಎಂದು ಪಟ್ಟುಹಿಡಿದರು.

ಕರಡಿಗೋಡು ಗ್ರಾಮೀಣ ಪ್ರದೇಶವಾಗಿದ್ದು, 20 ವರ್ಷಗಳಿಂದಲೂ ಈ ರಸ್ತೆ ಅಭಿವೃದ್ಧಿ ಕಾಣದೆ ಗುಂಡಿಮಯವಾಗಿದೆ. ಯಾವುದೇ ಬಸ್‌ಗಳ ಸಂಚಾರ ಇಲ್ಲದೆ ಖಾಸಗಿ ವಾಹನಗಳನ್ನೇ ಸ್ಥಳೀಯರು ಅವಲಂಬಿಸಿದ್ದಾರೆ. ಚುನಾವಣೆಗೂ ಮುನ್ನ ಶಾಸಕ ಎ.ಎಸ್.ಪೊನ್ನಣ್ಣ ಗ್ರಾಮಸ್ಥರ ಬೇಡಿಕೆಗೆ ಸ್ಪಂದಿಸಿ, ರಸ್ತೆ ಅಭಿವೃದ್ಧಿಗೆ ಚಾಲನೆ ನೀಡಿದ್ದರು. ಆದರೆ, ಗುಣಮಟ್ಟದ ಕಾಮಗಾರಿ ನಡೆಸುತ್ತಿಲ್ಲ ಎಂದು ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಹುಸೇನ್ ಆಕ್ರೋಶ ವ್ಯಕ್ತಪಡಿಸಿದರು.

ಮಾತಿನ ಚಕಮಕಿ: ರಸ್ತೆ ಡಾಂಬರೀಕರಣ ಕುರಿತು ಆಟೋ ಚಾಲಕರು, ಸ್ಥಳೀಯರು ಹಾಗೂ ಗ್ರಾಮ ಪಂಚಾಯಿತಿಯ ಜನಪ್ರತಿನಿಧಿಗಳು, ಕಾಂಗ್ರೆಸ್ ಮುಖಂಡರ ನಡುವೆ ಪರ-ವಿರೋಧದೊಂದಿಗೆ ಮಾತಿನ ಚಕಮಕಿ ನಡೆಯಿತು. ನಂತರ ಲೋಕೋಪಯೋಗಿ ಇಲಾಖೆಯ ವರ್ಕ್ ಇನ್ಸ್‌ಪೆಕ್ಟರ್ ದೀಪಕ್, ಗುಣಮಟ್ಟದ ಕಾಮಗಾರಿ ನಡೆಸುವುದಾಗಿ ಭರವಸೆ ನೀಡಿದರು.

ಇದೇ ವೇಳೆ ಗ್ರಾಪಂ ಅಧ್ಯಕ್ಷೆ ಪ್ರೇಮಾ ಗೋಪಾಲ್, ಉಪಾಧ್ಯಕ್ಷ ಪಳನಿ ಸ್ವಾಮಿ, ಸದಸ್ಯ ಅಬ್ದುಲ್ ಶುಕೂರ್, ಮಾಜಿ ಸದಸ್ಯರಾದ ವಿಲ್ಸನ್, ಕರ್ಪಯ್ಯ, ವಲಯ ಕಾಂಗ್ರೆಸ್ ಅಧ್ಯಕ್ಷ ಪ್ರಕಾಶ, ವಾಹನ ಚಾಲಕರ ಮಾಲೀಕರ ಸಂಘದ ಅಧ್ಯಕ್ಷ ಸತೀಶ್, ಆಟೋ ಚಾಲಕರಾದ ಸುರೇಶ್, ಮುಸ್ತಫ, ಮಜೀದ್, ಮಣಿ ಮತ್ತಿತರರು ಹಾಜರಿದ್ದರು.

ಕರ್ಣಂಗೇರಿಯಲ್ಲಿ ರಾಜರಾಜೇಶ್ವರಿ ರಥೋತ್ಸವ



ಕರ್ಣಂಗೇರಿ ಕ್ಷೇತ್ರದ ರಾಜರಾಜೇಶ್ವರಿ ದೇವಾಲಯದ ರಥೋತ್ಸವದಲ್ಲಿ ಭಾಗವಹಿಸಿದ್ದ ಭಕ್ತರು.

ಮಡಿಕೇರಿ, ಮೇ 7-ನಗರದಂಚಿನ ಕರ್ಣಂಗೇರಿ ಕ್ಷೇತ್ರದ ಶ್ರೀ ರಾಜರಾಜೇಶ್ವರಿ ದೇವಾಲಯದ ವಾರ್ಷಿಕೋತ್ಸವ ಹಾಗೂ ರಥೋತ್ಸವ ಮಂಗಳವಾರ ಜರುಗಿತು.

ವಾರ್ಷಿಕೋತ್ಸವ ಹಾಗೂ ರಥೋತ್ಸವ ಅಂಗವಾಗಿ ಮುಂಜಾನೆಯಿಂದಲೇ ವಿವಿಧ ಪೂಜಾ ಕೈಂಕರ್ಯ ನೆರವೇರಿಸಲಾಯಿತು. ನಂತರ ಧ್ವಜಾರೋಹಣ, ಗಣಪತಿ ಹೋಮ, ದೇವಿಗೆ ಅಭಿಷೇಕ, ಹೂವಿನ ಅಲಂಕಾರ ಹಾಗೂ ತೀರ್ಥ ಸ್ನಾನ ನಡೆಯಿತು. ಕಳಸ ಪೂಜೆ, ನೈವೇದ್ಯ ಹಾಗೂ ಮಹಾ ಮಂಗಳಾರತಿ ಬಳಿಕ ದೇವಾಲಯ ಸುತ್ತ ರಥೋತ್ಸವ ಜರುಗಿತು. ತುಲಾಭಾರ, ತಡೆಮುಡಿ ತೆಗೆಯುವುದು, ತೀರ್ಥಸ್ನಾನ, ಉರುಳು ಸೇವೆ, ಕುಂಕುಮ ಅರ್ಚನೆ ನೆರವೇರಿಸಲಾಯಿತು. ಇದೇ ವೇಳೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು. ಸಂಜೆ ದೇವಾಲಯದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ದೀಪಾಲಂಕಾರ ಮಾಡಲಾಗಿತ್ತು. ವಿವಿಧೆಡೆಯಿಂದ ಪಾಲ್ಗೊಂಡಿದ್ದ ಭಕ್ತರು ದೇವಿಗೆ ವಿಶೇಷ ಪೂಜೆ ಸಲ್ಲಿಸಿದರು.

ಹಾತೂರು 'ಬಿ' ತಂಡ ಪ್ರಥಮ ಸ್ಥಾನ



ಕೊಡಗು ಹೆಗ್ಗಡೆ ಕ್ರಿಕೆಟ್ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನ ಪಡೆದ ಹಾತೂರು 'ಬಿ' ತಂಡಕ್ಕೆ ಬಹುಮಾನ ವಿತರಿಸಲಾಯಿತು.

ಗೋಣಿಕೊಪ್ಪ, ಮೇ 7-ಕೊಡಗು ಹೆಗ್ಗಡೆ ಕ್ರೀಡಾಕೂಟದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಹಾತೂರು 'ಬಿ' ತಂಡ ಪ್ರಥಮ ಹಾಗೂ ಹಾಲುಗುಂದ ತಂಡ ದ್ವಿತೀಯ ಸ್ಥಾನ ಗಳಿಸಿವೆ.

ಕೊಡಗು ಹೆಗ್ಗಡೆ ಸಮಾಜ ವತಿಯಿಂದ ಹಾತೂರು ಸರ್ಕಾರಿ ಪ್ರಾಥಮಿಕ ಶಾಲೆಯ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಮೈದಾನದಲ್ಲಿ ಆಯೋಜಿಸಿದ್ದ 21ನೇ ವರ್ಷದ ಪಂದ್ಯಾವಳಿಯ ಫೈನಲ್‌ನಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಹಾಲುಗುಂದ ತಂಡ 72 ರನ್ ಗುರಿ ನೀಡಿತು. ನಂತರ ಬ್ಯಾಟಿಂಗ್ ಮಾಡಿದ ಹಾತೂರು ತಂಡ 4 ವಿಕೆಟ್ ಕಳೆದುಕೊಂಡು ಗೆಲುವು ಸಾಧಿಸಿತು.

ಪಂದ್ಯ ಶ್ರೇಷ್ಠ ಪ್ರಶಸ್ತಿಯನ್ನು ಹಾತೂರು ತಂಡದ ಕೊಂಗೇಪಂಡ ಸಚಿನ್, ಹಾಲುಗುಂದ ತಂಡದ ಪಂದಿಕಂಡ ಶ್ರೇಯಶ್ ಉತ್ತಮ ಬೌಲರ್, ಹಾತೂರು ತಂಡದ ಕೊಂಗೇಪಂಡ ನಿತಿನ್ ಬೆಸ್ಟ್ ಬ್ಯಾಟ್ಸ್‌ಮನ್ ಪ್ರಶಸ್ತಿ ಪಡೆದರು. ಮಹಿಳೆಯರ ಥ್ರೋಬಾಲ್‌ನಲ್ಲಿ ಬಿಟ್ಟಂಗಾಲ ಪ್ರಥಮ, ಪಾರಣೆ ದ್ವಿತೀಯ, ಹಗ್ಗಜಗ್ಗಾಟದಲ್ಲಿ ಒಂಟಿಯಂಗಡಿ ಪ್ರಥಮ, ಬೆಟ್ಟಗೇರಿ ದ್ವಿತೀಯ ಹಾಗೂ ಪುರುಷರ ಹಗ್ಗಜಗ್ಗಾಟದಲ್ಲಿ ಹಾಲುಗುಂದ ಪ್ರಥಮ, ಬೆಟ್ಟಗೇರಿ ದ್ವಿತೀಯ ಸ್ಥಾನ ಪಡೆದುಕೊಂಡವು.

ಇದೇ ವೇಳೆ ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ, ಸ್ನಾತಕೋತ್ತರ ಪದವಿಯಲ್ಲಿ ಹೆಚ್ಚು ಅಂಕ ಪಡೆದ ಕೊಡಗು ಹೆಗ್ಗಡೆ ಜನಾಂಗದ ವಿದ್ಯಾರ್ಥಿಗಳು ಹಾಗೂ ವನ್ಯಜೀವಿ ಪಶು ವೈದ್ಯೆ ಡಾ.ಮೇಘನಾ ಪೆಮ್ಮಯ್ಯ ಅವರನ್ನು ಸನ್ಮಾನಿಸಲಾಯಿತು. ಕೊಡಗು ಹೆಗ್ಗಡೆ ಸಮಾಜದ ಅಧ್ಯಕ್ಷ ಪಡಿಞರಂಡ ಜೆ.ಅಯ್ಯಪ್ಪ, ಉದ್ಯಮಿ ಪಂದಿಕಂಡ ಕುಶ ದಿನೇಶ್ ಬಹುಮಾನ ವಿತರಿಸಿದರು. ಪಡಿಞರಂಡ ಪ್ರಭು ಕುಮಾರ್, ಕ್ರೀಡಾ ನಿರ್ದೇಶಕ ಪಂದಿಕಂಡ ನಾಗೇಶ್, ಸಮಾಜದ ಉಪಾಧ್ಯಕ್ಷ ಕೊರಕುಟ್ಟೀರ ಸರಾ ಚೆಂಗಪ್ಪ ಇದ್ದರು.

ಮಕ್ಕಳ ಬೇಸಿಗೆ ಶಿಬಿರ ಮುಕ್ತಾಯ



ವಿರಾಜಪೇಟೆ, ಮೇ 7-ಪಟ್ಟಣದ ಇಂಟೋಪೀಸ್ ನೃತ್ಯ ಟೀಂ, ಟೆಕ್ನೋಡೋ ಟ್ರೈನಿಂಗ್ ಸೆಂಟರ್ ಮತ್ತು ಪ್ರಗತಿ ಶಾಲೆಯ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಮಕ್ಕಳ ಬೇಸಿಗೆ ಶಿಬಿರ ಮುಕ್ತಾಯವಾಯಿತು.

26 ದಿನ ನಡೆದ ಶಿಬಿರದಲ್ಲಿ ಯೋಗ, ನೃತ್ಯ, ನಾಟಕ, ಸಂಗೀತ, ಕರಕುಶಲ, ಜಿಮ್ನಾಸ್ಟಿಕ್, ಚಿತ್ರಕಲೆ, ಟೆಕ್ವಾಂಡೋ ಪ್ರದರ್ಶನ ಸೇರಿದಂತೆ ಇತರ ಕಲಿಕಾ ಚಟುವಟಿಕೆಗಳನ್ನು ಆಯೋಜಿಸಲಾಗಿತ್ತು. ಸುಮಾರು 75ಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿದ್ದರು. ಬಹುಮಾನ ಮತ್ತು ಪ್ರಶಸ್ತಿ ಪತ್ರ ವಿತರಿಸಲಾಯಿತು. ಶಿಬಿರದ ಸಮಾರೋಪದಲ್ಲಿ ಪ್ರಗತಿ ಶಾಲೆಯ ವ್ಯವಸ್ಥಾಪಕ ವಾದಂಡ ತಿಮ್ಮಯ್ಯ ಮಾತನಾಡಿ, ವಿದ್ಯಾರ್ಥಿಗಳು ಬೇಸಿಗೆ ರಜಾ ದಿನಗಳಲ್ಲಿ ಮನೆಯಲ್ಲಿ ಹೆಚ್ಚು ಸಮಯ ಮೊಬೈಲ್ ಹಿಡಿದು ಟಿವಿ ಮುಂದೆ ಕುಳಿತುಕೊಳ್ಳುತ್ತಿದ್ದಾರೆ. ಆದ್ದರಿಂದ ಬೇಸಿಗೆ ಶಿಬಿರಗಳಲ್ಲಿ ಭಾಗವಹಿಸಿ ನೃತ್ಯ, ಕ್ರೀಡೆ, ನಾಟಕ ಇತರ ಚಟುವಟಿಕೆ ಕಲಿತು ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ತಿಳಿಸಿದರು.

ಕಾವೇರಿ ಶಾಲೆಯ ಕಾರ್ಯದರ್ಶಿ ವಿನೋದ್, ಪ್ರಗತಿ ಶಾಲೆಯ ನಿರ್ವಾಹಕಿ ಸುಷ್ಮಾ ತಿಮ್ಮಯ್ಯ, ಚಿತ್ರಕಲಾ ಶಿಕ್ಷಕರಾದ ಕ್ಲಿಪರ್ಡ್ ಡಿಮೆಲ್ಲೊ, ಭಾನುಮತಿ ರಾಜನ್, ಕಾರ್ಯಕ್ರಮ ಆಯೋಜಕರಾದ ಇಂಟೋಪೀಸ್ ಟೀಂನ ವಿಷ್ಣು ಮಾತನಾಡಿದರು. ಸಮಾರೋಪದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಶಿಕ್ಷಕರು, ಪೋಷಕರು ಭಾಗವಹಿಸಿದ್ದರು.

ದಿನ ಬಿಟ್ಟು ದಿನ ನೀರು ಸರಬರಾಜು

ಮಡಿಕೇರಿ, ಮೇ 7-ನೀರಿನ ಕೊರತೆ ಹಿನ್ನೆಲೆಯಲ್ಲಿ ನಗರಕ್ಕೆ ದಿನ ಬಿಟ್ಟು ದಿನ ಕುಡಿಯುವ ನೀರು ಸರಬರಾಜು ಮಾಡಲಾಗುವುದು.

ಬೇಸಿಗೆ ಹಿನ್ನೆಲೆಯಲ್ಲಿ ಕೂಟುಹೊಳೆಯಲ್ಲಿ ನೀರು ಬತ್ತಿ ಹೋಗಿರುವುದರಿಂದ ಕುಂಡಾ ಮೆಸ್ತ್ರಿಯಿಂದ ನೀರು ಸರಬರಾಜು ಮಾಡಲಾಗುತ್ತಿದ್ದು, ನೀರಿನ ಬವಣೆ ಹೆಚ್ಚಾಗಿರುವುದರಿಂದ ನಗರದ ಎಲ್ಲಾ 23 ವಾರ್ಡ್‌ಗಳಿಗೆ ಏಕಕಾಲದಲ್ಲಿ ನೀರು ಸರಬರಾಜಿಗೆ ಕಷ್ಟವಾಗುತ್ತಿರುವುದರಿಂದ ದಿನ ಬಿಟ್ಟು ದಿನ ನೀರು ಸರಬರಾಜು ಮಾಡಲಾಗುವುದು ಎಂದು ನಗರಸಭೆ ಪೌರಾಯುಕ್ತರು ತಿಳಿಸಿದ್ದಾರೆ.

ಆದ್ದರಿಂದ ನಗರಸಭೆ ವ್ಯಾಪ್ತಿಯ ನಿವಾಸಿಗಳು ಕಾರು, ಸ್ಕೂಟರ್ ಇತ್ಯಾದಿ ವಾಹನಗಳನ್ನು ಕುಡಿಯುವ ನೀರಿನಿಂದ ತೊಳೆಯುವುದನ್ನು ನಿಲ್ಲಿಸಿ ಮಿತವಾಗಿ ನೀರನ್ನು ಬಳಸ ಬೇಕು. ಒಂದು ವೇಳೆ ಕುಡಿಯುವ ನೀರನ್ನು ಅನುಪಯುಕ್ತವಾಗಿ ಬಳಕೆ ಮಾಡುವುದು ಕಂಡು ಬಂದಲ್ಲಿ ದಂಡ ವಿಧಿಸಲಾಗುವುದು ಎಂದು ನಗರಸಭೆ ಪೌರಾಯುಕ್ತರು ಎಚ್ಚರಿಸಿದ್ದಾರೆ.

ಅತ್ಯಾಚಾರಿಗೆ 10 ವರ್ಷ ಜೈಲು, 10 ಸಾವಿರ ದಂಡ



ಮಡಿಕೇರಿ, ಮೇ 7-ಮದುವೆಯಾಗುವುದಾಗಿ ನಂಬಿಸಿ ಅತ್ಯಾಚಾರ ಎಸಗಿದ್ದ ಅಪರಾಧಿಗೆ ಮಡಿಕೇರಿಯ 3ನೇ ಹೆಚ್ಚುವರಿ ಜಿಲ್ಲಾ ಸತ್ರ ನ್ಯಾಯಾಲಯ 10 ವರ್ಷ ಜೈಲು ಶಿಕ್ಷೆ ಮತ್ತು 10 ಸಾವಿರ ರೂ. ದಂಡ ವಿಧಿಸಿ ತೀರ್ಪು ನೀಡಿದೆ.

ಪೊನ್ನಂಪೇಟೆ ತಾಲೂಕಿನ ಮಾಯಮುಡಿ ಗ್ರಾಮದ ನಿವಾಸಿ ಕೆ.ಎನ್.ಪುಟ್ಟರಾಜು(32) ಶಿಕ್ಷೆಗೆ ಒಳಗಾದ ಅಪರಾಧಿ. ಈತ ಅದೇ ಗ್ರಾಮದ ಮಹಿಳೆಗೆ ಮದುವೆ ಯಾಗುವುದಾಗಿ ನಂಬಿಸಿ ಅತ್ಯಾಚಾರ ಎಸಗಿದ್ದ. ಈ ಹಿನ್ನೆಲೆಯಲ್ಲಿ ಈತನ ವಿರುದ್ಧ 2021ರ ಮಾ.30ರಂದು ಗೋಣಿಕೊಪ್ಪ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು.

ಪ್ರಕರಣದ ತನಿಖಾಧಿಕಾರಿಗಳಾದ ಎಂ.ಎನ್.ರಾಮರೆಡ್ಡಿ, ಎಸ್.ಎನ್.ಜಯರಾಮ್ ಹಾಗೂ ಸಹಾಯಕ ತನಿಖಾಧಿಕಾರಿ ಅಬ್ದುಲ್ ಕೆ.ಎ.ಮಜೀದ್ ಪುಟ್ಟರಾಜು ವಿರುದ್ಧ 2021ರ ಡಿಸೆಂಬರ್ 28ರಂದು ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶ ಜಿ.ಪ್ರಶಾಂತಿ, ಅಪರಾಧಿ ಪುಟ್ಟರಾಜುಗೆ 10 ವರ್ಷ ಜೈಲು ಶಿಕ್ಷೆ ಹಾಗೂ 10 ಸಾವಿರ ರೂ. ದಂಡ ವಿಧಿಸಿ ತೀರ್ಪು ನೀಡಿದರು. ಸರ್ಕಾರದ ಪರವಾಗಿ ಅಭಿ ಯೋಜಕ ಮಹಮ್ಮದ್ ಶೌಕತ್ ಆಲಿ ವಾದ ಮಂಡಿಸಿದರು.

ವರ್ಷಾಧಾರೆಗೆ ರೈತರ ಸಾಕಷ್ಟು ಬೆಳೆ ಹಾನಿ

ಹನೂರು, ಮಣಜನೂರು ವ್ಯಾಪ್ತಿ 10 ಎಕರೆಗೂ ಹೆಚ್ಚು ಬಾಳೆ ಬೆಳೆ ನಷ್ಟ



ಚಾಮರಾಜನಗರ, ಮೇ 7-ಜಿಲ್ಲೆಯಲ್ಲಿ ಈ ಬಾರಿ ಬರಗಾಲ ಆವರಿಸಿದ್ದು, ಜನ-ಜಾನುವಾರುಗಳು ಬಿಸಿಲಿನ ಬೇಗೆಗೆ ಹೈರಾಣರಾಗಿರುವುದು ಒಂದೆಡೆಯಾದರೆ, ಕಳೆದೊಂದು ವಾರದಿಂದ ಆಗಾಗ ವಿವಿಧೆಡೆ ಸುರಿದ ವರ್ಷಾಧಾರೆಯಿಂದ ಸಾಕಷ್ಟು ಬೆಳೆ ಹಾನಿ ಆಗಿದ್ದು, ರೈತರು ಕಂಗಾಲಾಗಿದ್ದಾರೆ.

ಕಳೆದ ಶುಕ್ರವಾರ ಸುರಿದ ಬಿರುಗಾಳಿ ಸಹಿತ ಗಾಳಿ ಮಳೆಗೆ 502.35 ಹೆಕ್ಟೇರ್‌ನಷ್ಟು ಬಾಳೆ ಬೆಳೆಗೆ ಹಾನಿಯಾಗಿದೆ ಎಂದು ಅಂದಾಜಿಸಲಾಗಿದೆ. ಅಲ್ಲದೇ ಮಂಗಳವಾರ ಮುಂಜಾನೆ ಸುರಿದ ಬಿರುಗಾಳಿ ಸಹಿತ ಮಳೆಯಿಂದ ಹನೂರು, ಮಣಜನೂರು ಸೇರಿದಂತೆ ಹಲವೆಡೆ ಸುಮಾರು 10 ಎಕರೆಗೂ ಹೆಚ್ಚು ಬಾಳೆ ಬೆಳೆ ನಷ್ಟವಾಗಿದೆ.

ವರ್ಷದ ಮೊದಲ ಮಳೆ ಅವಾಂತರ: ಜಿಲ್ಲೆಯ ವಿವಿಧ ಭಾಗಗಳಲ್ಲಿ ಕಳೆದ ವಾರ ವರ್ಷದ ಮೊದಲ ಮಳೆಯಾಗಿತ್ತು. ಆದರೆ, ಮಳೆಯೊಂದಿಗೆ ಬಿರುಗಾಳಿಯೂ ಬೀಸಿದ್ದರಿಂದ ಬಾಳೆಯೊಂದಿಗೆ 0.60 ಹೆಕ್ಟೇರ್ ಪ್ರದೇಶದಲ್ಲಿ ಬೆಳೆದಿರುವ ಪಪ್ಪಾಯ ಬೆಳೆಯೂ ಹಾನಿಯಾಗಿದೆ. ನಾಲ್ಕು ತೆಂಗಿನ ಮರಗಳು ಧರೆಗುರುಳಿರುವ ಬಗ್ಗೆಯೂ ವರದಿಯಾಗಿದೆ.

ಚಾಮರಾಜನಗರ ತಾಲೂಕಿನಲ್ಲಿ 96 ಹೆಕ್ಟೇರ್‌ನಲ್ಲಿ ಬಾಳೆ ನಷ್ಟವಾಗಿದ್ದು, ಹರವೆ ಹೋಬಳಿಯಲ್ಲಿ ಅತಿ ಹೆಚ್ಚು ಅಂದರೆ 72 ಹೆಕ್ಟೇರ್‌ನಷ್ಟು ಬಾಳೆ ಫಸಲು ನೆಲಕಚ್ಚಿದೆ. ಹರದನಹಳ್ಳಿ ಹೋಬಳಿಯಲ್ಲಿ 12, ಕಸಬಾ ಹೋಬಳಿಯಲ್ಲಿ 7.80 ಹೆಕ್ಟೇರ್ ಹಾಗೂ ಮಂಗಳವಾರ ಮುಂಜಾನೆ ಸುರಿದ ಮಳೆಯಿಂದ ಮಣಜನೂರು ಗ್ರಾಮದಲ್ಲಿ 4.11 ಎಕರೆ ಬಾಳೆ ಬೆಳೆ ನಾಶವಾಗಿದೆ. ಇದರಿಂದ 232 ರೈತರು ನಷ್ಟ ಅನುಭವಿಸಿದ್ದಾರೆ.

ಗುಂಡ್ಲುಪೇಟೆ ತಾಲೂಕು ವ್ಯಾಪ್ತಿಯಲ್ಲಿ ಅತಿ ಹೆಚ್ಚು ಬಾಳೆ ನಷ್ಟವಾಗಿದೆ. 344 ಹೆಕ್ಟೇರ್‌ನಲ್ಲಿ ಬೆಳೆದಿರುವ ಬಾಳೆ ಫಸಲು ನಾಶವಾಗಿದ್ದು, ಬಹುತೇಕ ಗಿಡಗಳು ಕಟಾವಿನ ಹಂತಕ್ಕೆ ಬಂದಿದ್ದವು. ಇಲ್ಲಿನ 587 ಬಾಳೆ ಬೆಳೆಗಾರರು ನಷ್ಟ ಅನುಭವಿಸಿದ್ದಾರೆ. ಹಂಗಳ ಹೋಬಳಿಯಲ್ಲಿ 134 ಹೆಕ್ಟೇರ್, ಗುಂಡ್ಲುಪೇಟೆ ಕಸಬಾ ಹೋಬಳಿಯಲ್ಲಿ 120 ಹೆಕ್ಟೇರ್, ತೆರಕಣಾಂಬಿ ಹೋಬಳಿಯಲ್ಲಿ 60 ಮತ್ತು ಬೇಗೂರು ವ್ಯಾಪ್ತಿಯಲ್ಲಿ 40 ಹೆಕ್ಟೇರ್ ಬೆಳೆ ಹಾನಿಯಾಗಿದೆ ಎಂದು ತೋಟಗಾರಿಕಾ ಇಲಾಖೆಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಹನೂರು ತಾಲೂಕಿನಲ್ಲಿ 49 ಹೆಕ್ಟೇರ್ ಬಾಳೆ ನಷ್ಟವಾಗಿದ್ದು, ಈ ಪೈಕಿ ರಾಮಾಪುರ ಹೋಬಳಿಯೊಂದರಲ್ಲೇ 30 ಹೆಕ್ಟೇರ್ ಬೆಳೆ ಹಾನಿಗೀಡಾಗಿದೆ. ಹನೂರು ಹೋಬಳಿಯಲ್ಲಿ 10.80, ಲೊಕ್ಕನಹಳ್ಳಿ ಹೋಬಳಿಯಲ್ಲಿ 6 ಹೆಕ್ಟೇರ್ ಹಾಗೂ ಮಂಗಳವಾರ ಮುಂಜಾನೆ ಸುರಿದ ಮಳೆಯಿಂದ ಸತ್ತೇಗಾಲ ಗ್ರಾಮದಲ್ಲಿ 2 ಎಕರೆ ಬಾಳೆ ನಷ್ಟವಾಗಿದೆ. ಇದರಿಂದ 53 ರೈತರಿಗೆ ನಷ್ಟವಾಗಿದೆ.

ವಾರದಲ್ಲಿ 2.10ಸೆಂ.ಮೀ ಮಳೆ: ಜಿಲ್ಲಾ ವ್ಯಾಪ್ತಿಯಲ್ಲಿ ಕಳೆದೊಂದು ವಾರದಿಂದ ಮಂಗಳವಾರದವರೆಗೆ 2.10 ಸೆಂ.ಮೀ ಮಳೆಯಾಗಿದ್ದು, ಮೇ ತಿಂಗಳ ಮೊದಲ ಮೂರು ದಿನಗಳಲ್ಲಿ 1.6 ಸೆಂ.ಮೀ ಮಳೆಯಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಮಳೆಯಿಂದ ಹಾನಿಯಾದ ಕೊಳ್ಳೇಗಾಲ ತಾಲೂಕಿನ ಸತ್ತೇಗಾಲಕ್ಕೆ ಹನೂರು ಶಾಸಕ ಎಂ.ಆರ್.ಮಂಜುನಾಥ್ ಭೇಟಿ ನೀಡಿ, ಪರಿಶೀಲಿಸಿದರು. ಅಲ್ಲದೇ ಜಿಲ್ಲೆಯ ವಿವಿಧೆಡೆ ಉಂಟಾಗಿರುವ ಬೆಳೆ ಹಾನಿ ಪ್ರದೇಶಗಳಿಗೆ ಸಂಬಂಧಪಟ್ಟ ಅಧಿಕಾರಿಗಳು ಭೇಟಿ ನೀಡಿ, ಪರಿಶೀಲಿಸಬೇಕು. ನಷ್ಟಕ್ಕೊಳಗಾಗಿರುವ ರೈತರಿಗೆ ಪರಿಹಾರ ಕಲ್ಪಿಸಬೇಕು ಎಂದು ರೈತರು ಒತ್ತಾಯಿಸಿದ್ದಾರೆ.

ಚಾ.ನಗರದಲ್ಲಿ ಗುಡುಗು ಸಹಿತ ಧಾರಾಕಾರ ಮಳೆ



ಚರಂಡಿಯ ನೀರು ರಸ್ತೆ ಮೇಲೆ ಹರಿದು ಅವಾಂತರ ಸೃಷ್ಟಿಸಿದ ಸ್ಥಳಕ್ಕೆ ನಗರಸಭೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಭೇಟಿ ನೀಡಿ, ಪರಿಶೀಲಿಸಿದರು.

ಚಾಮರಾಜನಗರ, ಮೇ 7-ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಸೋಮವಾರ ಮಧ್ಯರಾತ್ರಿ ಗುಡುಗು, ಸಿಡಿಲು, ಬಿರುಗಾಳಿ ಸಹಿತ ಧಾರಾಕಾರ ಮಳೆಯಾಗಿದ್ದು, ರಣ ಬಿಸಿಲಿನಿಂದ ಹೈರಾಣರಾಗಿದ್ದ ಜನತೆಗೆ ತಂಪೆರೆದಿದೆ.

ರಾತ್ರಿ 2.20ರ ಸುಮಾರಿಗೆ ಆರಂಭವಾದ ಮಳೆ ಮಂಗಳವಾರ ಬೆಳಗ್ಗೆ 6.30ರವರೆಗೆ ಸುರಿಯಿತು. ಚಾಮರಾಜನಗರ, ಕೊಳ್ಳೇಗಾಲ, ಹನೂರು, ಯಳಂದೂರು, ಗುಂಡ್ಲುಪೇಟೆ ತಾಲೂಕು ವ್ಯಾಪ್ತಿಯಲ್ಲಿ ಭರ್ಜರಿ ಮಳೆಯಾಗಿದೆ.

ಹನೂರು ಹಾಗೂ ಕೊಳ್ಳೇಗಾಲ ಭಾಗದಲ್ಲಿ ಸೋಮವಾರ ಸಂಜೆಯಿಂದಲೇ ಮಳೆ ಆರಂಭಗೊಂಡಿತು. ಹನೂರು ತಾಲೂಕಿನ ಮಾರಳ್ಳಿ ಗ್ರಾಮದಲ್ಲಿ ಸುರಿದ ಆಲಿಕಲ್ಲು ಮಳೆಗೆ ಮನೆಯ ಹೆಂಚುಗಳು ಹಾರಿ ಹೋಗಿವೆ. ಉಳಿದಂತೆ ಚಾಮರಾಜನಗರದಲ್ಲಿ ಮಧ್ಯರಾತ್ರಿ ಸುರಿದ ಮಳೆಯಿಂದಾಗಿ ಚರಂಡಿಯ ನೀರು ಪ್ರಮುಖ ರಸ್ತೆಗಳಲ್ಲೆಲ್ಲ ಹರಿದು ಅವಾಂತರ ಸೃಷ್ಟಿಸಿತು.

ನಗರದ ದೊಡ್ಡಂಗಡಿ ಬೀದಿಯ ಹಳೇ ಮಾರುಕಟ್ಟೆ ಮುಂಭಾಗ, ಸಂತೆಮರಹಳ್ಳಿ ವೃತ್ತ, ಜಿಲ್ಲಾಡಳಿತ ಭವನದ ಮುಂಭಾಗ, ಚಾಮರಾಜೇಶ್ವರ ಪಾರ್ಕ್ ಸೇರಿದಂತೆ ಹಲವು ಕಡೆಗಳಲ್ಲಿ ಚರಂಡಿಯ ನೀರು ಸರಾಗವಾಗಿ ಹರಿಯದೆ ತ್ಯಾಜ್ಯಗಳು ರಸ್ತೆ ತುಂಬೆಲ್ಲಾ ಹರಡಿಕೊಂಡಿದೆ.

ಮಂಗಳವಾರ ಬೆಳಗ್ಗೆ ನಗರಸಭೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ, ಚರಂಡಿ ಹಾಗೂ ರಸ್ತೆ ಮೇಲಿದ್ದ ತ್ಯಾಜ್ಯವನ್ನು ತೆರವುಗೊಳಿಸಿದರು. ಮಳೆಯಿಂದಾಗಿ ಗ್ರಾಮೀಣ ಭಾಗಗಳಲ್ಲೂ ರಸ್ತೆಗಳು ಕೆಸರು ಗದ್ದೆಯಂತಾಗಿದ್ದು, ಓಡಾಡಲು ಆಗದ ಸ್ಥಿತಿ ನಿರ್ಮಾಣವಾಗಿತ್ತು.

ಹಲವೆಡೆ ಸಮರ್ಪಕ ನೀರು, ಮೇವು ಪೂರೈಕೆ

● ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದಿಂದ ತುರ್ತು ಕ್ರಮ ● ಟ್ಯಾಂಕರ್ ಮೂಲಕ ನೀರು ಸರಬರಾಜು

ಚಾಮರಾಜನಗರ, ಮೇ 7-ಜಿಲ್ಲೆಯ ಜನ-ಜಾನುವಾರುಗಳಿಗೆ ಕುಡಿಯುವ ನೀರು ಮತ್ತು ಮೇವಿನ ಕೊರತೆಯಾಗದಂತೆ ಜಿಲ್ಲಾಡಳಿತ ಕ್ರಮ ವಹಿಸಿದ್ದು, ಬರ ನಿರ್ವಹಣೆ ಸಂಬಂಧಿಸಿದಂತೆ ಹಲವೆಡೆ ತುರ್ತಾಗಿ ನೀರು ಹಾಗೂ ಮೇವನ್ನು ಸಮರ್ಪಕವಾಗಿ ಪೂರೈಸಲಾಗುತ್ತಿದೆ.

ಗುಂಡ್ಲುಪೇಟೆ, ಹನೂರು ಮತ್ತು ಚಾಮರಾಜನಗರವನ್ನು ತೀವ್ರ ಬರಪೀಡಿತ ತಾಲೂಕು ಹಾಗೂ ಕೊಳ್ಳೇಗಾಲ, ಯಳಂದೂರನ್ನು ಸಾಧಾರಣ ಬರಪೀಡಿತ ತಾಲೂಕುಗಳೆಂದು ಸರ್ಕಾರ ಈಗಾಗಲೇ ಘೋಷಿಸಿದ್ದು, ತುರ್ತು ಕ್ರಮ ಕೈಗೊಳ್ಳುವ ಮೂಲಕ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಮುಂದಾಗಿದೆ. ಇದರಿಂದ ಸಾರ್ವಜನಿಕರ ದೂರುಗಳ ಸಂಖ್ಯೆ ಗಣನೀಯವಾಗಿ ಇಳಿಮುಖವಾಗಿದೆ.

ಜಿಲ್ಲೆಯಲ್ಲಿ ಬರ ನಿರ್ವಹಣೆಗಾಗಿ ಇದುವರೆಗೆ 16 ಬಾರಿ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆ ನಡೆಸಿ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳೊಂದಿಗೆ ಬರ ನಿರ್ವಹಣೆ ಕುರಿತು ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳಲು ನಿರ್ದೇಶನಗಳನ್ನು ನೀಡಲಾಗಿದೆ. ಈ ಸಂಬಂಧ ಪ್ರತಿ 15 ದಿನಗಳಿಗೊಮ್ಮೆ ಸಭೆ ನಡೆಸಿ ಜನ-ಜಾನುವಾರುಗಳಿಗೆ ಕುಡಿಯುವ ನೀರು ಹಾಗೂ ಮೇವು ಕೊರತೆ ಉಂಟಾಗದಂತೆ ತುರ್ತು ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಚಾಮರಾಜನಗರದಲ್ಲಿ 48, ಗುಂಡ್ಲುಪೇಟೆ 17, ಹನೂರು 15, ಕೊಳ್ಳೇಗಾಲ 20, ಯಳಂದೂರಿನಲ್ಲಿ 11 ಬೋರ್‌ವೆಲ್ ಕೊರೆಸಲಾಗಿದೆ. ಹಾಗೂ ತುರ್ತು ಸಂದರ್ಭದಲ್ಲಿ ನೀರಿನ ಕೊರತೆ ನಿವಾರಿಸಲು 69 ಖಾಸಗಿ ಬೋರ್‌ವೆಲ್‌ಗಳನ್ನು ಗುರುತಿಸಿ, ಬೋರ್‌ವೆಲ್‌ಗಳ ಮಾಲೀಕರಿಂದ ಒಪ್ಪಂದ ಪತ್ರ ಪಡೆಯಲಾಗಿದೆ. ಅವಶ್ಯವಿರುವ ಕಡೆ ಈಗಾಗಲೇ ಖಾಸಗಿ ಬೋರ್‌ವೆಲ್‌ಗಳ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. ಕುಡಿಯುವ ನೀರಿಗೆ ಸಂಬಂಧಪಟ್ಟಂತೆ ಚಾಮರಾಜನಗರ ನಗರಸಭೆಯ 10 ವಾರ್ಡ್‌ಗಳಿಗೆ ಒಟ್ಟು 86 ಟ್ಯಾಂಕರ್, ಗುಂಡ್ಲುಪೇಟೆ ಪುರಸಭೆಯ 10 ವಾರ್ಡ್‌ಗಳಿಗೆ 376 ಹಾಗೂ ಹನೂರು ಪಪಂನಲ್ಲಿ ಒಟ್ಟು 6 ವಾರ್ಡ್‌ಗಳಿಗೆ 9 ಟ್ಯಾಂಕರ್ ನೀರನ್ನು ಸರಬರಾಜು ಮಾಡಲಾಗಿದೆ. ಇನ್ನೂ ಹನೂರು ತಾಲೂಕಿನ ವಿವಿಧ ಗ್ರಾಮಗಳಿಗೆ 157 ಟ್ಯಾಂಕರ್ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗಿದೆ.

ಅತಿ ಹೆಚ್ಚಾಗಿ ಮಹದೇಶ್ವರಬೆಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೊಕ್ಕಬೊರೆ, ಇಂಡಿಗನತ್ತ, ಮಂದಾರೆ ಗ್ರಾಮಗಳಿಗೆ ನೀರು ಸರಬರಾಜು ಮಾಡಲಾಗಿದೆ. ಗುಂಡ್ಲುಪೇಟೆ ತಾಲೂಕಿನ ನೇನೇಕಟ್ಟೆ, ಪಂಜನಹಳ್ಳಿ ಗ್ರಾಮಗಳಿಗೆ ತುರ್ತು ಸಂದರ್ಭದಲ್ಲಿ ಕುಡಿಯುವ ನೀರನ್ನು ಟ್ಯಾಂಕರ್ ಮೂಲಕ ಸರಬರಾಜು ಮಾಡಲಾಗಿದೆ.

ಮೇವಿನ ಕಿಟ್ ವಿತರಣೆ: ಜಾನುವಾರುಗಳಿಗೆ ಕುಡಿಯುವ ನೀರು ಮತ್ತು ಮೇವುಗಳ ಸಂಬಂಧ ಜಿಲ್ಲಾಡಳಿತ ತುರ್ತು ಕ್ರಮ ಕೈಗೊಳ್ಳಲಾಗಿದ್ದು, ಈಗಾಗಲೇ ಜಿಲ್ಲೆಯಾದ್ಯಂತ 31,943 ಮೇವಿನ ಕಿಟ್‌ಗಳನ್ನು ಅರ್ಹ 14,045 ರೈತರಿಗೆ ವಿತರಿಸಲಾಗಿದೆ. ಜಿಲ್ಲೆಯಲ್ಲಿ ರಾಜ್ಯದಲ್ಲೇ ಹೆಚ್ಚು ಗೋಶಾಲೆಗಳನ್ನು ತೆರೆದು ಜಾನುವಾರುಗಳಿಗೆ ಮೇವು ಒದಗಿಸಲಾಗುತ್ತಿದೆ. ಹನೂರು ತಾಲೂಕಿನಲ್ಲಿ 17 ಗೋಶಾಲೆ ತೆರೆದು 9546 ಜಾನುವಾರುಗಳಿಗೆ ಮೇವು ಒದಗಿಸಿ ಆಶ್ರಯ ಕಲ್ಪಿಸಲಾಗಿದೆ. 1 ಕಡೆ ಮೇವು ನಿಧಿಯನ್ನು ತೆರೆಯಲಾಗಿದೆ. ಇನ್ನು ಅವಶ್ಯವಿರುವ ಕಡೆ ಮೇವಿನ ಬ್ಯಾಂಕ್‌ಗಳನ್ನು ಸ್ಥಾಪಿಸಿ, ಜಾನುವಾರುಗಳಿಗೆ ಮೇವು ಒದಗಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಗಿದೆ



ನೀರಿನ ಕೊರತೆ ಇರುವ ಚಾಮರಾಜನಗರ ಜಿಲ್ಲೆಯ ಗ್ರಾಮಗಳಿಗೆ ಟ್ಯಾಂಕರ್ ಮೂಲಕ ನೀರು ಪೂರೈಸುತ್ತಿರುವುದು.

> **6** ಜಿಲ್ಲಾ ವಿಪತ್ತು ನಿರ್ವಹಣಾ ಕೇಂದ್ರ ತೆರೆದಿರುವ ಸಹಾಯವಾಣಿ ಕೇಂದ್ರಕ್ಕೆ ಕುಡಿಯುವ ನೀರು ಮತ್ತು ಮೇವಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಬರುವ ದೂರುಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ನೀಡಿ, 24 ಗಂಟೆಯೊಳಗೆ ಸಮಸ್ಯೆ ಪರಿಹರಿಸಲಾಗುತ್ತಿದೆ. ಜಿಲ್ಲೆಯಲ್ಲಿ ನೀರು ಮತ್ತು ಮೇವಿನ ಕೊರತೆಯಿಂದ ಯಾವುದೇ ಜಾನುವಾರುಗಳು ಮೃತಪಟ್ಟಿಲ್ಲ.
> -ಶಿಲ್ಪನಾಗ್, ಅಧ್ಯಕ್ಷರು, ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ

ಹನೂರಿನಲ್ಲಿ ಮೇವು ಬ್ಯಾಂಕ್ ಸ್ಥಾಪನೆ



ಚಾಮರಾಜನಗರ ಜಿಲ್ಲೆಯಲ್ಲಿ ಉಂಟಾಗಿರುವ ಬರ ಪರಿಸ್ಥಿತಿಯನ್ನು ಸಮರ್ಪಕವಾಗಿ ನಿಭಾಯಿಸುವ ಸಲುವಾಗಿ ಜಿಲ್ಲಾಡಳಿತದಿಂದ ಹಲವು ಕ್ರಮ ಕೈಗೊಂಡಿದ್ದು, ಪ್ರಸ್ತುತ ಹನೂರು ಕೃಷಿ ಉತ್ಪನ್ನ ಮಾರುಕಟ್ಟೆ (ಎಪಿಎಂಸಿ) ಆವರಣದಲ್ಲಿ ಮೇವು ಬ್ಯಾಂಕ್ ತೆರೆಯಲಾಗಿದೆ.

ತೀವ್ರ ಬರದಿಂದ ಹನೂರು ತಾಲೂಕಿನ ಜಾನುವಾರುಗಳಿಗೆ ಉಂಟಾಗಿರುವ ಮೇವಿನ ಕೊರತೆಯನ್ನು ನೀಗಿಸಲು ಈಗಾಗಲೇ ತಾಲೂಕಿನಲ್ಲಿ 17 ಗೋಶಾಲೆಗಳನ್ನು ತೆರೆಯಲಾಗಿದ್ದು, ಈ ಗೋ ಶಾಲೆಗಳಿಗೆ 800 ಟನ್ ಮೇವು ವಿತರಿಸಲಾಗಿದೆ. 1 ಕೆಜಿ ಒಣ ಮೇವಿಗೆ 2 ರೂ. ನಂತೆ ಸಬ್ಸಿಡಿ ದರದಲ್ಲಿ ಪ್ರತಿ ದಿನ 50 ರೈತರಿಗೆ ಮೇವು ವಿತರಿಸಲಾಗುತ್ತಿದೆ.

ಒಂದು ಜಾನುವಾರಿಗೆ ದಿನಕ್ಕೆ 6 ಕೆಜಿಯಂತೆ ಒಂದು ವಾರಕ್ಕೆ ಲಭ್ಯವಾಗುವಷ್ಟು ಮೇವು ವಿತರಿಸಲಾಗುತ್ತಿದೆ. ಮೇವು ಬ್ಯಾಂಕಿನಲ್ಲಿ ಬೆಳಗ್ಗೆ 9.30 ರಿಂದ ಸಂಜೆ 5 ಗಂಟೆ ವರೆಗೆ ಮೇವು ನೀಡಲಾಗುವುದು. ಆಸಕ್ತ ರೈತರು ಸ್ಥಳೀಯ ಪಶು ಆಸ್ಪತ್ರೆಯಿಂದ ದೃಢೀಕರಣ ಪತ್ರವನ್ನು ಹಾಜರುಪಡಿಸಿ, ಮೇವು ಪಡೆಯುವಂತೆ ಹನೂರು ತಹಶೀಲ್ದಾರ್ ಗುರುಪ್ರಸಾದ್ ಹಾಗೂ ಮುಖ್ಯ ಪಶುವೈದ್ಯಾಧಿಕಾರಿ ಡಾ.ಸಿದ್ದರಾಜು ತಿಳಿಸಿದ್ದಾರೆ.

ಬೆಳೆ ಹಾನಿ ಪರಿಹಾರಕ್ಕೆ ಸಹಾಯವಾಣಿ ಕೇಂದ್ರ ಸ್ಥಾಪನೆ



ಚಾಮರಾಜನಗರ, ಮೇ 7-ಜಿಲ್ಲೆಯಲ್ಲಿ ಬೆಳೆ ಹಾನಿ ಪರಿಹಾರ ಪಾವತಿಸಲು ಸಹಾಯವಾಣಿ (ಹೆಲ್ಪ್‌ಡೆಸ್ಕ್) ಕೇಂದ್ರವನ್ನು ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ತೆರೆಯಲಾಗಿದೆ.

ಆಯಾ ತಾಲೂಕು ವ್ಯಾಪ್ತಿಗೆ ಒಳಪಡುವ ಅರ್ಹ ರೈತರಿಗೆ ಈಗಾಗಲೇ ಪಾವತಿಯಾಗಿರುವ ಬೆಳೆ ಹಾನಿ ಪರಿಹಾರದ ವಿವರ ಹಾಗೂ ಅರ್ಹತೆಗನುಗುಣವಾಗಿ ನಿಯಮಾನುಸಾರ ಪ್ರಸ್ತುತ ಪಾವತಿಯಾಗುತ್ತಿರುವ ಪರಿಹಾರ ಮೊತ್ತದ ಮಾಹಿತಿಯನ್ನು ನೀಡಲು ಉಪವಿಭಾಗಾಧಿಕಾರಿ, ತಹಶೀಲ್ದಾರ್ ಕಚೇರಿ ಹಾಗೂ ರೈತ ಸಂಪರ್ಕ ಕೇಂದ್ರಗಳಲ್ಲಿ ಸಹಾಯವಾಣಿ ಕೇಂದ್ರಗಳನ್ನು ತೆರೆಯಲಾಗಿದೆ. ಕೊಳ್ಳೇಗಾಲ ಉಪವಿಭಾಗಾಧಿಕಾರಿ ಕಚೇರಿಯಲ್ಲಿ ತೆರೆಯಲಾಗಿರುವ ಸಹಾಯವಾಣಿ ಕೇಂದ್ರ ದೂ.ಸಂ: 08224-252329, ಚಾಮರಾಜನಗರ ತಾಲೂಕಿನ ತಹಶೀಲ್ದಾರ್ ಕಚೇರಿಯ ದೂ.ಸಂ: 08226-200254, ಗುಂಡ್ಲುಪೇಟೆ ದೂ.ಸಂ: 08229-222225, ಯಳಂದೂರು ದೂ.ಸಂ: 08226-240029, ಕೊಳ್ಳೇಗಾಲ ದೂ.ಸಂ: 08224-252329 ಹಾಗೂ ಹನೂರು ತಾಲೂಕಿನ ದೂ.ಸಂ: 08224-268032 ಅನ್ನು ಸಾರ್ವಜನಿಕರು ಹಾಗೂ ರೈತರು ಸಂಪರ್ಕಿಸಬಹುದು ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರಾದ ಜಿಲ್ಲಾಧಿಕಾರಿ ಶಿಲ್ಪನಾಗ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಮಿತ್ರ

ಒಂದನೇ ಪುಟದಿಂದ

ತನಿಖೆಗೆ ಹೆಚ್‌ಡಿಕೆ ಆಗ್ರಹ

ಮಾಡುತ್ತಿದೆ. ಇವರಿಬ್ಬರ ಬಗ್ಗೆ ಲುಕ್ ಔಟ್ ನೋಟಿಸ್ ಹೊರಡಿಸಿದೆ.

ಆದರೆ, 25 ಸಾವಿರ ಪೆನ್‌ಡ್ರೈವ್ ಹಂಚಿಕೆ ಮಾಡಿರುವವರ ಬಗ್ಗೆ ಎಸ್‌ಐಟಿ ಲುಕ್‌ಔಟ್ ನೋಟಿಸ್ ಏಕೆ ಹೊರಡಿಸಿಲ್ಲ. ಪೆನ್‌ಡ್ರೈವ್ ಹಿಂದೆ ಯಾರ್‍ಯಾರಿದ್ದಾರೆ, ಇದರಲ್ಲಿ ಯಾರು ಪ್ರಮುಖ ಪಾತ್ರರು ಎಂಬ ಸತ್ಯಾಂಶ ದೇಶದ ಜನಕ್ಕೆ ತಿಳಿಯಬೇಕು.

ಅಶ್ಲೀಲ ವಿಡಿಯೋ ಚಿತ್ರೀಕರಿಸಿದ ಹಾಗೂ ಅದನ್ನು ಬಹಿರಂಗಗೊಳಿಸಿದವರನ್ನು ಪತ್ತೆ ಹಚ್ಚಬೇಕು, ಇದರಲ್ಲಿ ಇರುವ ಪ್ರಭಾವಿ ರಾಜಕಾರಣಿಗಳನ್ನು ಬೀದಿಗೆ ತರಬೇಕು. ಮುಖ್ಯಮಂತ್ರಿ ಅವರು ತಮ್ಮ ಎಕ್ಸ್ ಖಾತೆಯಲ್ಲಿ ಪ್ರಜ್ವಲ್ ರೇವಣ್ಣ ಅವರದು ಎನ್ನಲಾದ ಅಶ್ಲೀಲ ವಿಡಿಯೊ ಪ್ರಕರಣವನ್ನು ಎಸ್‌ಐಟಿಗೆ ವಹಿಸುವ್ರ ದಾಗಿ ತಿಳಿಸಿದ್ದರು. ಸಿದ್ದರಾಮಯ್ಯ ಅವರ ಈ ರೀತಿಯ ಪ್ರಕಟಣೆ ಹಿಂದೆಯೂ ದೊಡ್ಡ ಸಂಚಿದೆ ಎಂದು ಆರೋಪಿಸಿದ ಕುಮಾರಸ್ವಾಮಿ, ಹಾಸನದ ಪೆನ್‌ಡ್ರೈವ್ ಕುರಿತಂತೆ ನಡೆದಿದೆ ಎನ್ನಲಾದ ಸಂಭಾಷಣೆಯೊಂದನ್ನು ಪತ್ರಿಕಾಗೋಷ್ಠಿಯಲ್ಲಿ ಕೇಳಿಸಿದರು. ಅದರಲ್ಲಿ 700 ಪೆನ್‌ಡ್ರೈವ್‌ಗಳು ಅನಗೋಳದಲ್ಲಿ ಹಂಚಿಕೆ ಮಾಡಿರುವುದಾಗಿ ಸಂಭಾಷಣೆಯಲ್ಲಿ ಹೇಳಲಾಗಿದೆ. ಅಪಹರಣವಾಗಿದ್ದಾರೆ ಎನ್ನಲಾದ ಮಹಿಳೆ ಪತ್ತೆಯಾಗಿ ಎರಡು ದಿನವಾದರೂ ಇನ್ನೂ ನ್ಯಾಯಾಧೀಶರ ಮುಂದೆ ಹಾಜರುಪಡಿಸಿಲ್ಲ. ಪೆನ್‌ಡ್ರೈವ್ ಸೋರಿಕೆ ಮಾಡಿದವರಿಗೆ ಯಾವ ನೋಟಿಸ್ ಕೊಟ್ಟಿದ್ದೀರಿ ಎಂದು ಗೃಹ ಸಚಿವ ಡಾ. ಪರಮೇಶ್ವರ್ ಅವರನ್ನು ಪ್ರಶ್ನಿಸಿದರು.

ಈ ಪ್ರಕರಣ ಲೋಕಸಭಾ ಚುನಾವಣೆ ಮೇಲೆ ಯಾವುದೇ ಪ್ರಭಾವ ಬೀರುವುದಿಲ್ಲ. ಆದರೆ, ದುಷ್ಟ ರಾಜಕಾರಣಿಗಳನ್ನು ಮಟ್ಟ ಹಾಕಲು ಇಲ್ಲೇ ಉಳಿಯಬೇಕೆ ಇಲ್ಲವೇ ಲೋಕಸಭೆಗೆ ಹೋಗಬೇಕೇ ಎಂಬ ಪ್ರಶ್ನೆ ಕಾಡುತ್ತಿದೆ ಎಂದರು.

ಲೋಕಸಭಾ ಚುನಾವಣೆ ಫಲಿತಾಂಶದ ಹಿನ್ನೆಲೆಯಲ್ಲಿ ಮುಂದಿನ ರಾಜಕೀಯ ಭವಿಷ್ಯದ ಬಗ್ಗೆ ಕಾಂಗ್ರೆಸ್‌ನವರಿಗೆ ತಳಮಳ ಶುರುವಾಗಿದೆ ಎಂದು ವ್ಯಂಗ್ಯವಾಡಿದರು.

ಸಿದ್ದರಾಮಯ್ಯ, ಶಿವಕುಮಾರ್ ಇನ್ವೆಸ್ಟಿಗೇಷನ್ ಟೀಂ!!

ಬೀದಿಗೆ ತಂದಿದ್ದಾರೆ. ಹಗರಣದಲ್ಲಿ ಪ್ರಮುಖ ಆರೋಪಿ ಯಾಗಿರುವ ಪ್ರಜ್ವಲ್ ರೇವಣ್ಣ ಅವರನ್ನು ಸಮರ್ಥಿಸಿಕೊಳ್ಳುವ ಕೆಲಸ ನಾನಂತೂ ಮಾಡುವುದಿಲ್ಲ, ಕಾನೂನಿನಂತೆ ಏನು ಶಿಕ್ಷೆ ಆಗಬೇಕೋ ಆಗಲಿ. ಆದರೆ, ಈ ಸಿಡಿಗಳನ್ನು ಪೆನ್‌ಡ್ರೈವ್‌ಗಳ ಮೂಲಕ ಹಂಚಿ ಹೆಣ್ಣು ಮಕ್ಕಳ ಮಾನ ತೆಗೆದವರಿಗೆ ಸಿದ್ದರಾಮಯ್ಯ, ಶಿವಕುಮಾರ್ ತನಿಖಾ ಸಂಸ್ಥೆಯಿಂದ ನ್ಯಾಯ ಸಿಗುವುದಿಲ್ಲ. ಇವರಿಬ್ಬರೇ ಅಧಿಕಾರಿಗಳನ್ನು ಕರೆಸಿ, ಸಭೆ ನಡೆಸಿ, ಮುಂದಿನ ಕ್ರಮಗಳ ಬಗ್ಗೆ ಸಲಹೆ, ಸೂಚನೆಗಳನ್ನು ನೀಡಿರುವುದರಿಂದ ನ್ಯಾಯಯುತ ತನಿಖೆ ಸಾಧ್ಯವಿಲ್ಲ ಎಂದಿದ್ದಾರೆ.

ಜೆಡಿಎಸ್ ಮುಗಿಸಲು ಡಿಕೆಶಿ ಷಡ್ಯಂತರ

ಇನ್ನು ಏಕೆ ತನಿಖೆ ನಡೆಸಿಲ್ಲ ಎಂದು ಪ್ರಶ್ನಿಸಿದರು. ಪೆನ್‌ಡ್ರೈವ್ ಬಿಡುಗಡೆ ಪ್ರಕರಣದಲ್ಲಿ ಮಾಜಿ ಸಂಸದ ಶಿವರಾಮೇಗೌಡ ಮೂಲಕ ಡಿ.ಕೆ.ಶಿವಕುಮಾರ್ ನನ್ನೊಡನೆ ಮಾತನಾಡಿದ್ದಾರೆ ಎಂದು ಈಗಾಗಲೇ ವಕೀಲ ಹಾಗೂ ಬಿಜೆಪಿ ಮುಖಂಡ ದೇವರಾಜೇಗೌಡ ಹೇಳಿದ್ದಾರೆ. ಈ ಸಂಬಂಧ ಆಡಿಯೋ ಕೂಡ ಬಿಡುಗಡೆ ಮಾಡಿದ್ದಾರೆ. ತನಿಖೆ ಮಾಡಿದರೆ ಇದರ ಬಗ್ಗೆ ಮತ್ತಷ್ಟು ಮಾಹಿತಿ ನೀಡುತ್ತೇನೆ ಎಂದು ಕೂಡ ತಿಳಿಸಿದ್ದಾರೆ. ಆದರೆ ಈ ತನಕ ಈ ವಿಚಾರದ ಬಗ್ಗೆ ಇನ್ನು ತನಿಖೆ ಏಕೆ ಮಾಡಿಲ್ಲ ಎಂದು ಪ್ರಶ್ನಿಸಿದರು.

ಒಟ್ಟಾರೆ ಡಿ.ಕೆ.ಶಿವಕುಮಾರ್ ಪೆನ್‌ಡ್ರೈವ್ ಸೃಷ್ಟಿಕರ್ತ. ಇದನ್ನು ಸಾಬೀತು ಪಡಿಸುವ ಬಹಳಷ್ಟು ಸಾಕ್ಷ್ಯಾಧಾರಗಳಿವೆ. ಈ ಹಿನ್ನೆಲೆಯಲ್ಲಿ ಡಿ.ಕೆ.ಶಿವಕುಮಾರ್ ಉಪ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಇಲ್ಲವೆ ಅವರನ್ನು ವಜಾ ಮಾಡಬೇಕು ಎಂದು ಒತ್ತಾಯಿಸಿದರು.

ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಅನ್ನು ಅವರ ಮಾಜಿ ಕಾರ್ ಡ್ರೈವರ್ ಕಾರ್ತಿಕ್, ದೇವರಾಜೇಗೌಡನಿಗೆ ನೀಡಿದ್ದಾನೆ. ತರುವಾಯ ಡಿ.ಕೆ.ಶಿವಕುಮಾರ್ ಆದೇಶದಂತೆ ಕಾರ್ತಿಕ್ ವಿದೇಶಕ್ಕೆ ಹಾರಿದ್ದಾನೆ. ಈ ಬಗ್ಗೆ ಕೂಡ ಕೂಲಂಕುಶ ತನಿಖೆ ನಡೆಯಬೇಕು ಎಂದು ಒತ್ತಾಯಿಸಿದರು. ಎಸ್‌ಐಟಿಯಿಂದ ನಿಷ್ಪಕ್ಷಪಾತ ತನಿಖೆ ನಡೆಯುತ್ತಿಲ್ಲ. ಆದ ಕಾರಣ ಹಾಲಿ ನ್ಯಾಯಾಧೀಶರಿಂದ ನ್ಯಾಯಾಂಗ ತನಿಖೆ ನಡೆಸಬೇಕು ಎಂದು ಆಗ್ರಹಿಸಿದ ಜಿ.ಟಿ.ದೇವೇಗೌಡರು, ಸಿಬಿಐ ಕೇಂದ್ರ ಸರ್ಕಾರದ ಅಧೀನದಲ್ಲಿದೆ ಎಂಬುದು ಇವರ ಆರೋಪವಾದರೆ ನ್ಯಾಯಾಂಗ ತನಿಖೆ ನಡೆಸಲು ಇರುವ ಅಡ್ಡಿಯಾದರೂ ಏನು ಎಂದು ಸರ್ಕಾರಕ್ಕೆ ಪ್ರಶ್ನೆಗಳ ಸುರಿಮಳೆಗೈಯ್ದರು. ಪ್ರಜ್ವಲ್ ರೇವಣ್ಣ ಪ್ರಕರಣದ ಬಗ್ಗೆ ಹೆಚ್.ಡಿ.ದೇವೇಗೌಡರಿಗಾಗಲೀ ಅಥವಾ ಹೆಚ್.ಡಿ.ಕುಮಾರಸ್ವಾಮಿಗಾಗಲೀ ಯಾವುದೇ ಮಾಹಿತಿ ಇಲ್ಲ. ಈ ವಿಚಾರ ಎಂದೂ ಅವರ ಗಮನಕ್ಕೆ ಬಂದಿಲ್ಲ. ಹೀಗಿರುವಾಗ ಈ ಪ್ರಕರಣದಲ್ಲಿ ನರೇಂದ್ರ ಮೋದಿ, ಹೆಚ್.ಡಿ.ದೇವೇಗೌಡರು ಹಾಗೂ ಹೆಚ್.ಡಿ.ಕುಮಾರಸ್ವಾಮಿ ಹೆಸರು ತರುವುದೇಕೆ. ಇವರಿಗೂ, ಪ್ರಕರಣಕ್ಕೂ ಏನು ಸಂಬಂಧ ಎಂದು ಪ್ರಶ್ನಿಸಿದರು.

ಪ್ರಜ್ವಲ್ ರೇವಣ್ಣ ಪ್ರಕರಣದ ಬಗ್ಗೆ ಸೂಕ್ತ ತನಿಖೆ ನಡೆಸುವಂತೆ ಈಗಾಗಲೇ ಕುಮಾರಸ್ವಾಮಿ ಹೇಳಿದ್ದಾರೆ. ಕೋರ್ ಕಮಿಟಿ ಅಧ್ಯಕ್ಷನಾದ ನಾನು ಕೂಡ ಈ ಬಗ್ಗೆ ಸ್ಪಷ್ಟಪಡಿಸಿದ್ದೇನೆ. ಆರೋಪಿ ಸ್ಥಾನದಲ್ಲಿರುವ ಪ್ರಜ್ವಲ್ ರೇವಣ್ಣನನ್ನು ಪಕ್ಷದಿಂದ ಅಮಾನತು ಕೂಡ ಮಾಡಿದ್ದೇವೆ. ಈ ಪ್ರಕರಣದ ಬಗ್ಗೆ ನಾವು ಪಾರದರ್ಶಕವಾಗಿದ್ದೇವೆ. ಹೀಗಿರುವಾಗ ಹಾಲಿ ನ್ಯಾಯಾಧೀಶರಿಂದ ನ್ಯಾಯಾಂಗ ತನಿಖೆ ನಡೆಸಲು ಸರ್ಕಾರ ಮೀನಾಮೇಷ ಎಣಿಸುತ್ತಿರುವುದೇಕೆ ಎಂದು ಜಿ.ಟಿ.ದೇವೇಗೌಡರು ಪ್ರಶ್ನಿಸಿದರು.

ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಮಾಜಿ ಶಾಸಕರಾದ ಸಾ.ರಾ.ಮಹೇಶ್, ಅಶ್ವಿನ್‌ಕುಮಾರ್, ಕೆ.ಮಹದೇವ್, ಟಿ.ಬಿ.ಚಿಕ್ಕಣ್ಣ, ಮಾಜಿ ಮೇಯರ್ ಆರ್.ಲಿಂಗಪ್ಪ, ಜೆಡಿಎಸ್ ಜಿಲ್ಲಾಧ್ಯಕ್ಷ ನರಸಿಂಹಸ್ವಾಮಿ, ಜೆಡಿಎಸ್ ಮುಖಂಡ ವಿವೇಕಾನಂದ ಸೇರಿದಂತೆ ಇತರರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ತೋಟದ ಮನೆಯಲ್ಲಿ ಸಂತ್ರಸ್ತೆ ರಕ್ಷಣೆ ಸಾಬೀತು ಮಾಡಿದ್ರೆ ರಾಜಕೀಯ ಬಿಡ್ತೇನೆ...!

ಮೈಸೂರು, ಮೇ 7(ಬಿಎಲ್‌ಯು)– ಸಂಸದ ಪ್ರಜ್ವಲ್ ರೇವಣ್ಣ ಪ್ರಕರಣದಲ್ಲಿ ಮೈಸೂರು ತಾಲೂಕು ಹುಣಸೂರಿನ ತೋಟದ ಮನೆಯಲ್ಲಿ ಸಂತ್ರಸ್ತೆಯನ್ನು ವಿಶೇಷ ತನಿಖಾ ತಂಡ (ಎಸ್‌ಐಟಿ) ರಕ್ಷಣೆ ಮಾಡಿದೆ ಎಂಬುವುದು ಶುದ್ಧ ಸುಳ್ಳು ಎಂದು ಮಾಜಿ ಶಾಸಕ ಸಾ.ರಾ.ಮಹೇಶ್ ಆರೋಪಿಸಿದ್ದಾರೆ.



ಹುಣಸೂರಿನ ಕರೀಗೌಡ ರಸ್ತೆಯಲ್ಲಿರುವ ತನ್ನ ಸಂಬಂಧಿಕರ ಮನೆಯಲ್ಲಿ ಸಂತ್ರಸ್ತೆ ಇದ್ದರು. ಎಸ್‌ಐಟಿಯವರು ಆಕೆಯನ್ನು ಅಲ್ಲಿಂದ ಕರೆದುಕೊಂಡು ಹೋಗಿದ್ದಾರೆ. ಹುಣಸೂರಿನ ತೋಟದ ಮನೆಯೊಂದರಲ್ಲಿ ರಕ್ಷಣೆ ಮಾಡಲಾಗಿದೆ ಎಂಬುದು ಕಟ್ಟು ಕಥೆ ಅಷ್ಟೇ ಎಂದರು.

ತೋಟದ ಮನೆಯಲ್ಲಿ ಸಂತ್ರಸ್ತೆಯನ್ನು ರಕ್ಷಣೆ ಮಾಡಲಾಗಿದೆ ಎಂಬುವುದನ್ನು ಸಾಬೀತು ಮಾಡಿದರೆ ರಾಜಕೀಯದಿಂದ ನಿವೃತ್ತಿ ಹೊಂದುತ್ತೇನೆ. ಅಷ್ಟೆ ಅಲ್ಲದೆ ಜೆಡಿಎಸ್ ಪ್ರಾಥಮಿಕ ಸದಸ್ಯತ್ವಕ್ಕೂ ರಾಜೀನಾಮೆ ನೀಡುತ್ತೇನೆ ಎಂದು ಸಾ.ರಾ.ಮಹೇಶ್ ಸವಾಲು ಹಾಕಿದರು. ಸಂತ್ರಸ್ತೆಯನ್ನು ಎಸ್‌ಐಟಿ ತಂಡ ಎಲ್ಲಿ ರಕ್ಷಣೆ ಮಾಡಿತು ಎಂಬ ವಿಡಿಯೋ ಕ್ಲಿಪ್ ಅನ್ನು ಬಿಡುಗಡೆ ಮಾಡಲಿ, ಕರೀಗೌಡ ರಸ್ತೆಯ ಸಂತ್ರಸ್ತೆ ಸಂಬಂಧಿಕರ ಮನೆ ಬಳಿಯ ಮೊಬೈಲ್ ಫೋನ್ ಬಳಕೆಯ ಟವರ್ ಲೋಕೇಷನ್ ವಿವರ ಬಹಿರಂಗಪಡಿಸಲಿ ಎಂದು ಆಗ್ರಹಿಸಿದರು.

ಕಾನೂನಿನ ಪ್ರಕಾರ ಸಂತ್ರಸ್ತೆಯನ್ನು ರಕ್ಷಣೆ ಮಾಡಿದ ನಂತರ ಮೊದಲು ನ್ಯಾಯಾಧೀಶರ ಮುಂದೆ ಹಾಜರುಪಡಿಸಬೇಕು. ಅಲ್ಲಿ ಸಂತ್ರಸ್ತೆ ನಿಯಮ 164ರಡಿ ಹೇಳಿಕೆ ನೀಡುವ ಪ್ರಕ್ರಿಯೆ ನಡೆಯಬೇಕು. ಆದರೆ ಈ ಯಾವುದೇ ನಿಯಮವನ್ನು ಎಸ್‌ಐಟಿ ಪಾಲಿಸಿಲ್ಲ. ಎಸ್‌ಐಟಿ ತಂಡದ ತನಿಖೆ ನಿಷ್ಪಕ್ಷಪಾತವಾಗಿಲ್ಲ ಎಂಬುದಕ್ಕೆ ಇದೇ ಸ್ಪಷ್ಟ ನಿದರ್ಶನ ಎಂದು ದೂರಿದರು.

ಲೋಕಸಭಾ ಚುನಾವಣೆಗೆ ಕೇವಲ ಎರಡು ದಿನ ಇರುವಾಗ ಲಕ್ಷಾಂತರ ಪೆನ್‌ಡ್ರೈವ್ ಹಂಚಿಕೆ ಮಾಡಿದವರು ಯಾರು, ಮೊಬೈಲ್ ಗಳಲ್ಲಿ ವಿಡಿಯೋ ವೈರಲ್ ಮಾಡಿದವರು ಯಾರು ಎಂಬುದನ್ನು ಎಸ್‌ಐಟಿ ಈ ತನಕ ತನಿಖೆ ನಡೆಸಿಲ್ಲ. ಎಸ್‌ಐಟಿ ತಂಡ ಕಾಂಗ್ರೆಸ್ ಸರ್ಕಾರದ ಕೈಗೊಂಬೆಯಾಗಿ ಕೆಲಸ ಮಾಡುತ್ತಿದೆ. ಕೆಲವು ಅಧಿಕಾರಿಗಳು ಆಯಕಟ್ಟಿನ ಸ್ಥಳಕ್ಕೆ ನಿಯೋಜನೆಗೊಳ್ಳಲು ಸರ್ಕಾರದ ಸೂಚನೆಯಂತೆ ಕೆಲಸ ನಿರ್ವಹಿಸುತ್ತಿದ್ದಾರೆ. ಎಸ್‌ಐಟಿ ತಂಡ ಮುಂದಿಟ್ಟುಕೊಂಡು ಸರ್ಕಾರ ಹೆದರಿಸುವ ಕೆಲಸ ಮಾಡುತ್ತಿದೆ ಎಂದು ಸಾ.ರಾ.ಮಹೇಶ್ ಆರೋಪಿಸಿದರು.

ಹಳೇ ಮೈಸೂರು ಭಾಗದಲ್ಲಿ ಜೆಡಿಎಸ್ ಹತ್ತಿಕ್ಕಲು ಕಾಂಗ್ರೆಸ್ ರೂಪಿಸಿರುವ ಷಡ್ಯಂತರ ಇದಾಗಿದೆ. ಕರ್ನಾಟಕದಲ್ಲಿ ಪ್ರಾದೇಶಿಕ ಪಕ್ಷ ಇರಬಾರದು ಎಂಬ ಉದ್ದೇಶದಿಂದ ಇಂತಹ ಕುತಂತ್ರ ರೂಪಿಸಲಾಗಿದೆ ಎಂದರು.

ಕೆ.ಆರ್.ನಗರ ಶಾಸಕರ ಕುಮ್ಮಕ್ಕಿನಿಂದ ಹೆಚ್.ಡಿ.ರೇವಣ್ಣ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂಬ ಆರೋಪದ ಬಗ್ಗೆ ಪ್ರತಿಕ್ರಿಯೆ ನೀಡಿದ ಸಾ.ರಾ.ಮಹೇಶ್, ಈ ಹಿಂದೆ ಭವಾನಿ ರೇವಣ್ಣ ನನ್ನ ಚುನಾವಣೆಯಲ್ಲೇ ಇವತ್ತಿನ ಶಾಸಕರಿಗೆ ಏನು ಸಹಾಯ ಮಾಡಿದ್ದರು ಎಂಬುದು ಗೊತ್ತಿದೆ. ಈ ಶಾಸಕರೇ ತಮ್ಮ ಮೇಲಿನ ಆರೋಪಕ್ಕೆ ಉತ್ತರ ನೀಡಲಿ ಎಂದು ಸಾ.ರಾ. ಮಹೇಶ್ ಸಲಹೆ ನೀಡಿದರು.

ಶ್ರೀನಿವಾಸ ಪ್ರಸಾದರಿಗೆ ಮೈಸೂರು ವಿವಿಯಿಂದ ಮರಣೋತ್ತರ ಗೌರವ ಡಾಕ್ಟರೇಟ್ ನೀಡಬೇಕು

- ಶ್ರದ್ಧಾಂಜಲಿ ಸಭೆಯಲ್ಲಿ ಅಭಿಮಾನಿಗಳ ಒಕ್ಕೊರಲ ಒತ್ತಾಯ
- ಮೈಸೂರು ವಿವಿ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು



ಮೈಸೂರು ವಿವಿ ಸಂಜೆ ಕಾಲೇಜು ಮುಂಭಾಗ ಮೈಸೂರು ವಿವಿ ನೌಕರರ ವೇದಿಕೆ ಹಾಗೂ ಮೈಸೂರು ವಿವಿ ಹಿರಿಯ ವಿದ್ಯಾರ್ಥಿಗಳ ವೇದಿಕೆ ಸಹಯೋಗದೊಂದಿಗೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಂಸದ ವಿ.ಶ್ರೀನಿವಾಸ ಪ್ರಸಾದ್‌ರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮೈಸೂರು, ಮೇ 7(ಎಸ್‌ಪಿಎನ್)– ಮೈಸೂರು ವಿಶ್ವವಿದ್ಯಾಲಯದ ಬೆಳವಣಿಗೆಯಲ್ಲಿ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರ ಪಾತ್ರ ದೊಡ್ಡದು. ಹಾಗಾಗಿ ಅವರಿಗೆ ವಿವಿ ವತಿಯಿಂದ ಮರಣೋತ್ತರ ಗೌರವ ಡಾಕ್ಟರೇಟ್ ನೀಡಬೇಕು ಎಂದು ವಿಶ್ವಮಾನವ ಮೈಸೂರು ವಿವಿ ನೌಕರರ ವೇದಿಕೆ ಹಾಗೂ ಮೈಸೂರು ವಿವಿ ಹಿರಿಯ ವಿದ್ಯಾರ್ಥಿಗಳ ವೇದಿಕೆ ಒತ್ತಾಯಿಸಿದೆ.

ಮೈಸೂರು ವಿವಿ ಸಂಜೆ ಕಾಲೇಜು ಮುಂಭಾಗ ಮೈಸೂರು ವಿವಿ ನೌಕರರ ವೇದಿಕೆ ಹಾಗೂ ಮೈಸೂರು ವಿವಿ ಹಿರಿಯ ವಿದ್ಯಾರ್ಥಿಗಳ ವೇದಿಕೆ ಸಹಯೋಗದೊಂದಿಗೆ ಆಯೋಜಿಸಿದ್ದ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್ ಮಾತನಾಡಿ, ಸಂಸದ ವಿ.ಶ್ರೀನಿವಾಸ ಪ್ರಸಾದರು ತಮ್ಮ ರಾಜಕೀಯ ಆರಂಭದ ದಿನದಿಂದಲೂ ಮೈಸೂರು ವಿವಿಯ ಬೆಳವಣಿಗೆಗೆ ಶ್ರಮಿಸಿದ್ದರು. ಅದರಲ್ಲೂ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳ ಸಮಸ್ಯೆಗಳಿಗೆ ತ್ವರಿತಗತಿಯಲ್ಲಿ ಸ್ಪಂದಿಸುತ್ತಿದ್ದರು. ಇಂತಹ ಮೇರು ವ್ಯಕ್ತಿತ್ವದ ಶ್ರೀನಿವಾಸ ಪ್ರಸಾದರಿಗೆ ಮೈಸೂರು ವಿವಿ ಮರಣೋತ್ತರ ಗೌರವ ಡಾಕ್ಟರೇಟ್ ನೀಡಿ ಗೌರವಿಸಬೇಕು ಎಂದು ಒತ್ತಾಯಿಸಿದರು.

ಮೈಸೂರು ವಿವಿ ನಿವೃತ್ತ ಪ್ರಾಧ್ಯಾಪಕ ಡಾ.ಎಸ್.ಶಿವರಾಜಪ್ಪ ಮಾತನಾಡಿ, ಸಂಸದ ವಿ.ಶ್ರೀನಿವಾಸ ಪ್ರಸಾದ್, ಸ್ವಾಭಿಮಾನಿ ವ್ಯಕ್ತಿತ್ವದ ಜೊತೆಗೆ ಗಜಗಾಂಭೀರ್ಯ ಉಳ್ಳವರಾಗಿದ್ದು, ನೇರ ನಡೆ–ನುಡಿಗೆ ಹೆಸರುವಾಸಿಯಾಗಿದ್ದವರು. ಶಾಸಕರಾಗಿ, ಸಂಸದರಾಗಿ ಅನೇಕ ಸರ್ಕಾರದಲ್ಲಿ ವಿವಿಧ ಹುದ್ದೆಗಳನ್ನು ಅಲಂಕರಿಸಿ, ಅಂಬೇಡ್ಕರ್ ಅವರ ಸಮ–ಸಮಾಜ ನಿರ್ಮಾಣಕ್ಕೆ ಹತ್ತಿರವಾಗಿ ಕೆಲಸ ಮಾಡಿದವರು. ಅಲ್ಲದೆ, ದಲಿತ ನಾಯಕರಾದರೂ ಜಾತ್ಯಾತೀತ ನಾಯಕರಾಗಿ ರಾಜಕೀಯದಲ್ಲಿ ಗುರುತಿಸಿಕೊಂಡಿದ್ದರು. ಸ್ವಾಭಿಮಾನಕ್ಕೆ ಧಕ್ಕೆಯಾದಾಗ ಯಾವುದೇ ರಾಜಿಯಾಗದೆ, ತಾವು ನಂಬಿದ್ದ ಸಿದ್ಧಾಂತಕ್ಕೆ ನಿಷ್ಠರಾಗಿದ್ದರು ಎಂದು ನುಡಿನಮನ ಸಲ್ಲಿಸಿದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಅವರು, ಬೂಸ ಮತ್ತು ದಲಿತ ಚಳವಳಿಗಳಲ್ಲಿ ಪಾಲ್ಗೊಂಡು ನೊಂದವರಿಗೆ ನ್ಯಾಯ ಕೊಡಿಸುವಲ್ಲಿ ಸಾಕಷ್ಟು ಶ್ರಮಿಸಿದ್ದರು. ಕೇಂದ್ರ ಮತ್ತು ರಾಜ್ಯ ಸಚಿವರಾಗಿ ಬಡವರ ಪರ ಅನೇಕ ಯೋಜನೆಗಳನ್ನು ಜಾರಿಗೆ ತಂದಿದ್ದರು ಎಂದರು.

ಈ ವೇಳೆ ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ, ವಿವಿ ಸಂಜೆ ಕಾಲೇಜು ಅಧ್ಯಾಪಕಿ ಡಾ.ಬಿ.ಎಸ್. ದಿನಮಣಿ, ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಮಹದೇಶ್, ಮೈಸೂರು ವಿವಿ ಮಾಜಿ ಸಿಂಡಿಕೇಟ್ ಸದಸ್ಯ ಈ.ಸಿ. ನಿಂಗರಾಜಗೌಡ ಡಾ.ಕೆ.ಸಿದ್ದರಾಜು, ಪ್ರೊ.ಚಂದ್ರಶೇಖರ್, ಗಿರಿಧರ್, ಕಲಾವಿದ ಮಹೇಶ್, ಹೇಮಂತ್ ಕುಮಾರ್, ಜಗದೀಶ್, ಶಶಿಕಾಂತ್, ಡಾ.ದಿವಾಕರ್ ಭಾಂಡಿ, ಡಾ.ಗಿರೀಶ್ ಚಂದ್ರ, ಪ್ರೊ.ರಮೇಶ್ ಬಾಬು, ಭಾಸ್ಕರ್, ವಿನೋದ್, ಯೋಗೇಶ್, ಡಾ.ರಮೇಶ್‌ಬಾಬು, ವಿವೇಕ್, ಗಣೇಶ್ ಉಪಸ್ಥಿತರಿದ್ದರು.

ಹುಬ್ಬಳ್ಳಿಯಲ್ಲಿ ಒಂದೇ ಕುಟುಂಬದ 96 ಜನರಿಂದ ಮತದಾನ

ಪ್ರಜಾಪ್ರಭುತ್ವ ಹಬ್ಬವನ್ನು ಸಂಭ್ರಮಿಸಿದ ಅವಿಭಕ್ತ ಕುಟುಂಬ



ಹುಬ್ಬಳ್ಳಿ: ಪ್ರಜಾಪ್ರಭುತ್ವದ ಹಬ್ಬ ಅಂದರೆ ಮತದಾನ. ಇಂತಹ ಮತದಾನ ಜಾತ್ರೆಯಲ್ಲಿ ಒಂದೇ ಕುಟುಂಬದ 96 ಸದಸ್ಯರು ಮತದಾನ ಮಾಡುವ ಮೂಲಕ ಗಮನ ಸೆಳೆದಿದ್ದಾರೆ.

ಹುಬ್ಬಳ್ಳಿ ತಾಲೂಕಿನ ನೂಲ್ವಿ ಗ್ರಾಮದಲ್ಲಿ ಒಂದೇ ಕುಟುಂಬದ ಈ 96 ಜನ ಮತದಾರರು ತಮ್ಮ ಹಕ್ಕು ಚಲಾಯಿಸಿ ಇತರರಿಗೆ ಮಾದರಿಯಾಗಿದ್ದಾರೆ. ತಾಲೂಕಿನ ನೂಲ್ವಿ ಗ್ರಾಮದ ಕಂಟೆಪ್ಪ ತೋಟದ ಅವಿಭಕ್ತ ಕುಟುಂಬದ ಸದಸ್ಯರು ಇಲ್ಲಿನ ಸರ್ಕಾರಿ ಕನ್ನಡ ಹೆಣ್ಣು ಮಕ್ಕಳ ಶಾಲೆಯ ಮತಗಟ್ಟೆ ಸಂಖ್ಯೆ 56 ಮತ್ತ 57ರಲ್ಲಿ ಮತದಾನ ಮಾಡಿದರು. ಮತ ಚಲಾಯಿಸಿದ ಬಳಿಕ ಎಲ್ಲರೂ ಸೇರಿ ಸೆಲ್ಫಿ ಪಡೆದು ಸಂಭ್ರಮಿಸಿದರು. ಮೂರು ತಲೆಮಾರಿನ ಕುಟುಂಬದ ಸದಸ್ಯರು ಮತದಾನದಲ್ಲಿ ಭಾಗಿಯಾಗಿದ್ದು, ಪ್ರತಿ ಚುನಾವಣೆಯಲ್ಲಿ ಮೂರು ತಂಡವಾಗಿ ವಾಹನಗಳ ಮೂಲಕ ಬಂದು ಮತ ಚಲಾವಣೆ ಮಾಡುತ್ತಿದ್ದರು. ಆದರೆ ಈ ಚುನಾವಣೆಯಲ್ಲಿ ಏಕಕಾಲದಲ್ಲಿ ಬಂದು ಮತದಾನ ಮಾಡಿದರು. ಇನ್ನು ಇವರೆಲ್ಲರೂ ಒಂದೇ ಕುಟುಂಬದಲ್ಲಿ ವಾಸಿಸುತ್ತಿದ್ದು, ಕೆಲಸದ ನಿಮಿತ್ತ ಬೇರೆ ಬೇರೆ ಕಡೆ ಹೋಗುತ್ತಾರೆ. ಆದರೆ ಯಾವುದೇ ಚುನಾವಣೆ ನಡೆದರೂ ಸಹ ಎಲ್ಲರೂ ಒಟ್ಟಿಗೆ ಸೇರಿ ತಮ್ಮ ಹಕ್ಕನ್ನು ಚಲಾಯಿಸುತ್ತಾರೆ ಈ ಕುಟುಂಬಸ್ಥರು.

ಮೈಸೂರಲ್ಲಿ ತಾರಕಕ್ಕೇರಿದ ತಾಪಮಾನ

ಮೇ 12ರಂದು ಎಂಜಿಪಿಯಲ್ಲಿ ಪರಿಸರ ತಜ್ಞರ ಸಭೆ

ಮೈಸೂರು, ಮೇ 7(ಎಸ್‌ಪಿಎನ್)– ಮೈಸೂರಿನಲ್ಲಿ ದಿನೇ ದಿನೆ ತಾಪಮಾನ ಹೆಚ್ಚಾಗುತ್ತಿದ್ದು, ಪ್ರತಿ ದಿನ ಶೇ.40 ಡಿಗ್ರಿ ಸೆಲ್ಸಿಯಸ್ ದಾಖಲಾಗುತ್ತಿದೆ.

ಹಾಗಾಗಿ ಈ ಕುರಿತು ಚರ್ಚಿಸಲು ಮೆ 12ರಂದು ಭಾನುವಾರ ಸಂಜೆ 4 ಗಂಟೆಗೆ ಮೈಸೂರು ಯಾದವಗಿರಿಯ ವಿವೇಕಾನಂದ ರಸ್ತೆಯಲ್ಲಿರುವ ಮೈಸೂರು ಗ್ರಾಹಕ ಪರಿಷತ್ ಕಚೇರಿಯಲ್ಲಿ ಪರಿಸರ ತಜ್ಞರ ಸಾಮಾನ್ಯ ಸಭೆ ಕರೆಯಲಾಗಿದೆ ಎಂದು ಮೈಗ್ರಾಪ ಕಚೇರಿ ಮಂಗಳವಾರ ಪ್ರಕಟಣೆ ನೀಡಿದೆ.

ಮಂಗಳೂರಿನ ನಿಟ್ಟೆ ವಿಶ್ವವಿದ್ಯಾನಿಲಯವು ಮಂಗಳೂರಿನಲ್ಲಿ ಹಸಿರೀಕರಣ ಕಡಿಮೆಯಾಗುತ್ತಿರುವುದರಿಂದ ತಾಪಮಾನದಲ್ಲಿ ಏರಿಕೆಯಾಗುತ್ತಿದ್ದು, ಇದು ಅಪಾಯದ ಮುನ್ಸೂಚನೆ ಎಂದು ವರದಿ ನೀಡಿದೆ. ಹಾಗಾಗಿ ಕೆಲವು ದಿನಗಳಿಂದ ಮೈಸೂರಿನಲ್ಲೂ ತಾಪಮಾನ ಹೆಚ್ಚಳವಾಗುತ್ತಿದೆ. ಈ ಕುರಿತು ಚರ್ಚಿಸಲು ಪರಿಸರ ತಜ್ಞ ಡಾ.ಶಂಕರ್ ಭಟ್ ಹಾಗೂ ಮೈಸೂರು ನಗರವನ್ನು ಹಸಿರೀಕರಣಗೊಳಿಸಲು ಶ್ರಮಿಸುತ್ತಿರುವ ರಘುಲಾಲ್ ಅಂಡ್ ಕಂಪನಿ ಮಾಲೀಕರಾದ ರಾಘವನ್ ಅವರೊಂದಿಗೆ ಸಂವಾದ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಮೈಗ್ರಾಪ ಕಚೇರಿ ತಿಳಿಸಿದೆ. ಹೆಚ್ಚಿನ ವಿವರಗಳಿಗೆ ದೂ.ಸಂ:0821–2515150 ಅನ್ನು ಸಂಪರ್ಕಿಸಬಹುದು.

ಸಿಎಂ ಸಿದ್ದರಾಮಯ್ಯ, ಗೃಹ ಸಚಿವ ಪರಮೇಶ್ವರ್ ಸಿಡಿಗಳು ಬರಬಹುದು!?

- ಶಾಸಕ ರಮೇಶ್ ಜಾರಕಿಹೊಳಿ ಅಚ್ಚರಿ ನುಡಿ
- ಮಹಾನಾಯಕನ ತಡೆಯುವಂತೆ ಸಿಎಂಗೆ ಕಿವಿಮಾತು

ಬೆಂಗಳೂರು, ಮೇ 7(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಗೃಹ ಸಚಿವ ಡಾ.ಜಿ. ಪರಮೇಶ್ವರ್ ಅವರ ಸಿಡಿಗಳು ಆಚೆ ಬಂದರೂ ಅಚ್ಚರಿಪಡುವಂತಹದ್ದು ಏನೂ ಇಲ್ಲ ಎಂದು ಮಾಜಿ ಸಚಿವ ಹಾಗೂ ಬಿಜೆಪಿ ಶಾಸಕ ರಮೇಶ್ ಜಾರಕಿಹೊಳಿ ತಿಳಿಸಿದ್ದಾರೆ.



ಇದಕ್ಕೂ ಮುನ್ನವೇ ಸಿಡಿಯ ಪ್ರಮುಖ ಪಾತ್ರಧಾರಿ ಮಹಾನ್ ನಾಯಕನ ತಡೆಯಿರಿ ಎಂದು ಮುಖ್ಯಮಂತ್ರಿ ಅವರಿಗೆ ಕಿವಿಮಾತು ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಜ್ವಲ್ ಸಿಡಿ ಹೊರಬಂದ ದಿನವೇ ಇದರ ಹಿಂದಿನ ರೂವಾರಿ ಶಿವಕುಮಾರ್ ಎಂದು ಹೇಳಿದ್ದೆ. ಆದರೆ ಯಾರೂ ಇದನ್ನು ನಂಬಲಿಲ್ಲ ಎಂದರು.

ನನ್ನ ಖಾಸಗಿ ವಿಡಿಯೋಗಳು ಹೊರಬಂದಾಗಲೇ ಎಚ್ಚರಿಕೆ ಕೊಟ್ಟಿದ್ದೆ. ಮಹಾನ್ ನಾಯಕನೊಬ್ಬ ಪ್ರತಿಷ್ಠಿತ ಕುಟುಂಬಕ್ಕೆ ಖೆಡ್ಡ ತೋಡುತ್ತಿದ್ದಾನೆ ಎಂದಾಗಲೂ ಯಾರೂ ಬೆಲೆ ಕೊಡಲಿಲ್ಲ, ಈಗ ಏನಾಗಿದೆ.

ರಾಜಕಾರಣದಲ್ಲಿ ಈಗ ಸೈದ್ಧಾಂತಿಕ ಹೋರಾಟ ಮುಗಿದುಹೋಗಿದೆ. ಒಬ್ಬರನ್ನು ಕಂಡರೆ ಮತ್ತೊಬ್ಬರು ತುಳಿಯುವುದು ಜಾಸ್ತಿಯಾಗಿದೆ. ಸಿಡಿ, ಪೆನ್‌ಡ್ರೈವ್ ಪ್ರಕರಣಗಳು ಯಾವುದೂ ಒಳ್ಳೆಯದಲ್ಲ ಇದನ್ನು ಪಕ್ಷಾತೀತವಾಗಿ ಇಲ್ಲಿಗೇ ಮುಗಿಸಬೇಕು. ಇಲ್ಲದಿದ್ದರೆ ಮುಂದೊಂದು ದಿನ ಸಿದ್ದರಾಮಯ್ಯ, ಪರಮೇಶ್ವರ್ ಸಿಡಿಗಳು ಆಚೆ ಬಂದರೂ ಅಚ್ಚರಿ ಪಡಬೇಕಿಲ್ಲ ಎಂದರು.

ನನ್ನ ವಿಚಾರದಲ್ಲಿ ಇಂದಿನ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನೇರ ಪಾತ್ರವಿದೆ, ಪ್ರಜ್ವಲ್ ವಿಚಾರದಲ್ಲಿ ಪರೋಕ್ಷ ಆರೋಪಿ ಎನ್ನುತ್ತಿದ್ದಾರೆ. ನನ್ನ ಖಾಸಗಿ ಸಿಡಿ ಪ್ರಕರಣವನ್ನೂ ಸಿಬಿಐಗೆ ಕೊಟ್ಟರೆ, ಎಲ್ಲಾ ದಾಖಲೆಗಳನ್ನೂ ನೀಡುತ್ತೇನೆ, ಅದರಲ್ಲಿ ಶಿವಕುಮಾರ್ ಅಷ್ಟೇ ಅಲ್ಲ, ನಮ್ಮವರೂ ಕೆಲವರಿದ್ದಾರೆ ಎಂದರು.

ಸುಯೋಗ್ ಆಸ್ಪತ್ರೆಯಲ್ಲಿ ವಿಶ್ವ ಆಸ್ತಮಾ ದಿನಾಚರಣೆ: ಅರಿವಿನ ಕಾರ್ಯಕ್ರಮ



ಮೈಸೂರು, ಮೇ 7– ವಿಶ್ವ ಅಸ್ತಮಾ ದಿನಾಚರಣೆ ಅಂಗವಾಗಿ ಸುಯೋಗ್ ಆಸ್ಪತ್ರೆಯಲ್ಲಿ ಮೇ 7ರ ಬೆಳಗ್ಗೆ ಆಸ್ತಮಾದ ಬಗ್ಗೆ ಶೈಕ್ಷಣಿಕ ಅರಿವಿನ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಶ್ವಾಸಕೋಶ ತಜ್ಞವೈದ್ಯ ಡಾ.ಸುಯೋಗ್ ಯೋಗಣ್ಣ ಮಾತನಾಡಿ, ಪ್ರತಿ ವರ್ಷ ಮೇ ತಿಂಗಳ ಮೊದಲನೇ ಮಂಗಳವಾರದಂದು ವಿಶ್ವ ಆಸ್ತಮಾ ದಿನಾಚರಣೆಯ ಕಾರ್ಯಕ್ರಮವನ್ನು ಜಗತ್ತಿನಾದ್ಯಂತ ಆಚರಿಸಲಾಗುತ್ತಿದ್ದು, ಇದೇ ಸಂದರ್ಭ ಸುಯೋಗ್ ಆಸ್ಪತ್ರೆಯ ಶುಶ್ರೂಷಕರು ಹಾಗೂ ಕಿರಿಯ ವೈದ್ಯರಿಗೆ, ಆಸ್ತಮಾ ರೋಗಿಗಳಿಗೆ ನೀಡಬೇಕಾದ ವಿವಿಧ ಬಗೆಯ ಚಿಕಿತ್ಸಾ ವಿಧಾನಗಳು ಮತ್ತು ಔಷಧೋಪಚಾರಗಳ ಬಗ್ಗೆ ಸವಿಸ್ತಾರವಾಗಿ ಮಾಹಿತಿ ನೀಡಿದರು.

ವೈದ್ಯಶಾಸ್ತ್ರ ವಿಭಾಗದ ಸಾಮಾನ್ಯ ತಜ್ಞ ವೈದ್ಯರಾದ ಡಾ.ಅಭಿಷೇಕ್ ಮಾತನಾಡಿ, ಆಸ್ತಮಾ ಪೀಡಿತ ರೋಗಿಗಳು ವಹಿಸಬೇಕಾದ ಮುನ್ನೆಚ್ಚರಿಕೆಗಳ ಬಗ್ಗೆ ಮಾಹಿತಿ ನೀಡುತ್ತ, ರೋಗಿಯನ್ನು ಶಿಕ್ಷಿತನಾಗಿ ಮಾಡುವುದರಿಂದ ಆಸ್ತಮಾದಿಂದ ಪಾರಾಗಲು ಸಾಧ್ಯ ಎಂದ ಅವರು ರೋಗಿಯು ಅಲರ್ಜಿ ವಸ್ತುಗಳಿಂದ ದೂರವಿರುವುದು, ಮಳೆ ಮತ್ತು ಚಳಿಗಾಲದಲ್ಲಿ ಆರೋಗ್ಯದ ಬಗ್ಗೆ ಎಚ್ಚರಿಕೆ ವಹಿಸುವುದು, ಸಾಂಕ್ರಾಮಿಕ ರೋಗಗಳಿಂದ ದೂರವಿರುವುದು, ಆಗಿಂದಾಗ್ಗೆ ತಪಾಸಣೆಗೆ ಒಳಪಡುವುದರಿಂದ ಆಸ್ತಮಾವನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವುದು ಸಾಧ್ಯ ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಸುಯೋಗ್ ಆಸ್ಪತ್ರೆ ಉಪವೈದ್ಯಕೀಯ ಅಧೀಕ್ಷಕರಾದ ಡಾ.ಯೋಗೇಶ್, ಶುಶ್ರೂಷಕ ವಿಭಾಗದ ಮುಖ್ಯಸ್ಥ ಪವನ್‌ಕುಮಾರ್, ಜನರಲ್ ಮ್ಯಾನೇಜರ್ ಪಿ.ಜೆ.ಅರುಣ್ ಕುಮಾರ್ ಹಾಗೂ ಸಿಬ್ಬಂದಿ ಪಾಲ್ಗೊಂಡಿದ್ದರು.

ಅಜೀಜ್ ಸೇಠ್ ನಗರ ಜೋಡಿ ರಸ್ತೆಯಲ್ಲಿ ವಾಹನ ಸಂಚಾರ ನಿರ್ಬಂಧ

ಮೈಸೂರು, ಮೇ 7– ಮೈಸೂರು ನಗರದ ಅಜೀಜ್ ಸೇಠ್ ನಗರ ಜೋಡಿ ರಸ್ತೆಯಲ್ಲಿ ಉದಯಗಿರಿ ಪೊಲೀಸ್ ಠಾಣೆಯ ಸಮೀಪದಿಂದ ಇಂದಿರಾಗಾಂಧಿ ರಸ್ತೆ, ಗೌಸಿಯಾನಗರದವರೆಗೆ ತ್ಯಾಜ್ಯ ನೀರು ನಿರ್ವಹಣೆಗಾಗಿ ಒಳಚರಂಡಿ ಕೊಳವೆ ಮಾರ್ಗ ಅಳವಡಿಸುವ ಕಾಮಗಾರಿಯನ್ನು ಪಾಲಿಕೆ ವತಿಯಿಂದ ಕೈಗೆತ್ತಿಕೊಳ್ಳಲಾಗಿದೆ.

ಹಾಗಾಗಿ ಈ ಮಾರ್ಗದಲ್ಲಿ ಮೇ 6ರಿಂದ ಮೇ 9ರವರೆಗೆ (ಮೂರು ದಿನಗಳವರೆಗೆ) ತಾತ್ಕಾಲಿಕವಾಗಿ ವಾಹನ ಸಂಚಾರ ನಿರ್ಬಂಧಗೊಳಿಸಲಾಗಿದೆ. ಈ ಮಾರ್ಗದಲ್ಲಿ ನಿತ್ಯ ಸಂಚರಿಸುವ ವಾಹನ ಸವಾರರು, ಸಾರ್ವಜನಿಕರು ಈ ಮೇಲಿನ ದಿನಾಂಕದಂದು ಬದಲಿ ಮಾರ್ಗದಲ್ಲಿ ಸಂಚರಿಸಿ ಸಹಕರಿಸುವಂತೆ ಮೈಸೂರು ನಗರಪಾಲಿಕೆ ನೀರು ಸರಬರಾಜು ಮತ್ತು ಒಳಚರಂಡಿ ವಿಭಾಗ(ಪೂರ್ವ)ದ ಕಾರ್ಯಪಾಲಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಂಗ್ರೆಸ್‌ನ ಮಾಜಿ ನಾಯಕಿ ರಾಧಿಕಾ ಖೇರಾ, ನಟ ಶೇಖರ್ ಸುಮನ್ ಬಿಜೆಪಿ ಸೇರ್ಪಡೆ

ನವದೆಹಲಿ, ಮೇ 7– ಲೋಕಸಭೆ ಚುನಾವಣೆಯ ನಡುವೆಯೇ ಕಾಂಗ್ರೆಸ್‌ನ ಮಾಜಿ ನಾಯಕಿ ರಾಧಿಕಾ ಖೇರಾ ಮತ್ತು ನಟ ಶೇಖರ್ ಸುಮನ್ ಮಂಗಳವಾರ ಬಿಜೆಪಿಗೆ ಸೇರ್ಪಡೆಯಾದರು. ಕಾಂಗ್ರೆಸ್‌ನ ಮಾಧ್ಯಮ ವಿಭಾಗದ ಮಾಜಿ ರಾಷ್ಟ್ರೀಯ ಸಮನ್ವಯಾಧಿಕಾರಿಯಾದ ಖೇರಾ ಅವರು ಪಕ್ಷದ ಛತ್ತೀಸ್‌ಗಢದ ಕಚೇರಿಯಲ್ಲಿ ಮತ್ತೊಬ್ಬ ನಾಯಕನೊಂದಿಗೆ ವಾಗ್ವಾದ ನಡೆಸಿದ ಮಾರನೇ ದಿನ ಭಾನುವಾರ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದರು. ಅಯೋಧ್ಯೆಯ ರಾಮ ಮಂದಿರಕ್ಕೆ ಭೇಟಿ ನೀಡಿದ್ದಕ್ಕಾಗಿ ಪಕ್ಷದಲ್ಲಿ ವಿರೋಧವನ್ನು ಎದುರಿಸು ತ್ತಿರುವುದಾಗಿ ಖೇರಾ ಅವರು ಕಾಂಗ್ರೆಸ್ ಮುಖ್ಯಸ್ಥ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಬರೆದಿದ್ದ ರಾಜೀನಾಮೆ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.



ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಆರೋಪ ಪ್ರಕರಣದಲ್ಲಿ ಸಂತ್ರಸ್ತೆ ಅಪಹರಣ

ಜಾಮೀನು ಕೋರಿ ಸತೀಶ್ ಬಾಬಣ್ಣ ಹುಣಸೂರು ಕೋರ್ಟ್‌ನಲ್ಲಿ ಅರ್ಜಿ

ಖ್ಯಾತ ವಕೀಲ ಅರುಣ್ ಕುಮಾರ್ ವಕಾಲತು

ಮೈಸೂರು, ಮೇ 7(ಎಸ್‌ಬಿಡಿ)– ಪ್ರಜ್ವಲ್ ರೇವಣ್ಣನಿಂದ ಲೈಂಗಿಕ ದೌರ್ಜನ್ಯಕ್ಕೊಳಗಾಗಿದ್ದಾರೆ ಎನ್ನಲಾದ ಸಂತ್ರಸ್ತೆಯೊಬ್ಬರ ಅಪಹರಣ ಪ್ರಕರಣದ ಎರಡನೇ ಆರೋಪಿ ಸತೀಶ್ ಬಾಬಣ್ಣಗೆ ಜಾಮೀನು ಕೋರಿ ಹುಣಸೂರಿನ ನ್ಯಾಯಾಲಯದಲ್ಲಿ ಮಂಗಳವಾರ ಅರ್ಜಿ ಸಲ್ಲಿಸಲಾಗಿದೆ.

ಮೈಸೂರಿನ ಪ್ರಥಿ ಲಾ ಅಸೋಸಿಯೇಟ್ಸ್‌ನ ಖ್ಯಾತ ವಕೀಲ ಎಸ್.ಅರುಣ್ ಕುಮಾರ್, ಎಸ್‌ಐಟಿ ವಶದಲ್ಲಿರುವ ಆರೋಪಿ ಸತೀಶ್ ಬಾಬಣ್ಣ ಪರ 8ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಜಾಮೀನು ಅರ್ಜಿ ಸಲ್ಲಿಸಿದ್ದಾರೆ.

ಅಲ್ಲಿನ ನ್ಯಾಯಾಧೀಶರು ರಜೆಯಲ್ಲಿರುವ ಹಿನ್ನೆಲೆಯಲ್ಲಿ ಮೈಸೂರಿನ 7ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಕ್ಕೆ ಜಾಮೀನು ಅರ್ಜಿ ವರ್ಗಾವಣೆಯಾಗಿ ಬುಧವಾರ ಮಧ್ಯಾಹ್ನ ವಿಚಾರಣೆ ನಡೆಯುವ ಸಾಧ್ಯತೆ ಇದೆ ಎಂದು ವಕೀಲರು ತಿಳಿಸಿದ್ದಾರೆ.

ಈ ಪ್ರಕರಣ ನ್ಯಾಯಾಲಯದಲ್ಲಿ ವಿಚಾರಣೆಯಾಗಿ ಇತ್ಯರ್ಥವಾಗಬೇಕು. ಆದರೆ ಈ ವಿಚಾರವಾಗಿ ರಾಜಕೀಯ ಜಿದ್ದಾಜಿದ್ದಿ ನಡೆದಿದೆ. ನ್ಯಾಯಾಲಯದ ವಿಚಾರಣೆಗೂ ಮುನ್ನವೇ ಮಾಧ್ಯಮಗಳಲ್ಲಿ ಟ್ರಯಲ್ ನಡೆಯುತ್ತಿದೆ. ಸಂತ್ರಸ್ತೆಯ ಗೌಪ್ಯತೆ ಕಾಪಾಡದೆ ಎಲ್ಲಾ ವಿಚಾರಗಳನ್ನೂ ಅವರವರ ಅನುಕೂಲಕ್ಕಾಗಿ ಬಹಿರಂಗಗೊಳಿಸಲಾಗುತ್ತಿದೆ. ದೊಡ್ಡವರ ಜಟಾಪಟಿ ನಡುವೆ ಎರಡನೇ ಆರೋಪಿ ಸತೀಶ್ ಬಾಬಣ್ಣ ಸಿಲುಕಿಕೊಂಡಿದ್ದಾರೆ. ಪ್ರಕರಣದ ಮೊದಲ ಆರೋಪಿ ರೇವಣ್ಣ ಜಾಮೀನು ಅರ್ಜಿ ತಿರಸ್ಕರಿಸಿದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ, ಮಹಿಳೆಯ ಸುರಕ್ಷತೆ ಬಹಳ ಮುಖ್ಯ ಎಂದು ಹೇಳಿದೆ. ಸದ್ಯ ಮಹಿಳೆ ಪತ್ತೆಯಾಗಿದ್ದಾರೆ. ಅವರಿದ್ದ ತೋಟದ ಮನೆಯ ಬಳಿ ವಿಚಾರಿಸಿದಾಗ ಅವರು ಕೆಲಸಕ್ಕೆ ಬಂದಿರುವುದಾಗಿ ತಿಳಿಸಿದ್ದರೆಂದು ಕೆಲವರು ಹೇಳಿಕೆ ನೀಡಿದ್ದಾರೆ. ಅಪಹರಣ ಸಂಬಂಧ ಮಹಿಳೆ ದ್ವಂದ್ವ ಹೇಳಿಕೆ ನೀಡಿರುವ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗಿದೆ. ಈ ಕೃತ್ಯದಲ್ಲಿ ಕಕ್ಷಿದಾರ ಸತೀಶ್ ಬಾಬಣ್ಣ ಭಾಗಿಯಾಗಿಲ್ಲ. ಈ ಎಲ್ಲಾ ಅಂಶಗಳನ್ನು ನ್ಯಾಯಾಲಯದ ಮುಂದಿಟ್ಟು ಜಾಮೀನು ಕೋರಲಾಗಿದೆ ಎಂದು ವಕೀಲ ಅರುಣ್ ಕುಮಾರ್ ಹೇಳಿದ್ದಾರೆ.



ಸೂಕ್ಷ್ಮ ಹಾಗೂ ಗಂಭೀರ ಪ್ರಕರಣಗಳಲ್ಲಿ ತನಿಖೆಗೆ ತೊಂದರೆಯಾಗಬಾರದು, ಪ್ರಭಾವ ಬಳಸಬಹುದು, ಸಾಕ್ಷಿ ನಾಶ ಮಾಡಬಹುದು ಎಂಬ ಕಾರಣಕ್ಕೆ ನ್ಯಾಯಾಲಯ ಆರೋಪಿಗಳಿಗೆ ಜಾಮೀನು ನಿರಾಕರಣೆ ಮಾಡುವುದು ಸಹಜ. ಪ್ರಸ್ತುತ ಸತೀಶ್ ಬಾಬಣ್ಣರನ್ನು 7 ದಿನ ಎಸ್‌ಐಟಿ ವಶಕ್ಕೆ ನೀಡಲಾಗಿದೆ. ಆದರೆ ಜಾಮೀನು ನೀಡುವುದು ನ್ಯಾಯಾಲಯಕ್ಕೆ ಸಂಬಂಧಿಸಿದ ವಿಚಾರ ಎಂದರು.

ರೇವಣ್ಣ ಮನೆಯಲ್ಲಿ ಕೆಲಸ ಮಾಡಿಕೊಂಡಿದ್ದ ಮಹಿಳೆ ಅಪಹರಿಸಿದ ಆರೋಪದಡಿ ಶಾಸಕ ರೇವಣ್ಣ ಹಾಗೂ ಕೆ.ಆರ್.ನಗರ ಬಳಿಯ ಹೆಬ್ಬಾಳುಕೊಪ್ಪಲು ನಿವಾಸಿ ಸತೀಶ್ ಬಾಬಣ್ಣ ವಿರುದ್ಧ ಕೆ.ಆರ್.ನಗರ ಪೊಲೀಸ್ ಠಾಣೆಯಲ್ಲಿ ಏ.2ರಂದು ಪ್ರಕರಣ ದಾಖಲಾಗಿದ್ದು, ಬಂಧನಕ್ಕೊಳಗಾಗಿರುವ ಇಬ್ಬರು ಆರೋಪಿಗಳೂ ಸದ್ಯ ಎಸ್‌ಐಟಿ ವಶದಲ್ಲಿದ್ದಾರೆ.

ಮೈಸೂರು ಮಿತ್ರ

ಪ್ರಜ್ವಲ್ ಪ್ರಕರಣದಿಂದ ಮುಜುಗರ ಆಗೋದಾದ್ರೆ ಬಿಜೆಪಿ ಮೈತ್ರಿ ನಿರ್ಧರಿಸಲಿ

ಮೈತ್ರಿ ಮಾಡಿಕೊಂಡಿರೋದು ದೀರ್ಘ ಅವಧಿಗೆ: ಹೆಚ್‌ಡಿಕೆ

ಬೆಂಗಳೂರು: ಬಿಜೆಪಿ ಜೊತೆಗೆ ಮೈತ್ರಿ ಆಗಿರೋದು ಸುದೀರ್ಘ ಅವಧಿಗೆ. ಈ ಪ್ರಕರಣದಿಂದ ಬಿಜೆಪಿ ಅವರಿಗೆ ಮುಜುಗರ ಆಗುತ್ತದೆ ಅನ್ನೋದಾದ್ರೆ, ಅವರು ತೀರ್ಮಾನ ಮಾಡಲಿ. ನಮ್ಮದೇನು ವಿರೋಧ ಇಲ್ಲ ಎಂದು ಮಾಜಿ ಸಿಎಂ ಹೆಚ್.ಡಿ ಕುಮಾರಸ್ವಾಮಿ ಹೇಳಿದ್ದಾರೆ.



ಪೆನ್‌ಡ್ರೈವ್ ಪ್ರಕರಣಕ್ಕೆ ಸಂಬಂಧಿಸಿದಂತೆ ಸುದ್ದಿಗೋಷ್ಠಿಯಲ್ಲಿ ಅವರು, ಮೈತ್ರಿ ಮುಂದುವರಿಸುವ ಬಗ್ಗೆ ಆರ್.ಅಶೋಕ್ ಹೇಳಿಕೆ ಪ್ರಸ್ತಾಪಿಸಿ ಮಾತನಾಡಿದರು. ರಾಷ್ಟ್ರೀಯ ಪಕ್ಷ ಅವರದ್ದು. ಅವರು ಏನ್ ತೀರ್ಮಾನ ಮಾಡ್ತಾರೋ ಮಾಡಲಿ. ನಾನು ಅದರ ಬಗ್ಗೆ ತಲೆ ಕೆಡಿಸಿಕೊಳ್ಳೊಲ್ಲ. ಮೈತ್ರಿ ಇರುತ್ತೋ ಇಲ್ಲವೋ ಮುಂದೆ ನೋಡೋಣ. ತನಿಖೆ ಆಗಿ ಸತ್ಯ ಹೊರಬರಲಿದೆ.


ಬಿಜೆಪಿ ಜೊತೆಗೆ ಮೈತ್ರಿ ಆಗಿದ್ದೇ ತಡೆಯೋಕೆ ಆಗ್ತಿಲ್ಲ. ಅದಕ್ಕೆ ಹೀಗೆಲ್ಲ ಮಾತನಾಡುತ್ತಿದ್ದಾರೆ. ಈ ಪ್ರಕರಣದಲ್ಲಿ ನಮ್ಮ ಹೆಸರನ್ನು ಪದೇ ಪದೆ ಬಳಕೆ ಮಾಡಿಕೊಳ್ಳುತ್ತಿದ್ದರು, ಅದಕ್ಕೆ ನಾನೇ ಸ್ಟೇ ತಂದಿದ್ದೆ. ನಮ್ಮ ಒತ್ತಾಯ ಪಾರದರ್ಶಕ ತನಿಖೆ ಆಗಬೇಕು ಎಂಬುದು ಅಷ್ಟೇ. ಈ ಸರ್ಕಾರ ಅಧಿಕಾರವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಅಂತ ರಾಜ್ಯಪಾಲರಿಗೂ ದೂರು ಕೊಡ್ತೀವಿ ಎಂದು ಅವರು ಹೇಳಿದ್ದಾರೆ.

ಊಟಿಗೆ ಸಿಎಂ; ಚಿಕ್ಕಮಗಳೂರಿಗೆ ಡಿಸಿಎಂ

ಚುನಾವಣೆ ಬಳಿಕ ರಿಲ್ಯಾಕ್ಸ್

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಲೋಕಸಭಾ ಚುನಾವಣೆಯ ಬಿಸಿಯಿಂದ ರಿಲ್ಯಾಕ್ಸ್ ಮೂಡಿಗೆ ಜಾರಿದ್ದಾರೆ. ಅವರು ಹೆಚ್‌ಎಎಲ್‌ನಿಂದ ಊಟಿಗೆ ತೆರಳಿದ್ದಾರೆ. ಮೂರು ದಿನಗಳ ಕಾಲ ಅವರು ಅಲ್ಲಿ ವಿಶ್ರಾಂತಿ ಪಡೆಯಲಿದ್ದಾರೆ. ಸಿದ್ದರಾಮಯ್ಯ ತೆರಳುವ ಮುನ್ನ ಸಚಿವರಾದ ರಾಮಲಿಂಗಾರೆಡ್ಡಿ, ಮಹದೇವಪ್ಪ, ರಾಜಣ್ಣ ಅವರು ಭೇಟಿಯಾಗಿದ್ದು, ಅನೌಪಚಾರಿಕವಾಗಿ ಚರ್ಚೆ ಮಾಡಿದ್ದಾರೆ. ಎರಡನೇ ಹಂತದ ಚುನಾವಣಾ ಮತದಾನ, ಪ್ರಸ್ತ ರಾಜಕೀಯ ಬೆಳವಣಿಗೆ ಹಾಗೂ ಪೆನ್‌ಡ್ರೈವ್ ಪ್ರಕರಣದ ವಿಚಾರಗಳ ಬಗ್ಗೆ ಚರ್ಚಿಸಿದ್ದಾರೆ. ಮನೆಯಿಂದ ಹೊರಟ ಸಿಎಂ ಕಾರ್ ಗ್ಲಾಸ್ ಇಳಿಸದೇ, ಮಾಧ್ಯಮಗಳಿಗೆ ಯಾವುದೇ ಪ್ರತಿಕ್ರಿಯೆ ನೀಡದೇ ತೆರಳಿದರು. ಊಟಿ ಪ್ರವಾಸದ ವೇಳೆ ಹೆಚ್.ಸಿ ಮಹದೇವಪ್ಪ ಸಿಎಂಗೆ ಸಾಥ್ ನೀಡಲಿದ್ದಾರೆ. ಇತ್ತ ಡಿಸಿಎಂ ಡಿಕೆ ಶಿವಕುಮಾರ್ ಅವರು ಕುಟುಂಬ ಸದಸ್ಯರ ಜೊತೆ ಚಿಕ್ಕಮಗಳೂರಿಗೆ ತೆರಳಿದ್ದು, ಅಲ್ಲಿ ರೆಸಾರ್ಟ್‌ನಲ್ಲಿಎರಡು ದಿನ ವಾಸ್ತವ್ಯ ಹೂಡಲಿದ್ದಾರೆ. ಅವರು ಚಿಕ್ಕಮಗಳೂರಿಗೆ ತೆರಳಬೇಕಿದ್ದ ಹೆಲಿಕಾಪ್ಟರ್‌ನಲ್ಲಿ ತಾಂತ್ರಿಕ ಸಮಸ್ಯೆ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಸದಾಶಿವನಗರಕ್ಕೆ ವಾಪಸ್ ಆಗಿ, ಬಳಿಕ ರಸ್ತೆ ಮಾರ್ಗವಾಗಿ ಡಿಕೆಶಿ ಚಿಕ್ಕಮಗಳೂರಿಗೆ ತೆರಳಿದ್ದಾರೆ.





ಒಂದನೇ ಪುಟದಿಂದ

ಓರ್ವ ಬಲಿ; ಧರೆಗುರುಳಿದ ಭಾರಿ ಮರಗಳು

ಗುಜ್ಜಾಗಿದ್ದ ಕಾರಿನಲ್ಲಿ ಸಿಲುಕಿದ್ದ ಕಾರ್ತಿಕ್ ಸಾವನ್ನಪ್ಪಿದ್ದು, ಇನ್ನಿಬ್ಬರು ಅದೃಷ್ಟವಶಾತ್ ಪಾರಾಗಿದ್ದಾರೆ. ಪೂರ್ವ ಠಾಣಾ ಪೊಲೀಸರು, ಮೃತ ದೇಹವನ್ನು ಮಿಮ್ಸ್ ಶವಾಗಾರಕ್ಕೆ ರವಾನಿಸಿದರು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಈ ದುರಂತಕ್ಕೆ ಅರಣ್ಯ ಇಲಾಖೆ ಮತ್ತು ನಗರಸಭೆ ಹೊಣೆ ಎಂದು ಸಂಬಂಧಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಮಂಗಳವಾರ ಮಧ್ಯಾಹ್ನ ಕಾರ್ತಿಕ್ ಪಾರ್ಥಿವ ಶರೀರವಿದ್ದ ಮಿಮ್ಸ್ ಆಸ್ಪತ್ರೆಗೆ ಆಗಮಿಸಿದ ಕ್ಷೇತ್ರದ ಶಾಸಕ ಗಣಿಗ ರವಿಕುಮಾರ್, ಮೃತ ಕುಟುಂಬಸ್ಥರಿಗೆ ಸಾಂತ್ವನ ಹೇಳಿ ವೈಯಕ್ತಿಕವಾಗಿ ಒಂದು ಲಕ್ಷ ರೂ. ಪರಿಹಾರವನ್ನು ನೀಡಿದರು.

ನಗರದಾದ್ಯಂತ ಧರೆಗುರುಳಿದ ಮರಗಳು: ಸೋಮವಾರ ರಾತ್ರಿ ಸುರಿದ ಧಾರಾಕಾರ ಮಳೆಗೆ ಮಂಡ್ಯ ನಗರದ ಪ್ರಮುಖ ರಸ್ತೆಗಳೆಲ್ಲಾ ಬಂದ್ ಆಗಿತ್ತು. ಸಾರ್ವಜನಿಕರು ಯಾವ ರಸ್ತೆಯಲ್ಲಿ ಸಂಚರಿಸಬೇಕೆಂದು ಪರದಾಡುವಂತಾಗಿತ್ತು.

ಅದರಲ್ಲೂ ಬೆಂಗಳೂರು– ಮೈಸೂರು ರಸ್ತೆ, ವಿವೇಕಾನಂದ ಜೋಡಿ ರಸ್ತೆ, ಜಿಲ್ಲಾಸ್ಪತ್ರೆ ರಸ್ತೆ, ನೂರಡಿ ರಸ್ತೆ, ಬನ್ನೂರು ರಸ್ತೆ, ಡಿಸಿ ಕಚೇರಿ ರಸ್ತೆ, ತೋಟಗಾರಿಕಾ ಇಲಾಖೆ ರಸ್ತೆ ಅಕ್ಷರಶಃ ಬಂದ್ ಆಗಿದ್ದವು. ಪರಿಣಾಮ ಇಲ್ಲಿ ಸಂಚಾರಕ್ಕೆ ಬದಲಿ ವ್ಯವಸ್ಥೆ ಮಾಡಲಾಗಿತ್ತು. ಪ್ರಮುಖ ರಸ್ತೆಗಳನ್ನು ಹೊರತುಪಡಿಸಿ ಸಣ್ಣ–ಪುಟ್ಟ ರಸ್ತೆಗಳಲ್ಲೂ ಬೃಹತ್ ಮರಗಳು ಧರೆಗುರುಳಿದ್ದವು. ಬೆಂಗಳೂರು– ಮೈಸೂರು ರಸ್ತೆಯಲ್ಲಿ ಬೃಹತ್ ಮರಗಳು ಬಿದ್ದ ಪರಿಣಾಮ ರೈಲ್ವೆ ನಿಲ್ದಾಣದ ಎದುರು, ನಗರಸಭೆ ಬಳಿ ಹಾಗೂ ನೂರಡಿ ರಸ್ತೆಯಲ್ಲಿ ನೂರಾರು ಕಾರುಗಳು, ಬೈಕ್‌ಗಳು ಜಖಂಗೊಂಡವು. ಜಿಲ್ಲಾಸ್ಪತ್ರೆ ರಸ್ತೆ, ವಿವೇಕಾನಂದ ಜೋಡಿ ರಸ್ತೆ ಸಂಪರ್ಕಿಸುವ ಅಶೋಕ ನಗರ, ನೆಹರು ನಗರದಲ್ಲಿ ಬೃಹತ್ ಮರಗಳು, ವಿದ್ಯುತ್ ಕಂಬಗಳು ಬಿದ್ದ ಪರಿಣಾಮ ಅಲ್ಲೂ ಕಾರು, ಬೈಕುಗಳು ಜಖಂಗೊಂಡಿದ್ದಲ್ಲದೇ ಬೃಹತ್ ಬಂಗಲೆಗಳು, ಮನೆಗಳು, ವಾಣಿಜ್ಯ ಮಳಿಗೆಗಳು ಸಹ ಜಖಂಗೊಂಡವು.

ಇಂದು ಬೆಳಿಗ್ಗೆ ಆರು ಗಂಟೆಯಿಂದ ನಗರಸಭೆ, ವಿದ್ಯುತ್ ಇಲಾಖೆ, ಬೃಹತ್ ಮರಗಳನ್ನು ತೆರವುಗೊಳಿಸುವ ಕಾರ್ಯದಲ್ಲಿ ನಿರತರಾಗಿದ್ದರು. ತೆರವು ಕಾರ್ಯಾಚರಣೆ ಕಾರ್ಯ ಮಂಗಳವಾರ ಸಂಜೆವರೆಗೂ ಜರುಗಿತು.

ವಿದ್ಯುತ್ ಸಂಪರ್ಕ ಸ್ಥಗಿತ: ಒಂದೆಡೆ ಬೃಹತ್ ಮರಗಳು ಧರೆಗುರುಳಿದರೆ ಅದೇ ರೀತಿ ವಿದ್ಯುತ್ ಕಂಬಗಳು ಸಹ ಹಲವೆಡೆ ಧರೆಗುರುಳಿತು. ಈ ಪರಿಣಾಮ ಹೈಟೆನ್ಷನ್ ಎಲೆಕ್ಟ್ರಿಕ್ ವೈರ್‌ಗಳು ರಸ್ತೆಗೆ ಬಿದ್ದ ಹಿನ್ನಲೆಯಲ್ಲಿ ತಕ್ಷಣ ಎಚ್ಚೆತ್ತ ವಿದ್ಯುತ್ ಇಲಾಖೆಯ ಅಧಿಕಾರಿಗಳು ನಗರದಾದ್ಯಂತ ವಿದ್ಯುತ್ ಸಂಪರ್ಕ ಸ್ಥಗಿತಗೊಳಿಸಿದರು. ಸೋಮವಾರ ರಾತ್ರಿ ವಿದ್ಯುತ್ ಸ್ಥಗಿತಗೊಂಡು ಮಂಗಳವಾರ ಬೆಳಿಗ್ಗೆ 6ಗಂಟೆಗೆ ಕೆಲವೆಡೆ ವಿದ್ಯುತ್ ಕಲ್ಪಿಸಲಾಯಿತು. ಅಶೋಕ ನಗರ, ಬೆಂಗಳೂರು– ಮೈಸೂರು ರಸ್ತೆಯ ಹಲವೆಡೆ ವಿದ್ಯುತ್ ಕಂಬಗಳು ಧರೆಗುರುಳಿ, ವೈರ್‌ಗಳು ತುಂಡಾಗಿ ಬಿದ್ದಿದ್ದರಿಂದ ಚೆಸ್ಕಾಂ ಇಲಾಖೆ ಅವುಗಳನ್ನು ತೆರವುಗೊಳಿಸಿ, ಮಂಗಳವಾರ ರಾತ್ರಿಯ ಬಳಿಕ ವಿದ್ಯುತ್ ಸಂಪರ್ಕ ನೀಡಿದರು.

ಸಮರ್ಪಕ ನಿರ್ವಹಣೆ ಇಲ್ಲ: ಮಂಡ್ಯ ನಗರ ಪ್ರದೇಶದ ಹಲವು ರಸ್ತೆಗಳಲ್ಲಿ ಮರಗಳನ್ನು ಬೆಳೆಸಲಾಗಿದ್ದು, ಆದರೆ ಅದರ ನಿರ್ವಹಣೆಯನ್ನು ಅರಣ್ಯ ಇಲಾಖೆ ಸಮರ್ಪಕವಾಗಿ ನಿರ್ವಹಿಸುತ್ತಿಲ್ಲ. ಬೇರು ಗಟ್ಟಿ ಇಲ್ಲದ ಮರಗಳನ್ನು ಬೆಳೆಸಿರುವುದರಿಂದ ಗಾಳಿ, ಮಳೆ ಬಿದ್ದ ಸಂದರ್ಭದಲ್ಲಿ ಮರಗಳು ಧರೆಗೆ ಉರುಳುತ್ತಿವೆ. ದೊಡ್ಡ ಗಾತ್ರದ ಮರಗಳ ಗೊಂಬೆಗಳು ರಸ್ತೆಗಳಿಗೆ ಚಾಚಿಕೊಂಡಿವೆ. ಅದೇ ರೀತಿ ಒಣಗಿದ ಕೊಂಬೆಗಳನ್ನು ಹಾಗೆ ಬಿಡಲಾಗಿದೆ. ಅರಣ್ಯ ಇಲಾಖೆ ಜೊತೆಗೆ ನಗರಸಭೆ ಬೇಜವಾಬ್ದಾರಿ ತೋರುತ್ತಿರುವುದರಿಂದ ಜನ ಬಲಿಯಾಗುತ್ತಿದ್ದಾರೆ ಎಂದು ಸ್ಥಳೀಯರು ಕಿಡಿಕಾರಿದ್ದಾರೆ. ನಗರ ಪ್ರದೇಶ ಹೊರತುಪಡಿಸಿದರೆ ಗ್ರಾಮೀಣ ಭಾಗದಲ್ಲಿ ಕೃಷಿ ಬೆಳೆ ಕೊಂಚ ಪ್ರಮಾಣದಲ್ಲಿ ನಾಶವಾಗಿದ್ದು, ಹೊರತುಪಡಿಸಿದರೆ, ಹಲವೆಡೆ ಮರ ಹಾಗೂ ವಿದ್ಯುತ್ ಕಂಬಗಳು ಧರೆಗುರುಳಿವೆ.

ಕಲಬುರಗಿಯಲ್ಲಿ ಅತೀ ಕಡಿಮೆ ಮತದಾನ

ವಿರುದ್ಧ ರಾಧಾಕೃಷ್ಣ ದೊಡ್ಡಮನಿ ಸ್ಪರ್ಧೆ ಮಾಡಿದ್ದಾರೆ. ಮತ್ತೊಂದು ಕಡೆ ಶಿವಮೊಗ್ಗಲ್ಲಿ ಮಾಜಿ ಸಿಎಂ ಬಿಎಸ್‌ವೈ ಪುತ್ರ ಬಿವೈ ರಾಘವೇಂದ್ರ ವಿರುದ್ಧ ಇನ್ನೊಬ್ಬ ಮಾಜಿ ಸಿಎಂ ದಿ. ಎಸ್ ಬಂಗಾರಪ್ಪ ಪುತ್ರಿ ಗೀತಾ ಶಿವರಾಜಕುಮಾರ್ ಸ್ಪರ್ಧಿಸಿದ್ದಾರೆ. ಈ ನಡುವೆ ಬಿಜೆಪಿ ಬಂಡಾಯ ಅಭ್ಯರ್ಥಿ ಕೆ.ಎಸ್. ಈಶ್ವರಪ್ಪ ಇವರಿಬ್ಬರಿಗೆ ಪೈಪೋಟಿ ನೀಡುತ್ತಿದ್ದಾರೆ. ಹೈ–ಪ್ರೊಫೈಲ್ ಶಿವಮೊಗ್ಗ ಲೋಕಸಭಾ ಕ್ಷೇತ್ರದಲ್ಲಿ ಶೇ.76.05 ರಷ್ಟು ಗರಿಷ್ಠ ಮತದಾನವಾಗಿದೆ. ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ವಿರುದ್ಧ ಧಾರವಾಡ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ವಿನೋದ ಅಸೂಟಿ ಸ್ಪರ್ಧಿಸಿದ್ದು, ಇಲ್ಲಿ 68.70 ರಷ್ಟು ಮತದಾನವಾಗಿದೆ. ಬಿಜೆಪಿ ಅಭ್ಯರ್ಥಿಗಳಾಗಿ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಮತ್ತು ಜಗದೀಶ್ ಶೆಟ್ಟರ್ ಸ್ಪರ್ಧಿಸಿರುವ ಹಾವೇರಿ ಮತ್ತು ಬೆಳಗಾವಿ ಕ್ಷೇತ್ರಗಳಲ್ಲಿ ಶೇ.72.59 ಮತ್ತು ಶೇ.70.36ರಷ್ಟು ಹಕ್ಕು ಚಲಾವಣೆ ಆಗಿದೆ. ಶಹಾಪುರ ವಿಧಾನಸಭೆ ಉಪ ಚುನಾವಣೆ: ಇನ್ನು ಯಾದಗಿರಿ ಶಹಪುರ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯೂ ಏಕಕಾಲದಲ್ಲಿ ನಡೆದಿದ್ದು, ಇಲ್ಲಿ ಶೇ.66.72ರಷ್ಟು ಮತದಾನವಾಗಿದೆ. ಬಿಜೆಪಿ ತನ್ನ ಅಭ್ಯರ್ಥಿಯಾಗಿ ರಾಜೂಗೌಡ (ನರಸಿಂಹ ನಾಯಕ್)ಮತ್ತು ಕಾಂಗ್ರೆಸ್ ಅಭ್ಯರ್ಥಿಯಾಗಿ ರಾಜಾ ವೇಣುಗೋಪಾಲ್ ನಾಯಕ್ ಅವರನ್ನು ಕಣಕ್ಕಿಳಿಸಿದೆ. ಕಾಂಗ್ರೆಸ್ ಶಾಸಕ ರಾಜಾ ವೆಂಕಟಪ್ಪ ನಾಯಕ್ ನಿಧನದ ಹಿನ್ನೆಲೆಯಲ್ಲಿ ಉಪಚುನಾವಣೆ ನಡೆಯಿತು.

ನಾಳೆ ಇಲ್ಲವೇ ನಾಳಿದ್ದು SSLC ಫಲಿತಾಂಶ

ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಸಿದ್ಧತೆ ಮಾಡಿಕೊಂಡಿದೆ. ಫಲಿತಾಂಶವನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ವೆಬ್‌ಸೈಟ್‌ನಲ್ಲಿ ನೋಡಬಹುದಾಗಿದೆ, ಪರೀಕ್ಷಾ ಪ್ರವೇಶ ಪತ್ರದಲ್ಲಿ ನೀಡಿರುವ ರಿಜಿಸ್ಟರ್ ನಂಬರ್ (ನೋಂದಣಿ ಸಂಖ್ಯೆ) ಮತ್ತು ಜನ್ಮ ದಿನಾಂಕ ನಮೂದಿಸುವ ಮೂಲಕ ವೆಬ್‌ಸೈಟ್‌ನಲ್ಲಿ ಫಲಿತಾಂಶ ವೀಕ್ಷಿಸಬಹುದು. kseab.karnataka.gov.inಗೆ ಭೇಟಿ ನೀಡಬಹುದು. ಅಲ್ಲದೆ, karresults.nic.in ವೆಬ್‌ಸೈಟ್‌ನಲ್ಲೂ ಫಲಿತಾಂಶ ವೀಕ್ಷಿಸಬಹುದಾಗಿದೆ. ಪ್ರತಿಯೊಬ್ಬ ವಿದ್ಯಾರ್ಥಿಯ ಬದುಕಿನಲ್ಲೂ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶ ಪ್ರಮುಖ ಹಂತವಾಗಿರುವುದರಿಂದ ಸಹಜವಾಗಿ ಕಾತುರ ಹೆಚ್ಚಾಗಿದೆ.

ಪೂರ್ತಿ ಆಡಿಯೋ ಬಿಡುಗಡೆ ಮಾಡಿದ್ರೆ ರಾಜ್ಯದಲ್ಲಿ ಅಲ್ಲೋಲಕಲ್ಲೋಲ ಆಗುತ್ತೆ

• ವಕೀಲ ದೇವರಾಜೇಗೌಡ ಸ್ಫೋಟಕ ಹೇಳಿಕೆ • ನಿಮ್ಮಂತೆ ಬ್ರೋಕರ್ ಕೆಲಸ ಮಾಡಿಕೊಂಡು ಬದುಕುತ್ತಿಲ್ಲ; ಶಿವರಾಮೇಗೌಡರಿಗೆ ಎದಿರೇಟು

ಬೆಂಗಳೂರು: ಸಂಸದ ಪ್ರಜ್ವಲ್ ರೇವಣ್ಣ ವಿಡಿಯೋಗಳ ವೈರಲ್ ಹಿಂದೆ ಡಿಕೆಶಿಯದ್ದು ಪಾತ್ರ ಇಲ್ಲ ಅನ್ನುವುದಾದರೆ ವಿಧಾನಸೌಧದ ಗಾಂಧಿ ಪ್ರತಿಮೆ ಬಳಿ ಬಹಿರಂಗ ಚರ್ಚೆಗೆ ಬರಲಿ, ಅಲ್ಲೇ ಆಡಿಯೋ ಬಿಡುಗಡೆ ಮಾಡೋಣ ಎಂದು ವಕೀಲ, ಬಿಜೆಪಿ ಮುಖಂಡ ದೇವರಾಜೇಗೌಡ ಸವಾಲು ಹಾಕಿದ್ದಾರೆ.



ದೇವರಾಜೇಗೌಡ

ಖಾಸಗಿ ಚಾನೆಲ್‌ನೊಂದಿಗೆ ಮಾತನಾಡಿದ ಅವರು, ಪೂರ್ತಿ ಆಡಿಯೋ ಹೊರಗೆ ಬಿಟ್ರೆ ಹಳ್ಳಿ ಜನ ಕಾಲಲ್ಲಿರೋದನ್ನ ಕೈಗೆ ತಗೋತಾರೆ. ಹೀಗಾಗಿ ಸದ್ಯಕ್ಕೆ ಆಡಿಯೋ ಬಿಡುಗಡೆ ಮಾಡುವುದು ಬೇಡ. ಅದನ್ನು ಸಮಗ್ರ ತನಿಖೆಗೆ ಕೊಟ್ಟು ಆಮೇಲೆ ಬೇಕಿದ್ದರೆ ಕೋರ್ಟ್ ಅಥವಾ ತನಿಖಾಧಿಕಾರಿಗಳು ಬಿಡುಗಡೆ ಮಾಡಲಿ. ಈಗ ಬಿಡುಗಡೆ ಮಾಡಿದರೆ ರಾಜ್ಯದಲ್ಲಿ ಅಲ್ಲೋಲ ಕಲ್ಲೋಲ ಆಗುತ್ತೆ. ಶಾಂತಿ–ಸುವ್ಯವಸ್ಥೆ ಕಾಪಾಡುವ ಸಲುವಾಗಿ ಪೂರ್ತಿ ಆಡಿಯೋ ಬಿಡುಗಡೆ ಮಾಡಿಲ್ಲ ಎಂದರು.

ಕಾಂಗ್ರೆಸ್ ನಾಯಕರು ಮಾತನಾಡಿ ಅವರ ಕೊಳಕು ಮನಸ್ಥಿತಿಯನ್ನು ತೋರಿಸ್ತಿದ್ದಾರೆ. ನನ್ನ ಮೇಲೆ ಕಾಂಗ್ರೆಸ್ ನಾಯಕರು ಮುಗಿಬಿದ್ರೆ ಸತ್ಯ ಮರೆ ಮಾಚಲ್ಲ. ಡಿಸಿಎಂ ವಿರುದ್ಧ ಪೋಸ್ಟರ್ ಅಂಟಿಸಿರೋದು ಸರಿ ಇದೆ. ಇನ್ನು ಮುಂದೆ ನಮ್ಮದೇ ಹೋರಾಟ ಆರಂಭವಾಗುತ್ತೆ ಶೀಘ್ರದಲ್ಲೇ ಸರ್ಕಾರ ಪತನವಾಗುತ್ತೆ ಎಂದು ವಕೀಲ ದೇವರಾಜೇಗೌಡ ಗುಡುಗಿದ್ದಾರೆ.

ಬ್ಲಾಕ್‌ಮೇಲ್ ಶಿವರಾಮೇಗೌಡ: ಇದೇ ವೇಳೆ ಎಲ್.ಆರ್. ಶಿವರಾಮೇ ಗೌಡ ಆರೋಪ ಕುರಿತು ಪ್ರತಿಕ್ರಿಯಿಸಿ, ವಯಸ್ಸಿನಲ್ಲಿ ದೊಡ್ಡವರಾಗಿರುವ ಅವರ ಮಾತಿನಲ್ಲಿ ಮಿತಿ ಇರಲಿ. ನನ್ನ ಒಟ್ಟು ಆಸ್ತಿಯ ಬಗ್ಗೆ ಶಿವರಾಮೇಗೌಡರು ಅಫಿಡವಿಟ್ ತೆಗೆದು ನೋಡಲಿ. ನಾನು ಭಿಕ್ಷುಕ ಅಲ್ಲ ನಿಮ್ಮಂತೆ ಎಲ್ಲಿ ಬೇಕೋ ಅಲ್ಲಿ ಬ್ರೋಕರ್ ಕೆಲಸ ಮಾಡುತ್ತಾ ಜೀವನ ಮಾಡುತ್ತಿಲ್ಲ. ಅದರ ಅವಶ್ಯಕತೆನೂ ನನಗಿಲ್ಲ ಎಂದು ಕಿಡಿಕಾರಿದರು.

ವೃತ್ತಿಯಲ್ಲಿ ವಕೀಲನಾಗಿದ್ದು, ಯುಕ್ತಿಯಲ್ಲಿಯೂ ನಿಮ್ಮನ್ನು ಸಾವಿರ ಪಟ್ಟು ಮೀರಿಸುವಂತಹ ಶಕ್ತಿ ನನಗೆ ಭಗವಂತ ಕೊಟ್ಟಿದ್ದಾನೆ ಆ ಯುಕ್ತಿಯನ್ನು ನಾನು ಒಳ್ಳೆಯ ಕೆಲಸಕ್ಕೆ ಉಪಯೋಗಿಸುತ್ತೇನೆ ಬಕೆಟ್ ಹಿಡಿಯೋ ಕೆಲಸಕ್ಕೆ ಬಳಸಲ್ಲ. ಹೀಗಾಗಿ ನಿಮ್ಮ ನೈತಿಕತೆ ಹಾಗೂ ಗುಣ ಅಲ್ಲಿಯ ಜನಕ್ಕೆ ಗೊತ್ತಾಗಿದೆ. ನೀವು ಬಿಜೆಪಿ ಪಕ್ಷದ ಸದಸ್ಯನಾಗಿದ್ದುಕೊಂಡು ಕಾಂಗ್ರೆಸ್ ಜೊತೆ ಕೈ ಜೋಡಿಸುತ್ತಿದ್ದೀರಿ. ಬ್ಲ್ಯಾಕ್ ಮೇಲ್ ಶಿವರಾಮೇಗೌಡ ಎಂಬುದು ನಿಮಗೆ ಅನ್ವಯಿಸುತ್ತದೆ ಎಂದು ವಾಗ್ದಾಳಿ ನಡೆಸಿ, ಮಾಜಿ ಸಂಸದರಿಗೆ ಎಚ್ಚರಿಕೆ ಕೊಟ್ಟರು.

ಎಚ್.ಡಿ.ರೇವಣ್ಣಗೆ ಸಿಗದ ಜಾಮೀನು; ವಿಚಾರಣೆ ಮುಂದಕ್ಕೆ

ಎಸ್‌ಐಟಿಗೆ ನೋಟಿಸ್ ನೀಡಿದ ನ್ಯಾಯಾಲಯ

ಬೆಂಗಳೂರು, ಮೇ 7– ಮಹಿಳೆಯೊಬ್ಬರ ಅಪಹರಣ ಪ್ರಕರಣದ ಆರೋಪಿಯಾಗಿ ಸದ್ಯ ವಿಶೇಷ ತನಿಖಾ ದಳದ (ಎಸ್‌ಐಟಿ) ಬಂಧನದಲ್ಲಿರುವ ಜೆಡಿಎಸ್ ಶಾಸಕ ಎಚ್‌ಡಿ ರೇವಣ್ಣ ಸಲ್ಲಿಸಿದ್ದ ಜಾಮೀನು ಅರ್ಜಿಯ ವಿಚಾರಣೆಯನ್ನು ಮುಂದೂಡಿದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ, ಈ ಸಂಬಂಧ ಎಸ್‌ಐಟಿಗೆ ನೋಟಿಸ್ ಜಾರಿ ಮಾಡಿದೆ.



ಮಹಿಳೆಯೊಬ್ಬರನ್ನು ಅಪಹರಿಸಿದ ಆರೋಪದ ಮೇಲೆ 66 ವರ್ಷದ ಮಾಜಿ ಸಚಿವರನ್ನು ಎಸ್‌ಐಟಿ ಶನಿವಾರ ಬಂಧಿಸಿದ್ದು, ಮೇ 8ರವರೆಗೆ ಪೊಲೀಸ್ ಕಸ್ಟಡಿಗೆ ನೀಡಿದೆ. ನ್ಯಾಯಾಲಯ ಶನಿವಾರ ಅವರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ತಿರಸ್ಕರಿಸಿತ್ತು.

ಈ ಕುರಿತಂತೆ ಎಚ್‌ಡಿ ರೇವಣ್ಣ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಜನ ಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್, ಆರೋಪಿ ಪೊಲೀಸ್ ಕಸ್ಟಡಿಯಲ್ಲಿ ಇರುವಾಗ ಆತ ಜಾಮೀನು ಕೋರಿ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಬಹುದೇ ಎಂಬ ಬಗ್ಗೆ ಆಕ್ಷೇಪಣೆ ಸಲ್ಲಿಸಿ ಎಂದು ಎಸ್‌ಐಟಿಗೆ ಆದೇಶಿಸಿ ನೋಟಿಸ್ ಜಾರಿ ಮಾಡಿದರು. ವಿಚಾರಣೆಯನ್ನು ಬುಧವಾರ (ಮೇ 8) ಬೆಳಗ್ಗೆ 11 ಗಂಟೆಗೆ ಮುಂದೂಡಿದರು.

ವಿಚಾರಣೆ ವೇಳೆ ಅರ್ಜಿದಾರ ರೇವಣ್ಣ ಪರ ಹಾಜರಾಗಿದ್ದ ಹೈಕೋರ್ಟ್ ಹಿರಿಯ ವಕೀಲ ಸಿವಿ ನಾಗೇಶ್, ಆರೋಪಿಗೆ ಜಾಮೀನು ನೀಡಲು ಸಾಧ್ಯವಿರುವ ಕಾನೂನಿನ ಅಂಶಗಳು ಹಾಗೂ ಸುಪ್ರೀಂಕೋರ್ಟ್ ತೀರ್ಪಿನ ಪೂರ್ವ ನಿದರ್ಶನಗಳನ್ನು ವಿವರಿಸಿದರು.

ಏಪ್ರಿಲ್ 29 ರಂದು ಮಹಿಳೆಯೊಬ್ಬರನ್ನು ಅಪಹರಿಸಿದ ಆರೋಪದ ಮೇಲೆ ರೇವಣ್ಣ ಮತ್ತು ಅವರ ಆಪ್ತ ಸತೀಶ್ ಬಾಬಣ್ಣ ವಿರುದ್ಧ ಗುರುವಾರ ರಾತ್ರಿ ಪ್ರಕರಣ ದಾಖಲಾಗಿದೆ. ಹಾಸನ ಸಂಸದ ಪ್ರಜ್ವಲ್ ರೇವಣ್ಣ ತನ್ನ ತಾಯಿಗೆ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ಆರೋಪಿಸಿ ಮಹಿಳೆಯ ಪುತ್ರ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಾಗಿದೆ. ಬಾಬಣ್ಣನನ್ನು ಎಸ್‌ಐಟಿ ಕಸ್ಟಡಿಗೆ ಪಡೆದುಕೊಂಡಿದೆ.

ಮುಂದಿನ 24 ಗಂಟೆಯಲ್ಲಿ ಮೈಸೂರು, ಮಂಡ್ಯ, ಚಾಮರಾಜನಗರದಲ್ಲಿ ಭಾರಿ ಮಳೆ

• ಹವಾಮಾನ ಇಲಾಖೆ ಮಾಹಿತಿ • ಭಾರಿ ಗಾಳಿ, ಗುಡುಗು ಸಹಿತ ಮಳೆ • ರೈತರ ಮೊಗದಲ್ಲಿ ಮಂದಹಾಸ • ಬರಗಾಲದಿಂದ ಮುಕ್ತಿ ಸಿಗುವ ಸಂತಸ

ಮೈಸೂರು, ಮೇ 7(ಬಿಎಲ್‌ಯು)– ಮುಂದಿನ 24 ಗಂಟೆಗಳ ಅವಧಿಯಲ್ಲಿ ಮೈಸೂರು, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಗಂಟೆಗೆ ಸುಮಾರು 40 ರಿಂದ 50 ಕಿಲೋ ಮೀಟರ್ ವೇಗದಲ್ಲಿ ಗಾಳಿ ಬೀಸಲಿದೆ. ಬಾರೀ ಗಾಳಿ ಜೊತೆಗೆ ಗುಡುಗು ಸಹಿತ ಬಾರೀ ಮಳೆ ಬೀಳಲಿದೆ ಎಂದು ಹೇಳಿದೆ.

ಮೈಸೂರಿನಲ್ಲಿ ಇಂದು ಮುಂಜಾನೆ ಕೂಡ ಬಾರೀ ಮಳೆಯಾಗಿದೆ. ಮುಂಜಾನೆ ಸುಮಾರು 2 ಗಂಟೆಗೆ ಆರಂಭವಾದ ಮಳೆ 5 ಗಂಟೆ ತನಕ ನಿರಂತರವಾಗಿ ಸುರಿದಿದೆ. ಮೈಸೂರು ಜಿಲ್ಲೆಯಲ್ಲಿ 15.5 ಮಿಲಿ ಮೀಟರ್ ಮಳೆಯಾಗಿದೆ.

ಮೈಸೂರು ಜಿಲ್ಲೆಯಲ್ಲಿ ನಿನ್ನೆ ತಾಲೂಕುವಾರು ಮಳೆಯಾಗಿರುವ ಬಗ್ಗೆ ಹವಾಮಾನ ಇಲಾಖೆ ಅಂಕಿ–ಅಂಶಗಳ ವಿವರ ನೀಡಿದೆ. ಮೈಸೂರು ನಗರದಲ್ಲಿ 26.7 ಮಿಲಿ ಮೀಟರ್, ಹೆಚ್.ಡಿ. ಕೋಟೆಯಲ್ಲಿ 5.9 ಮಿಲಿ ಮೀಟರ್, ಹುಣಸೂರಿನಲ್ಲಿ 9.9 ಮಿಲಿ ಮೀಟರ್, ಕೆ.ಆರ್.ನಗರದಲ್ಲಿ 1.1 ಮಿಲಿ ಮೀಟರ್, ನಂಜನಗೂಡಿನಲ್ಲಿ 42.1 ಮಿಲಿ ಮೀಟರ್, ಪಿರಿಯಾಪಟ್ಟಣದಲ್ಲಿ 0.6 ಮಿಲಿ ಮೀಟರ್, ಟಿ.ನರಸೀಪುರದಲ್ಲಿ 27.3 ಮಿಲಿ ಮೀಟರ್, ಸರಗೂರಿನಲ್ಲಿ 5.0 ಮಿಲಿ ಮೀಟರ್ ಮಳೆಯಾಗಿದೆ. ಆದರೆ ಮೈಸೂರು ಜಿಲ್ಲೆಯ ಸಾಲಿಗ್ರಾಮ ತಾಲೂಕಿನಲ್ಲಿ ಸ್ವಲ್ಪವೂ ಮಳೆಯಾಗಿಲ್ಲ ಎಂದು ತಿಳಿಸಿದೆ. ಪ್ರತಿದಿನ ಮಳೆಯಾಗುತ್ತಿರುವುದು ರೈತರ ಮೊಗದಲ್ಲಿ ಮಂದಹಾಸ ಮೂಡಿಸಿದೆ. ರೈತಾಪಿ ವರ್ಗ ಕೃಷಿ ಚಟುವಟಿಕೆ ಆರಂಭಿಸಿದೆ. ಪೂರ್ವ ಮುಂಗಾರು ಶುಭಾರಂಭಗೊಂಡಿರುವ ಕಾರಣ ಕಳೆದ ವರ್ಷದಂತೆ ಈ ಬಾರಿ ಬರಗಾಲ ಬರುವುದಿಲ್ಲ ಎಂಬ ವಿಶ್ವಾಸದಲ್ಲಿ ರೈತರಿದ್ದಾರೆ.

ಅಕ್ಕನ ಮನೆಗೆ ಕನ್ನ ಹಾಕಿದ ತಂಗಿ; 50 ಲಕ್ಷ ನಗದು, ಚಿನ್ನಾಭರಣ ಕದ್ದು ಪರಾರಿ

ಬೆಂಗಳೂರು, ಮೇ 7: ನಾವು ಹಬ್ಬಕ್ಕಾಗಿ ಊರಿಗೆ ಹೋಗುತ್ತಿದ್ದು, ನೀನು ನಮ್ಮ ಮನೆಯಲ್ಲಿಯೇ ಉಳಿದುಕೊಂಡು ಜವಾಬ್ದಾರಿ ನೋಡಿಕೋ ಎಂದು ಹೇಳಿ ಹೋದ ಅಕ್ಕನ ಮನೆಗೆ ಚಾಲಾಕಿ ತಂಗಿ ಕನ್ನ ಹಾಕಿದ್ದಾಳೆ. ಬರೋಬ್ಬರಿ 50 ಲಕ್ಷ ರೂ. ನಗದು ಹಾಗೂ ಚಿನ್ನಾಭರಣವನ್ನು ಕದ್ದು ಪರಾರಿ ಆಗಿದ್ದಾಳೆ.

ಆಕೆಯ ಹೆಸರು ಉಮಾ. ಕೆಂಗೇರಿ ಪೊಲೀಸರಿಂದ ಆಕೆಯ ಬಂಧನವಾಗಿದೆ. ಅಕ್ಕ ಊರ ಹಬ್ಬಕ್ಕೆ ಹೋಗುವಾಗ ತಂಗಿಯನ್ನೂ ಕರೆದಿದ್ದಾಳೆ. ಆದರೆ, ನಾನು ಕೆಲಸವನ್ನು ಬಿಟ್ಟು ಬರುವುದಕ್ಕೆ ಆಗೊಲ್ಲ, ನೀನು ಹೋಗಿ ಬಾ ಎಂದು ಕಳಿಸಿದ್ದಾಳೆ. ಸರಿ ನೀನು ರಾತ್ರಿ ವೇಳೆ ನಮ್ಮ ಮನೆಯಲ್ಲಿ ಬಂದು ಮಲಗು ಎಂದು ಮನೆಯ ಕೀ ಕೊಟ್ಟು ಹೋಗಿದ್ದಾರೆ. ರಾತ್ರಿ ಅಕ್ಕನ ಮನೆಯಲ್ಲಿ ಮಲಗಲು ಬಂದಿದ್ದಾಳೆ. ಮನೆಯಲ್ಲಿ ಹಣ ಹಾಗೂ ಚಿನ್ನಾಭರಣ ಇರುವ ಬೀರುವನ್ನು ತೆಗೆದು ನೋಡಿದ್ದಾಳೆ. ಅದರಲ್ಲಿದ್ದ ಕಂತೆ, ಕಂತೆ ನೋಟುಗಳು ಹಾಗೂ ಚಿನ್ನಾಭರಣವನ್ನು ಕದ್ದುಕೊಂಡು ಹೋಗಿದ್ದಾಳೆ. ಹಬ್ಬಕ್ಕೆಂದು ಊರಿಗೆ ತೆರಳಿದ್ದ ಮನೆಯವರು ವಾಪಸ್ ಬಂದಾಗ ಬೀರು ತೆಗೆದಿರುವುದು ಗಮನಕ್ಕೆ ಬಂದಿದೆ. ಅದರಲ್ಲಿದ್ದ ಹಣ ಮತ್ತು ಚಿನ್ನಾಭರಣ ಪರಿಶೀಲನೆ ಮಾಡಿದಾಗ ಕಳ್ಳತನ ಆಗಿರುವುದು ತಿಳಿದಿದೆ. ಸುಮಾರು 50ಲಕ್ಷ ರೂ.ಗಿಂತ ಅಧಿಕ ಹಣ ಹಾಗೂ ಚಿನ್ನಾಭರಣ ಕಳ್ಳತನವಾಗಿದೆ ಎಂದು ಕೂಡಲೇ ಕೆಂಗೇರಿ ಪೊಲೀಸ್ ಠಾಣೆಗೆ ತೆರಳಿ ದೂರು ದಾಖಲಿಸಿದ್ದಾರೆ. ಇನ್ನು ಪ್ರಕರಣದ ತನಿಖೆ ಆರಂಭಿಸಿದ ಪೊಲೀಸರಿಗೆ ಶಾಕಿಂಗ್ ವಿಚಾರ ತಿಳಿದುಬಂದಿದೆ.

ಅಕ್ಕನ ಮನೆಯಲ್ಲಿ ಲಕ್ಷಾಂತರ ರೂಪಾಯಿ ಕಳ್ಳತನ ಆಗಿದ್ದರೂ ಆರಾಮಾಗಿದ್ದ ಉಮಾ ಬಗ್ಗೆ ಅಕ್ಕ ಅನುಮಾನ ವ್ಯಕ್ತಪಡಿಸಿದ್ದಾಳೆ. ಮನೆಯಲ್ಲಿ ಕಳ್ಳತನವಾಗಿದೆ ಎಂದು ದೂರು ಕೊಟ್ಟ ವ್ಯಕ್ತಿ ಕೂಡ ನಾದಿನಿ (ಪತ್ನಿಯ ತಂಗಿ) ಕಳ್ಳತನ ಮಾಡಿದ್ದಾಳೆಂಬ ಸುಳಿವನ್ನು ಪೊಲೀಸರಿಗೆ ಕೊಟ್ಟಿದ್ದಾರೆ.ಪೊಲೀಸರು ದೂರುದಾರನ ನಾದಿನಿ ಉಮಾಳನ್ನು ವಶಕ್ಕೆ ಪಡೆದು ವಿಚಾರಣೆ ಮಾಡಿದಾಗ ತಾನೇ ಕಳ್ಳತನ ಮಾಡಿರುವುದಾಗಿ ಒಪ್ಪಿಕೊಂಡಿದ್ದಾಳೆ. ಇಲ್ಲಿ ಆರೋಪಿತೆ ಉಮಾ ಅಕ್ಕನ ಮನೆಯ ಬೀರುವಿನ ನಕಲಿ ಕೀ ಮಾಡಿಸಿಕೊಂಡು, ಕಳ್ಳತನಕ್ಕೆ ಹಲವು ದಿನಗಳಿಂದ ಯೋಜನೆ ರೂಪಿಸಿದ್ದಳು ಎಂದು ತಿಳಿದುಬಂದಿದೆ. ಇನ್ನು ಅಕ್ಕ–ಬಾವ ಸೇರಿ ಮನೆಯವರೆಲ್ಲರೂ ಊರ ಹಬ್ಬಕ್ಕೆಂದು ತೆರಳಿದ್ದಾಗ ಸಮಯ ನೋಡಿ ಕಳ್ಳತನ ಮಾಡಿದ್ದಾಳೆ.

32 ಕೋಟಿ ಮೌಲ್ಯದ ಬಿಟ್ ಕಾಯಿನ್ ಕಳ್ಳತನ: ಹ್ಯಾಕರ್ ಶ್ರೀಕಿ ಮತ್ತೆ ಬಂಧನ

ಬೆಂಗಳೂರು: 60.6 ಬಿಟ್ ಕಾಯಿನ್ (ಸದ್ಯದ ಮಾರುಕಟ್ಟೆ ಮೌಲ್ಯ ರೂ. 32.48 ಕೋಟಿ) ಕಳ್ಳತನ ಪ್ರಕರಣ ಸಂಬಂಧ ತುಮಕೂರು ಸೆನ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ಆರೋಪಿ ಶ್ರೀಕೃಷ್ಣ ಅಲಿಯಾಸ್ ಶ್ರೀಕಿಯನ್ನು ವಿಶೇಷ ತನಿಖಾ ದಳದ (ಎಸ್‌ಐಟಿ) ಅಧಿಕಾರಿಗಳು ಬಂಧಿಸಿದ್ದಾರೆ.



ಜಯನಗರದ ಶ್ರೀಕೃಷ್ಣ, ಅಂತರರಾಷ್ಟ್ರೀಯ ಹ್ಯಾಕರ್ ಆಗಿ ಗುರುತಿಸಿಕೊಂಡಿದ್ದಾನೆ. 2017ರಂದು ತುಮಕೂರಿನ ಉನೊ ಕಾಯಿನ್ ಕಂಪನಿಯ ಸರ್ವರ್‌ನಲ್ಲಿದ್ದ 60.6 ಬಿಟ್ ಕಾಯಿನ್‌ಗಳು ಕಳ್ಳತನ ಆಗಿದ್ದವು. ಈ ಪ್ರಕರಣದಲ್ಲಿ ಶ್ರೀಕಿ ಪಾತ್ರವಿರುವ ಮಾಹಿತಿ ಇತ್ತು. ವಿಚಾರಣೆಗೆ ಹಾಜರಾಗುವಂತೆ ಶ್ರೀಕಿಗೆ ನೋಟಿಸ್ ನೀಡಲಾಗಿತ್ತು. ಆದರೆ, ಆತ ಗೈರಾಗಿದ್ದ. ಇದೇ ಕಾರಣಕ್ಕೆ ಆತನನ್ನು ಬಂಧಿಸಲಾಗಿದೆ ಎಂದು ಎಸ್‌ಐಟಿ ಮೂಲಗಳು ಹೇಳಿವೆ. ಬಿಟ್ ಕಾಯಿನ್ ಕಳ್ಳತನಕ್ಕೆ ಸಂಬಂಧಪಟ್ಟಂತೆ ಕಂಪನಿಯ ಸಹ ಸಂಸ್ಥಾಪಕ ಬಿ.ವಿ.ಹರೀಶ್ ಅವರು ತುಮಕೂರಿನ ಸೆನ್ (ಸೈಬರ್ ಆರ್ಥಿಕ ಹಾಗೂ ಮಾದಕ ದ್ರವ್ಯ ನಿಯಂತ್ರಣ) ಠಾಣೆಗೆ ದೂರು ನೀಡಿದ್ದರು. ಈ ಪ್ರಕರಣದ ತನಿಖೆಯನ್ನು ಎಸ್‌ಐಟಿಗೆ ವಹಿಸಲಾಗಿತ್ತು.

ಬರೋಬ್ಬರಿ 810 ಕೆ.ಜಿ ಬಂಗಾರ ಸಾಗಿಸುತ್ತಿದ್ದ ಟ್ರಕ್ ಅಪಘಾತ

ಚೆನ್ನೈ (ತಮಿಳುನಾಡು): ಕೊಯಮತ್ತೂರಿನಿಂದ ಸೇಲಂಗೆ ಚಿನ್ನಾಭರಣ ಸಾಗಿಸುತ್ತಿದ್ದ ವಾಹನವೊಂದು ಅಪಘಾತಕ್ಕೀಡಾಗಿದೆ. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ ಚಿತ್ತೋಡ್ ಪೊಲೀಸರು ಸಶಸ್ತ್ರ ಪೊಲೀಸರ ಮೂಲಕ ಪರ್ಯಾಯ ವಾಹನದಲ್ಲಿ ಚಿನ್ನಾಭರಣವನ್ನು ಸೇಲಂಗೆ ಕಳುಹಿಸಿದ್ದಾರೆ.

ಚಿತ್ತೋಡ್ ಪೊಲೀಸರು ನೀಡಿದ ಮಾಹಿತಿ ಪ್ರಕಾರ, ಸೇಲಂ – ಕೊಯಮತ್ತೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಸಿಕ್ವೆಲ್ ಲಾಜಿಸ್ಟಿಕ್ಸ್ ಹೆಸರಿನ ಟ್ರಕ್ ಕೊಯಮತ್ತೂರಿನಿಂದ ಸೇಲಂಗೆ ತೆರಳುತ್ತಿತ್ತು. ಟ್ರಕ್‌ನಲ್ಲಿ ಚಿನ್ನಾಭರಣಗಳು ಮತ್ತು ವಿವಿಧ ಖಾಸಗಿ ಆಭರಣ ಮಳಿಗೆಗಳಿಗೆ ಕಳುಹಿಸಲು ಚಿನ್ನದ ಆಭರಣಗಳು, ಗಟ್ಟಿ ಸೇರಿದಂತೆ ಇತರ ಚಿನ್ನದ ಸಾಮಗ್ರಿಗಳನ್ನು ತುಂಬಲಾಗಿತ್ತು ಈ ಟ್ರಕ್‌ನಲ್ಲಿ ಒಂದಲ್ಲ ಎರಡಲ್ಲ, ಲಕ್ಷವೂ ಅಲ್ಲ, ನೂರಾರು ಕೋಟಿ ಮೌಲ್ಯದ ಬಂಗಾರ ಇತ್ತು. ಸುಮಾರು 810 ಕೆಜಿ ತೂಕದ ಈ ಚಿನ್ನ ಟ್ರಕ್‌ನಲ್ಲಿತ್ತು. ಇದರ ಒಟ್ಟಾರೆ ಮೌಲ್ಯ ಸುಮಾರು 666 ಕೋಟಿ ರೂ ಎಂದು ಅಂದಾಜಿಸಲಾಗಿದೆ.

ಚಾಲಕ ಶಶಿಕುಮಾರ್ (29) ಲಾರಿ ಚಾಲನೆ ಮಾಡುತ್ತಿದ್ದು, ಬಂದೂಕು ಹಿಡಿದ ಅಂಗರಕ್ಷಕ ಪಾಲ್ರಾಜ್ (40) ಮತ್ತು ಸಹಾಯಕ ನವೀನ್ (21) ಜೊತೆಗಿದ್ದರು. ಸೇಲಂ ಕಡೆಗೆ ಹೋಗುತ್ತಿದ್ದ ವಾಹನ ತಿರುವಿನಲ್ಲಿ ಪಲ್ಟಿಯಾಗಿದೆ. ಅಪಘಾತದಲ್ಲಿ ವಾಹನದ ಚಾಲಕ ಶಶಿಕುಮಾರ್ ಮತ್ತು ಭದ್ರತಾ ಸಿಬ್ಬಂದಿ ಪಾಲ್ರಾಜ್ ಗಾಯಗೊಂಡಿದ್ದಾರೆ. ಮಾಹಿತಿ ಪಡೆದ ಚಿತ್ತೋಡ್ ಪೊಲೀಸರು ತಕ್ಷಣ ಸ್ಥಳಕ್ಕೆ ಧಾವಿಸಿ ಚಾಲಕ ಶಶಿಕುಮಾರ್ ಮತ್ತು ಸೆಕ್ಯೂರಿಟಿ ಗಾರ್ಡ್ ಪಾಲ್ರಾಜ್ ಅವರನ್ನು ರಕ್ಷಿಸಿ ಚಿಕಿತ್ಸೆಗಾಗಿ ಭವಾನಿ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ನಂತರ ರಾಷ್ಟ್ರೀಯ ಹೆದ್ದಾರಿಯಲ್ಲಿ ಪಲ್ಟಿಯಾದ ಸರಕು ಸಾಗಣೆ ವಾಹನವನ್ನು ಚಿನ್ನಾಭರಣದೊಂದಿಗೆ ಠಾಣೆಗೆ ತೆಗೆದುಕೊಂಡು ಹೋಗಿದ್ದಾರೆ.

ಆ ಬಳಿಕ ವಾಣಿಜ್ಯ ತೆರಿಗೆ ಅಧಿಕಾರಿಗಳ ತಪಾಸಣೆ ನಡೆಸಿದ್ದಾರೆ. ಅಧಿಕಾರಿಗಳ ತಪಾಸಣೆ ಬಳಿಕ ಬದಲಿ ವಾಹನದಲ್ಲಿ ಶಸ್ತ್ರಸಜ್ಜಿತ ಪೊಲೀಸರೊಂದಿಗೆ ಚಿನ್ನಾಭರಣವನ್ನು ಸೇಲಂಗೆ ಕಳುಹಿಸಿಕೊಟ್ಟಿದ್ದಾರೆ. ಅಪಘಾತದ ಕುರಿತು ಚಿತ್ತೋಡ್ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಬೋಧಿ ವೃಕ್ಷ ಸಂಸ್ಥೆಗೆ ಪರಿಸರವಾದಿ ಪ್ರಶಸ್ತಿ



ಮೈಸೂರು,ಮೇ 7(ಪಿಎಂ)– ಕಲಬುರಗಿ ಜಿಲ್ಲೆಯ ಆಳಂದ್ ತಾಲೂಕಿನ ಆಳಂದ್ ಫೌಂಡೇಷನ್ ವತಿಯಿಂದ 2024ನೇ ಸಾಲಿನ 'ಆದರ್ಶ ಪರಿಸರವಾದಿ ಪ್ರಶಸ್ತಿ'ಯನ್ನು ಮೈಸೂರಿನ ಬೋಧಿ ವೃಕ್ಷ ಸೇವಾ ಸಂಸ್ಥೆಗೆ ನೀಡಲಾಯಿತು.

ಕಳೆದ ಏ.24ರಂದು ಆಳಂದ್‌ನಲ್ಲಿನ ಎ.ವಿ.ಪಾಟೀಲ್ ಪದವಿ ಕಾಲೇಜು ಆವರಣದಲ್ಲಿ ನಡೆದ ಸಮಾರಂಭದಲ್ಲಿ ಬೋಧಿ ವೃಕ್ಷ ಸಂಸ್ಥೆಯ ಅಧ್ಯಕ್ಷ ಮೈಸೂರ್ ಸತೀಶ್‌ಚಂದ್ರ ಅವರಿಗೆ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಪರಿಸರ ಸಂರಕ್ಷಣೆ ಕುರಿತು ವಿವಿಧ ಸೇವಾ ಚಟುವಟಿಕೆ ನಡೆಸುವ ಜೊತೆಗೆ ಸಮಾಜದಲ್ಲಿ ಅರಿವು ಮೂಡಿಸುವ ಸಂಸ್ಥೆಯ ಕಾರ್ಯ ಗುರುತಿಸಿ ಆಳಂದ್ ಫೌಂಡೇಶನ್ ಆದರ್ಶ ಪರಿಸರವಾದಿ ಪ್ರಶಸ್ತಿ ನೀಡಿರುವುದು ಸಂಸ್ಥೆಯ ಮತ್ತಷ್ಟು ಸೇವಾ ಕಾರ್ಯಕ್ಕೆ ಉತ್ತೇಜನ ದೊರೆತಿದೆ ಎಂದು ಬೋಧಿ ವೃಕ್ಷ ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

ಇಂದು ಶ್ರೀನಿವಾಸ ಪ್ರಸಾದರಿಗೆ ಕೆಆರ್ ಕ್ಷೇತ್ರದ ಬಿಜೆಪಿಯಿಂದ ಶ್ರದ್ಧಾಂಜಲಿ

ಮೈಸೂರು, ಮೇ 7– ಕೃಷ್ಣರಾಜ ಕ್ಷೇತ್ರದ ಬಿಜೆಪಿ ವತಿಯಿಂದ ದಿವಂಗತ ವಿ.ಶ್ರೀನಿವಾಸ ಪ್ರಸಾದ್ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಮೈಸೂರಿನ ಜೆಎಲ್‌ಬಿ ರಸ್ತೆಯ ಶ್ರೀ ಆರಾಧ್ಯ ಮಹಾಸಭಾದಲ್ಲಿ ಬುಧವಾರ ಸಂಜೆ 5ಕ್ಕೆ ಹಮ್ಮಿಕೊಳ್ಳಲಾಗಿದೆ. ಸಂಸದ ಪ್ರತಾಪ್ ಸಿಂಹ, ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ಮಾಜಿ ಶಾಸಕ ಬಿ.ಹರ್ಷವರ್ಧನ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದು, ಮಾಜಿ ಸಚಿವ, ಹಾಲಿ ಶಾಸಕ ಎಸ್.ಸುರೇಶ್ ಕುಮಾರ್, ಸಾಮಾಜಿಕ ಚಿಂತಕ, ಆರ್‌ಎಸ್‌ಎಸ್ ಮುಖಂಡ ಮಾ.ವೆಂಕಟರಾಮ್, ಬಿಜೆಪಿ ರಾಜ್ಯ ವಕ್ತಾರ ಛಲವಾದಿ ನಾರಾಯಣಸ್ವಾಮಿ, ಬಿಜೆಪಿ ಮೈಸೂರು ನಗರಾಧ್ಯಕ್ಷ ಎಲ್.ನಾಗೇಂದ್ರ ಹಾಗೂ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ನುಡಿ ನಮನ ಸಲ್ಲಿಸಲಿದ್ದಾರೆ ಎಂದು ಬಿಜೆಪಿ ಕೃಷ್ಣರಾಜ ಕ್ಷೇತ್ರದ ಅಧ್ಯಕ್ಷ ಯು.ಜಿ.ಗೋಪಾಲರಾಜೇ ಅರಸ್ ತಿಳಿಸಿದ್ದಾರೆ.



ಎಸ್‌ಐಟಿ ಬಗ್ಗೆ ಅನುಮಾನ ಬೇಡ

ಬೆಂಗಳೂರು: ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಪ್ರಕರಣದಲ್ಲಿ ನಡೆಯುತ್ತಿರುವ ಎಸ್‌ಐಟಿ ತನಿಖೆ ಬಗ್ಗೆ ಅನುಮಾನ ಬೇಡ. ತನಿಖೆ ಸರಿಯಾಗಿ ನಡೆಯುತ್ತಿದೆ ಎಂದು ಗೃಹ ಸಚಿವ ಪರಮೇಶ್ವರ್ ಹೇಳಿದ್ದಾರೆ.



ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರಕ್ಕೆ ಒಂದು ಜವಾಬ್ದಾರಿ ಇದೆ. ಇಂತಹ ಘಟನೆಯನ್ನು ಹಗುರವಾಗಿ ತೆಗೆದುಕೊಳ್ಳಲು ಸಾಧ್ಯವಿಲ್ಲ. ಈ ವಿಚಾರ ಕುಮಾರಸ್ವಾಮಿ ಅವರಿಗೂ ಗೊತ್ತು. ಅವರು ಮುಖ್ಯಮಂತ್ರಿ ಆಗಿದ್ದವರು ಎಸ್‌ಐಟಿಯಂತಹ ಕಾನೂನಾತ್ಮಕ ಸಂಸ್ಥೆ ಮೇಲೆ ಅನುಮಾನ ಪಟ್ಟರೆ ಹೇಗೆ? ಅವರು ಇಂತಹ ಸಮಯದಲ್ಲಿ ಕೋಪ ಹಾಗೂ ಅಸಮಾಧಾನಗೊಳ್ಳುವುದು ಸಹಜ. ಪೆನ್‌ಡ್ರೈವ್ ಮೂಲದ ಬಗ್ಗೆ ಎಸ್‌ಐಟಿ ಗಮನಹರಿಸುತ್ತದೆ ಎಂದಿದ್ದಾರೆ.

ದೇವರಾಜೇಗೌಡ ಅವರ ಅರೋಪಕ್ಕೆ ನಾವು ಏನು ಹೇಳಲು ಸಾಧ್ಯವಿಲ್ಲ. ಎಲ್ಲವನ್ನೂ ಎಸ್‌ಐಟಿಯವರು ಗಮನಿಸುತ್ತಾರೆ. ಡಿಕೆಶಿ ಹಾಗೂ ಸರ್ಕಾರದ ವಿರುದ್ಧ ಆರೋಪ ಏನೇ ಮಾಡಿದರು ಎಸ್‌ಐಟಿ ತನಿಖೆಯಲ್ಲಿ ಗೊತ್ತಾಗುತ್ತದೆ ಎಂದು ಅವರು ಹೇಳಿದ್ದಾರೆ.

ಈ ವೀಡಿಯೋಗಳು ಕಾಂಗ್ರೆಸ್ ಮೈತ್ರಿ ಅವಧಿಯದ್ದು ಎಂದು ಪ್ರಧಾನಿ ಹೇಳಿದ್ದಾರೆ. ನೋಡೋಣ ಅದು ಯಾವ ಅವಧಿಯಲ್ಲಿ ಆಗಿದ್ದು, ಒಮ್ಮೆ ತನಿಖೆ ಮುಗಿದ ಮೇಲೆ ಅದು ಬಹಿರಂಗವಾಗುತ್ತದೆ. ಯಾವುದನ್ನು ಮುಚ್ಚಿಡಲು ಸಾಧ್ಯವಿಲ್ಲ. ಇನ್ನೂ ಬ್ಲೂ ಕಾರ್ನರ್ ನೋಟಿಸ್ ಸಿಬಿಐ ಹೊರಡಿಸಿರಬಹುದು. ಈ ಬಗ್ಗೆ ನಮಗೆ ಅವರು ಆ ಮಾಹಿತಿ ತಿಳಿಸಲ್ಲ ಎಂದಿದ್ದಾರೆ.

ಒಲಿಂಪಿಕ್ ಜ್ಯೋತಿ ಇಂದು ಫ್ರಾನ್ಸ್‌ಗೆ

ಪ್ಯಾರಿಸ್ (ಎಎಫ್‌ಪಿ): ಪ್ಯಾರಿಸ್ ಒಲಿಂಪಿಕ್ಸ್ ಕ್ರೀಡೆಗಳ ಭಾಗವಾಗಿ ಒಲಿಂಪಿಕ್ ಜ್ಯೋತಿ ಬುಧವಾರ ಬಂದರು ನಗರ ಮಾರ್ಸೆಗೆ ಬಂದಿಳಿಯಲಿದ್ದು, ಸುಮಾರು ಒಂದೂವರೆ ಲಕ್ಷ ಜನರು ಕಾರ್ಯಕ್ರಮಕ್ಕೆ ಸಾಕ್ಷಿಯಾಗುವ ನಿರೀಕ್ಷೆಯಿದೆ.



19ನೇ ಶತಮಾನದ ವ್ಯಾಪಾರಿ ಹಡಗು 'ಬೆಲೆಮ್'ನಲ್ಲಿ ಜ್ಯೋತಿ ಹಸ್ತಾಂತರ ಪ್ರಕ್ರಿಯೆ ನಡೆಯಲಿದೆ. ನಂತರ ಫ್ರಾನ್ಸ್‌ನಲ್ಲಿ ಮತ್ತು ಫ್ರೆಂಚ್ ನೇರ ಆಡಳಿತದ ದೇಶಗಳ ರಸ್ತೆಗಳಲ್ಲಿ ಒಟ್ಟು 12,000 ಕಿ.ಮೀ. (7,500 ಮೈಲಿ) ದೂರ ಒಲಿಂಪಿಕ್ ಜ್ಯೋತಿ ಯಾತ್ರೆ ಸಂಚರಿಸಲಿದೆ.

ಒಲಿಂಪಿಕ್ಸ್ ಆರಂಭಕ್ಕೆ ಇನ್ನು 79 ದಿನಗಳಷ್ಟೇ ಬಾಕಿಯಿದೆ. ನಾವು ದೀರ್ಘ ಕಾಲದಿಂದ ಕಾಯುತ್ತಿದ್ದ ಕಾರ್ಯಕ್ರಮ ಇದಾಗಿದೆ ಎಂದು ಮುಖ್ಯ ಸಂಘಟಕರಾದ ಟೋನಿ ಎಸ್ಟಾಂಗೆ ಅವರು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದ್ದಾರೆ. ಒಲಿಂಪಿಕ್ಸ್ ನೂರು ವರ್ಷಗಳ ನಂತರ ಪ್ಯಾರಿಸ್‌ಗೆ ಹಿಂತಿರುಗುತ್ತಿದೆ. ಈ ಹಿಂದೆ 1924 ಮತ್ತು 1900ರಲ್ಲಿ ನಡೆದ ಕ್ರೀಡೆಗಳ ಆತಿಥ್ಯವನ್ನು ಪ್ಯಾರಿಸ್ ವಹಿಸಿತ್ತು. ಫ್ರಾನ್ಸ್‌ನವರೇ ಆದ ಶ್ರೀಮಂತ ಮುತ್ಸದ್ಧಿ ಪಿಯರೆ ಡಿ ಕೂಬರ್ತಿ (1863–1937) ಅವರನ್ನು ಆಧುನಿಕ ಒಲಿಂಪಿಕ್ಸ್ ಜನಕ ಎನ್ನಲಾಗುತ್ತಿದೆ. 12 ದಿನಗಳ ಹಿಂದೆ ಗ್ರೀಸ್‌ನಿಂದ ಹೊರಟ ವಾಣಿಜ್ಯ ನೌಕೆ ಬೆಲೆಮ್, ಬುಧವಾರ ಮಾರ್ಸೆಗೆ ತಲುಪಲಿದೆ. ಬೆಲೆಮ್ ನೌಕೆ ಬಂದರು ಪ್ರವೇಶಿಸುವಾಗ ಇತರ 1000 ದೋಣಿಗಳು ಜೊತೆ ಯಾಗಲಿವೆ. ಸುಮಾರು ಒಂದೂವರೆ ಲಕ್ಷ ಆಸಕ್ತರು ಈ ವೇಳೆ ಸೇರುವ ನಿರೀಕ್ಷೆಯನ್ನು ಸಂಘಟಕರು ಹೊಂದಿದ್ದಾರೆ. ಸಿಡಿಮದ್ದುಗಳ ಪ್ರದರ್ಶನದ ಜೊತೆ ವಾದ್ಯಗೋಷ್ಠಿಗಳನ್ನು ಹಮ್ಮಿಕೊಳ್ಳಲಾಗಿದೆ. ಫ್ರೆಂಚ್ ಟಿ.ವಿಯಲ್ಲಿ ಇದರ ನೇರ ಪ್ರಸಾರ ಇರಲಿದೆ. ಒಲಿಂಪಿಕ್ಸ್ ಸಂದರ್ಭದಲ್ಲಿ ಮಾರ್ಸೆಯಲ್ಲಿ ಸೇಲಿಂಗ್ ಸ್ಪರ್ಧೆಗಳು ನಡೆಯಲಿವೆ. ಭದ್ರತಾ ವಿಷಯದಲ್ಲೂ ಇದು ಫ್ರಾನ್ಸ್‌ಗೆ ಪರೀಕ್ಷೆಯಾಗಿದೆ. ಇಡೀ ಕಾರ್ಯಕ್ರಮಕ್ಕೆ 6000 ಮಂದಿ ಭದ್ರತಾ ಸಿಬ್ಬಂದಿ ಕಣ್ಗಾವಲು ಇದೆ.

ಸಾಮಾಜಿಕ ನ್ಯಾಯದ ಹರಿಕಾರ ಶ್ರೀನಿವಾಸ ಪ್ರಸಾದ್

ನಂಜನಗೂಡು, ಮೇ 7– ದೀನ ದಲಿತರು ಹಾಗೂ ತಳ ಸಮುದಾಯಗಳ ಧ್ವನಿಯಾಗಿದ್ದ ಶ್ರೀನಿವಾಸ ಪ್ರಸಾದ್, ತಾವು ನಂಬಿದ ತತ್ವ, ಆದರ್ಶಗಳಿಗೆ ಬದ್ಧರಾಗಿ ರಾಜಕೀಯ ನಡೆಸಿದ ಮುತ್ಸದ್ದಿ ರಾಜಕಾರಣಿ ಎಂದು ಬಿಜೆಪಿ ಮುಖಂಡ ಚಿಕ್ಕರಂಗನಾಯಕ ತಿಳಿಸಿದರು.

ನಗರದ ಗೌರಿಘಟ್ಟ ಬೀದಿಯ ನಾಯಕರ ಸಮುದಾಯ ಭವನದಲ್ಲಿ ಮಂಗಳವಾರ ತಾಲೂಕು ನಾಯಕರ ಸಂಘದಿಂದ ಆಯೋಜಿಸಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿದ ಅವರು, ನಗರದ ಚಾಮರಾಜ ನಗರ ಬೈಪಾಸ್ ರಸ್ತೆಯಲ್ಲಿ ತಳ ಸಮುದಾಯದ 14 ಸಮಾಜಗಳಿಗೆ ನಿವೇಶನ ನೀಡಿ, ಸಮುದಾಯ ಭವನಗಳನ್ನು ನಿರ್ಮಿಸಿಕೊಟ್ಟ ಸಾಮಾಜಿಕ ನ್ಯಾಯದ ಹರಿಕಾರ ಶ್ರೀನಿವಾಸ ಪ್ರಸಾದ್ ಅವರು ನಮ್ಮ ಸಮುದಾಯದ ನನೆಗುದಿಗೆ ಬಿದ್ದಿದ್ದ ಗೌರಿಘಟ್ಟ ಬೀದಿಯ ವಾಲ್ಮೀಕಿ ಭವನ ನಿರ್ಮಿಸಿಕೊಟ್ಟರು. ನಮ್ಮ ಸಮುದಾಯದ ಲತಾ ಸಿದ್ದಶೆಟ್ಟಿ ಅವರನ್ನು ಜಿಪಂ ಅಧ್ಯಕ್ಷೆ, ಪಿ.ಶ್ರೀನಿವಾಸ್ ಅವರನ್ನು ನಗರಸಭೆ ಅಧ್ಯಕ್ಷರನ್ನಾಗಿ ಮಾಡಿದರು.


ನಂಜನಗೂಡಿನಲ್ಲಿ ನಾಯಕರ ಸಂಘದಿಂದ ವಿ.ಶ್ರೀನಿವಾಸಪ್ರಸಾದ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮೊದಲ ಬಾರಿಗೆ ಪೌರ ಕಾರ್ಮಿಕರನ್ನು ನಗರಸಭೆ ಅಧ್ಯಕ್ಷರನ್ನಾಗಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಡಿ.ಟಿ.ಜಯಕುಮಾರ್ ಅವರೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದ ಅವರು ದೇವೇಗೌಡ ನೇತೃತ್ವದ ಸರ್ಕಾರದಲ್ಲಿ ಡಿ.ಟಿ.ಜಯಕುಮಾರ್ ಅವರಿಗೆ ಸಚಿವ ಸ್ಥಾನ ತಪ್ಪಿದಾಗ ಹಠ ಬಿಡದೇ ಅವರನ್ನು ಸಚಿವರನ್ನಾಗಿ ಮಾಡಿದ್ದರು. ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಮೊದಲ ಬಾರಿಗೆ ಬಿಜೆಪಿಗೆ ಗೆಲುವನ್ನು ತಂದುಕೊಟ್ಟರು. ಚಾಮರಾಜನಗರ ಹಾಗೂ ಮೈಸೂರು ಜಿಲ್ಲೆಗಳ ಜನ ಅವರನ್ನು ಕಳೆದುಕೊಂಡು ತಬ್ಬಲಿಗಳಾಗಿದ್ದೇವೆ ಎಂದರು.

ಬಿಜೆಪಿ ರಾಜ್ಯ ಮುಖಂಡ ಸುಬ್ಬಣ್ಣ ಮಾತನಾಡಿ, ನಮ್ಮ ಸಮಾಜದ ಚಿಕ್ಕಮಾದು ಅವರಿಗೆ ಟಿಕೆಟ್ ನೀಡಿ ಶಾಸಕರನ್ನಾಗಿ ಮಾಡಿದವರು ಶ್ರೀನಿವಾಸ ಪ್ರಸಾದ್. ಶೋಷಿತರ ಬಗ್ಗೆ ಅವರು ಹೊಂದಿದ್ದ ಕಾಳಜಿ ಮರೆಯುವಂತಿಲ್ಲ. 6 ಬಾರಿ ಸಂಸದ, 2 ಬಾರಿ ಶಾಸಕರಾಗಿ 50 ವರ್ಷದ ರಾಜಕೀಯ ಜೀವನದಲ್ಲಿ ಶುದ್ಧ ಹಸ್ತರಾಗಿ ನಡೆದುಕೊಂಡವರು. ಅವರ ತತ್ವಾದರ್ಶಗಳನ್ನು ಇಂದಿನ ಯುವ ರಾಜಕಾರಣಿಗಳು ಮೈಗೂಡಿಸಿಕೊಂಡು ಅವರ ಹಾದಿಯಲ್ಲಿ ನಡೆಯಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ತಾಲೂಕು ಘಟಕದ ಅಧ್ಯಕ್ಷ ಬಂಗಾರಸ್ವಾಮಿ, ಖಜಾಂಚಿ ರಂಗಸ್ವಾಮಿ, ಕಾಂಗ್ರೆಸ್ ಎಸ್‌ಟಿ ವಿಭಾಗದ ರಾಜ್ಯ ಪ್ರಧಾನ ಕಾರ್ಯದರ್ಶಿ ದೊರೆಸ್ವಾಮಿ ನಾಯಕ, ಪಿ.ಶ್ರೀನಿವಾಸ್, ತಾಪಂ ಮಾಜಿ ಸದಸ್ಯರಾದ ಮಹದೇವ ನಾಯಕ, ಕೆ.ಡಿ.ಮಂಜು, ಮುಖಂಡರಾದ ನಾಗರಾಜು, ಸುರೇಂದ್ರ, ನಾಗರಾಜು, ಕುಮಾರ್, ಗೋವಿಂದರಾಜು, ರಂಗಸ್ವಾಮಿ ಉಪಸ್ಥಿತರಿದ್ದರು.

ಗೃಹಿಣಿಯ ಮಾಂಗಲ್ಯ ಸರ ಕಳವು

ತಿ.ನರಸೀಪುರ, ಮೇ 7– ದೇವರ ದರ್ಶನ ಪಡೆದು ಹಿಂತಿರುಗುತ್ತಿದ್ದ ಮಹಿಳೆಯ ಚಿನ್ನದ ಮಾಂಗಲ್ಯ ಸರವನ್ನು ದುಷ್ಕರ್ಮಿಗಳು ಕಿತ್ತುಕೊಂಡು ಪರಾರಿಯಾಗಿರುವ ಘಟನೆ ತಾಲೂಕಿನ ಉಕ್ಕಲಗೆರೆ ಗ್ರಾಮದ ಶ್ರೀಮಲ್ಲಿಕಾರ್ಜುನಸ್ವಾಮಿ ಬೆಟ್ಟದ ಸಮೀಪ ನಡೆದಿದೆ. ತಾಲೂಕಿನ ನಿಲಸೋಗೆ ಗ್ರಾಮದ ಗೃಹಿಣಿ ಅನಿತಾ ಮಾಂಗಲ್ಯ ಸರ ಕಳೆದುಕೊಂಡವರು.



ವಿವರ: ಅನಿತಾ ಹಾಗೂ ಈಕೆಯ ಸ್ನೇಹಿತೆ ನಮಿತಾ ತಮ್ಮ ದ್ವಿಚಕ್ರ ವಾಹನಗಳಲ್ಲಿ ಮಕ್ಕಳೊಂದಿಗೆ ಉಕ್ಕಲಗೆರೆಯ ಮಲ್ಲಿಕಾರ್ಜುನಸ್ವಾಮಿ ಬೆಟ್ಟಕ್ಕೆ ತೆರಳಿದ್ದರು. ಈ ವೇಳೆ ಬೆಟ್ಟದ ತಪ್ಪಲಿನಲ್ಲಿ ಕುಳಿತಿದ್ದ ಇಬ್ಬರು ದುಷ್ಕರ್ಮಿಗಳು ಇವರನ್ನು ಗಮನಿಸಿದ್ದಾರೆ. ಅನಿತಾ ಹಾಗೂ ನಮಿತಾ ದೇವರ ದರ್ಶನ ಪಡೆದು ಮಧ್ಯಾಹ್ನ 1 ಗಂಟೆ ಸಮಯದಲ್ಲಿ ಸೋಮನಾಥಪುರಕ್ಕೆ ತೆರಳಲು ಕೇತುಪುರ ಮಾರ್ಗವಾಗಿ ಬರುತ್ತಿದ್ದಾಗ, ಕೇತುಪುರ ರಸ್ತೆ ಸಮೀಪ ಮಾವಿನ ತೋಪನ್ನು ಕಂಡು ಮಾವಿನ ಹಣ್ಣು ಕೀಳಲು ನಮಿತಾ ತೋಟದ ಒಳಗೆ ಹೋಗಿದ್ದಾರೆ. ಈ ವೇಳೆ ಇವರನ್ನು ಬೈಕ್‌ನಲ್ಲಿ ಹಿಂಬಾಲಿಸಿದ್ದ ಇಬ್ಬರು ದುಷ್ಕರ್ಮಿಗಳು ಅನಿತಾರ ದ್ವಿಚಕ್ರ ವಾಹನದ ಸಮೀಪ ಬಂದು ನಿಮ್ಮ ವಾಹನದ ಚಕ್ರದ ಗಾಳಿ ಕಡಿಮೆ ಇದೆ, ಮುಳ್ಳು ಚುಚ್ಚಿದೆ ಎಂದು ಅವರ ಗಮನ ಬೇರೆಡೆ ಸೆಳೆದು ಅನಿತಾರ ಕುತ್ತಿಗೆಗೆ ಕೈ ಹಾಕಿ ಸುಮಾರು 2.70 ಲಕ್ಷರೂ. ಮೌಲ್ಯದ 45 ಗ್ರಾಂ ತೂಕದ ಮಾಂಗಲ್ಯ ಸರ ಕಿತ್ತುಕೊಂಡು ಅವರನ್ನು ಕೆಳಕ್ಕೆ ಬೀಳಿಸಿ ಪರಾರಿಯಾಗಿದ್ದಾರೆ. ಈ ಸಂದರ್ಭ ನಮಿತಾ ಕಳ್ಳರನ್ನು ಹಿಂಬಾಲಿಸಿಕೊಂಡು ಹೋದರೂ ಬೈಕ್‌ನಲ್ಲಿ ಅತಿ ವೇಗವಾಗಿ ಹೋಗಿದ್ದರಿಂದ ಅವರ ಸುಳಿವು ಸಿಗಲಿಲ್ಲ. ಅನಿತಾರ ಕತ್ತು ಹಾಗೂ ಕಿವಿಗೆ ಅಲ್ಪ ಪ್ರಮಾಣದಲ್ಲಿ ಗಾಯಗಳಾಗಿದ್ದು, ಈ ಸಂಬಂಧ ಬನ್ನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಾಲಿಬಾಲ್‌ನಲ್ಲಿ ಆದಿಚುಂಚನಗಿರಿ ಕಾಲೇಜು ದ್ವಿತೀಯ



ಹೆಚ್.ಡಿ.ಕೋಟೆ, ಮೇ 7– ಮೈಸೂರು ವಿಶ್ವವಿದ್ಯಾನಿಲಯ ಅಂತರ ವಲಯ ಮಟ್ಟದ ಮಹಿಳಾ ವಾಲಿಬಾಲ್ ಪಂದ್ಯಾವಳಿಯಲ್ಲಿ ಪಟ್ಟಣದ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ದ್ವಿತೀಯ ಸ್ಥಾನ ಪಡೆದಿದ್ದಾರೆ ಎಂದು ಪ್ರಾಂಶುಪಾಲ ಡಾ.ಜೆ.ಎನ್.ವೆಂಕಟೇಶ್ ತಿಳಿಸಿದರು.

ವಿದ್ಯಾರ್ಥಿಗಳನ್ನು ಮೈಸೂರು ಶ್ರೀಆದಿಚುಂಚನಗಿರಿ ಶಾಖಾ ಮಠದ ಪೀಠಾಧ್ಯಕ್ಷ ಶ್ರೀಸೋಮೇಶ್ವರನಾಥ ಸ್ವಾಮೀಜಿ, ಆಡಳಿತಾಧಿಕಾರಿ ಪ್ರೊಫೆಸರ್ ಕೆ.ಪಿ.ಬಸವೇಗೌಡ ಶುಭ ಕೋರಿದ್ದಾರೆ. ಈ ವೇಳೆ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಕಲ್ಲೇಶ್‌ಗೌಡ. ಕ್ರೀಡಾ ಕಾರ್ಯದರ್ಶಿ ಬಿ. ಸಿ.ಮಹೇಂದ್ರ, ಪ್ರಥಮ ದರ್ಜೆ ಸಹಾಯಕ ಬಿ.ಎಸ್. ರಾಜೇಶ್, ಎನ್‌ಎಸ್‌ಎಸ್ ಅಧಿಕಾರಿಗಳಾದ ಹೆಚ್.ಎಸ್.ಸಿದ್ದೇಗೌಡ ಹಾಗೂ ಉಪನ್ಯಾಸಕರು ಹಾಜರಿದ್ದರು. ಇದೇ ಸಂದರ್ಭ ಕ್ರೀಡಾಪಟುಗಳನ್ನು ಸನ್ಮಾನಿಸಲಾಯಿತು.

ಜಾಗೃತಿ, ಜ್ಞಾನದ ದೀಪ ಡಾ.ಅಂಬೇಡ್ಕರ್

ಆದಿಕರ್ನಾಟಕ ಸಮಾಜದ ಮುಖಂಡ ತ್ರಿಶಂಭು

ಸರಗೂರು, ಮೇ 7– ಜಾಗೃತಿ ಮತ್ತು ಜ್ಞಾನದ ದೀಪವಾಗಿ ಈ ದೇಶದ ಅಭಿವೃದ್ಧಿಗೆ ದಾರಿಯಾದವರು ಡಾ.ಬಿ.ಆರ್. ಅಂಬೇಡ್ಕರ್ ಎಂದು ಹೆಗ್ಗನೂರು ಗ್ರಾಮದ ಆದಿಕರ್ನಾಟಕ ಸಮಾಜದ ಮುಖಂಡ ತ್ರಿಶಂಭು ತಿಳಿಸಿದರು.

ಹೆಗ್ಗನೂರು ಗ್ರಾಮದಲ್ಲಿ ಆದಿಕರ್ನಾಟಕ ಸಮಾಜದಿಂದ ನಡೆದ ಡಾ.ಬಿ.ಆರ್. ಅಂಬೇಡ್ಕರ್ ಅವರ 133ನೇ ಜಯಂತಿಯಲ್ಲಿ ಮಾತನಾಡಿದ ಅವರು, ಅಂಬೇಡ್ಕರ್ ಅವರು ಶೋಷಿತ ಸಮುದಾಯಗಳ ಏಳಿಗೆಗಾಗಿ ನಿರಂತರವಾಗಿ ಶ್ರಮಿಸಿ ಚಳುವಳಿಗಳನ್ನು ಮಾಡಿದವರು. ಜಾಗೃತಿ ಮತ್ತು ಜ್ಞಾನದ ದೀಪವಾಗಿ ದೇಶದ ಅಭಿವೃದ್ಧಿಗೆ ದಾರಿಯಾದವರು. ಅಂತಹ ಮಹನೀಯರು ಕೇವಲ ಒಂದು ವರ್ಗಕ್ಕೆ ಸೀಮಿತವಲ್ಲ ಅವರು ದೇಶದ ಆಸ್ತಿ ಎಂದರು.

ಇದೇ ವೇಳೆ ಪಟ್ಟಣದ ಅಂಬೇಡ್ಕರ್ ಭವನದ ಎದುರು ರಥಕ್ಕೆ ವಿಶೇಷ ಪೂಜೆ ಸಲ್ಲಿಸಿ, ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಮೆರವಣಿಗೆಗೆ ಗಣ್ಯರು ಚಾಲನೆ ನೀಡಿದರು.


ಹೆಗ್ಗನೂರು ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರ ಮೆರವಣಿಗೆ ಮಾಡಲಾಯಿತು.

ಗ್ರಾಮದ ಪ್ರಮುಖ ಬೀದಿಗಳಲ್ಲಿ ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಅಂಬೇಡ್ಕರ್ ಕುರಿತ ಹಾಡುಗಳನ್ನು ಹಾಡುವ ಮೂಲಕ ಅಂಬೇಡ್ಕರ್ ಭಾವಚಿತ್ರ ಮೆರವಣಿಗೆ ಮಾಡಲಾಯಿತು. ಇದೇ ವೇಳೆ ದಾರಿಯುದ್ದಕ್ಕೂ ಮಜ್ಜಿಗೆ, ಪಾನಕ ವಿತರಿಸಲಾಯಿತು.

ಈ ಸಂದರ್ಭ ಆದಿಕರ್ನಾಟಕ ಸಮಾಜದ ಮುಖಂಡರಾದ ನಾಗಯ್ಯ, ಶಂಭುಲಿಂಗಯ್ಯ, ಮಾದಯ್ಯ, ನಾಗರಾಜು, ಮಾರಯ್ಯ, ವಿಜಯ್, ದೊಡ್ಡಯ್ಯ, ನಾಗಯ್ಯ, ಗೋಪಾಲಯ್ಯ, ಕೃಷ್ಣಯ್ಯ, ಸೋಮಯ್ಯ, ಚಲುವರಾಜು, ಮಣಿ, ಸಂದರ್, ಗೋಪಾಲಯ್ಯ, ವೆಂಕಟೇಶ್, ಮಹೇಂದ್ರ, ಕಾಳರಾಜು, ಚಿನ್ನಯ್ಯ, ಸುರೇಶ್, ಮಂಜು, ಶಂಕರ್, ಬಾಲಕೃಷ್ಣ ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ಯುವಕ ಸಂಘದವರು ಅಕ್ಕಪಕ್ಕದ ಗ್ರಾಮಸ್ಥರು ಭಾಗಿಯಾಗಿದ್ದರು.

ಶ್ರೀಮುಳ್ಳೂರಮ್ಮನ ಅದ್ಧೂರಿ ಜಾತ್ರಾ ಮಹೋತ್ಸವ

ಸರಗೂರು, ಮೇ 7– ಪಟ್ಟಣದ 11ನೇ ವಾರ್ಡ್ ಬಿಡುಗಲುವಿನಲ್ಲಿ ಶ್ರೀಮುಳ್ಳೂರಮ್ಮನವರ ಜಾತ್ರಾ ಮಹೋತ್ಸವ ಪಡವಲು ವಿರಕ್ತ ಮಠಾಧೀಶ ಮಹದೇವಸ್ವಾಮೀಜಿ ಹಾಗೂ ಭರತೇಶ್ ಗುರೂಜಿ ಸಮ್ಮುಖದಲ್ಲಿ ಮಂಗಳವಾರ ಅದ್ಧೂರಿಯಾಗಿ ನಡೆಯಿತು.

ಜಾತ್ರಾ ಮಹೋತ್ಸವ ಅಂಗವಾಗಿ ದೇವಾಲಯವನ್ನು ಬಣ್ಣ ಬಣ್ಣದ ವಿದ್ಯುತ್ ದೀಪ, ರಂಗೋಲಿ ಹಾಗೂ ತಳಿರು ತೋರಣ ಗಳಿಂದ ಅಲಂಕರಿಸಲಾಗಿತ್ತು. ಸೋಮವಾರ ರಾತ್ರಿಯಿಂದಲೇ ದೇವಾಲಯದಲ್ಲಿ ಗಣಪತಿ ಹೋಮ ಪುಣ್ಯಾಹ, ಕಳಸ ಪ್ರತಿಷ್ಠಾಪನೆ, ದುರ್ಗಾ ಹೋಮ, ಕುಂಕುಮಾರ್ಚನೆ ಸೇರಿದಂತೆ ವಿವಿಧ ಪೂಜಾ ಕೈಂಕರ್ಯಗಳು ನಡೆಯಿತು. ಮಂಗಳವಾರ ಬೆಳಗ್ಗೆ ಬಸವನಿಗೆ ವಿವಿಧ ಧಾರ್ಮಿಕ ಕೈಂಕರ್ಯಗಳನ್ನು ನೆರವೇರಿಸಲಾಯಿತು.

ಇಂದು ಬೆಳಗ್ಗೆ ಕಪಿಲಾ ನದಿಗೆ ತೆರಳಿ ಗಂಗೆ ಪೂಜೆ ನಡೆಸಿ ನೂತನ ರಥವನ್ನು ಲೋಕಾರ್ಪಣೆಗೊಳಿಸಲಾಯಿತು. ಬಳಿಕ ಶ್ರೀಮುಳ್ಳೂರಮ್ಮನವರ ಉತ್ಸವ



ಮೂರ್ತಿಯನ್ನು ರಥದಲ್ಲಿ ಪ್ರತಿಷ್ಠಾಪಿಸಿ ವಿವಿಧ ಹೂಗಳಿಂದ ಅಲಂಕಾರ ಮಾಡಿ ಬಿಡುಗಲು ಗ್ರಾಮದ ಪ್ರಮುಖ ಬೀದಿಗಳಲ್ಲಿ ವಿವಿಧ ಜಾನಪದ ಕಲಾ ತಂಡಗಳೊಂದಿಗೆ ರಥೋತ್ಸವ ನಡೆಸಲಾಯಿತು. ರಥ ದೇವಾಲಯ ತಲುಪಿದ ನಂತರ ದೇವಾಲಯದ ಸುತ್ತ ಉತ್ಸವ ಮೂರ್ತಿಯನ್ನು ಮೆರವಣಿಗೆ ಮಾಡಲಾಯಿತು. ನಂತರ ದೇವಾಲಯದ ಎದುರು ನಡೆದ ಕೊಂಡೋತ್ಸವದಲ್ಲಿ ಹರಕೆ ಹೊತ್ತ ಭಕ್ತರು ಕೆಂಡದ ಮೇಲೆ ನಡೆದು ಹರಕೆ ತೀರಿಸಿದರು. ಅಲ್ಲದೇ ಮಹಿಳೆಯರು ಬಾಯಿಗೆ ಬೀಗ ಹಾಕಿಸಿಕೊಂಡು ಭಕ್ತಿ ಸಮರ್ಪಿಸಿದರು. ಇದೇ ವೇಳೆ ಭಕ್ತರಿಗೆ ಅನ್ನಸಂತರ್ಪಣೆ ಹಮ್ಮಿಕೊಳ್ಳಲಾಗಿತ್ತು ವಿವಿಧೆಡೆಗಳಿಂದ ಆಗಮಿಸಿದ್ದ ಸಾವಿರಾರು ಭಕ್ತರು ದೇವಿ ದರ್ಶನ ಪಡೆದು ಪುನೀತರಾದರು.

ಅಣ್ಣೂರು ಹೊಸಹಳ್ಳಿಯಲ್ಲಿ ಒಂಟಿ ಸಲಗ ದಾಂಧಲೆ

ಬೈಕ್ ಜಖಂ, ಬೆಳೆ ನಾಶ: ಮತ್ತೆ ಕಾಡಿಗಟ್ಟಿದ ಗ್ರಾಮಸ್ಥರು

ಹೆಚ್.ಡಿ.ಕೋಟೆ, ಮೇ 7– ಒಂಟಿ ಸಲಗವೊಂದು ಗ್ರಾಮಕ್ಕೆ ನುಗ್ಗಿ ದಾಂಧಲೆ ನಡೆಸಿರುವ ಘಟನೆ ಮಂಗಳವಾರ ಮುಂಜಾನೆ ನಾಗರಹೊಳೆ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯ ವೀರನ ಹೊಸಹಳ್ಳಿ ಅರಣ್ಯ ವಲಯದ ಅಣ್ಣೂರು ಹೊಸಹಳ್ಳಿ ಗ್ರಾಮದಲ್ಲಿ ನಡೆದಿದೆ.

ವೀರನಹೊಸಹಳ್ಳಿ ವಲಯದಂಚಿನ ಹೊಸಹಳ್ಳಿ ಗೇಟ್ ಬಳಿ ಗ್ರಾಮಕ್ಕೆ ನುಗ್ಗಿದ ಆನೆ ರಾತ್ರಿಯಿಡೀ ಹೊಸಹಳ್ಳಿ ಗ್ರಾಮದ ಸುತ್ತಮುತ್ತಲಿನ ಜಮೀನಿನಲ್ಲಿ ಬೆಳೆದಿರುವ ಫಸಲುಗಳನ್ನು ತಿಂದಿದೆ. ಮುಂಜಾನೆ ಮರಳಿ ಕಾಡಿಗೆ ಹೋಗುವ ವೇಳೆ ಬೆಳಗಾಗಿದ್ದರಿಂದ ಗ್ರಾಮದ ತಾತಯ್ಯ ದೇವಾಲಯದ ಬಳಿ ನಿಂತಿದ್ದ ಒಂಟಿ ಸಲಗವನ್ನು ಗ್ರಾಮದ ಮುಖಂಡ ಷಡಕ್ಷರಿ ನೋಡಿ ಕೂಗಿಕೊಂಡಿದ್ದಾರೆ. ಈ ವೇಳೆ ಸ್ಥಳಕ್ಕಾಗಮಿಸಿದ ಗ್ರಾಮಸ್ಥರು ತಕ್ಷಣ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಕರೆ ಮಾಡಿದ್ದಾರೆ. ಆದರೆ ಅರಣ್ಯಾಧಿಕಾರಿಗಳು ಸ್ಥಳಕ್ಕಾಗಮಿಸುವುದು ತಡವಾಗಿದ್ದರಿಂದ ಗ್ರಾಮಸ್ಥರು





ತಾವೇ ಆನೆಯನ್ನು ಕಾಡಿಗೆ ಅಟ್ಟಲು ಪ್ರಯತ್ನಿಸಿದ್ದಾರೆ. ಈ ವೇಳೆ ಜನರ ಕೂಗಾಟ, ನಾಯಿ ಬೊಗಳುವಿಕೆಯಿಂದ ರೊಚ್ಚಿಗೆದ್ದು ದಿಕ್ಕಾಪಾಲಾಗಿ ಓಡಾಡಿದ ಆನೆ ಮನೆ ಬಳಿ ಸಂಗ್ರಹಿಸಿದ್ದ ಹುಲ್ಲಿನ ಮೆದೆಗಳನ್ನು ಎಳೆದು ಹಾಕಿದೆ. ಅಲ್ಲದೇ ಗ್ರಾಮದ ಪ್ರಭುಸ್ವಾಮಿ ಅವರಿಗೆ ಸೇರಿದ ಬೈಕ್ ಅನ್ನು ಜಖಂಗೊಳಿಸಿದೆ. ಇನ್ನು ಷಡಕ್ಷರಿ ಅವರ ಜಮೀನಿಗೆ ಅಳವಡಿಸಿದ್ದ ಕಲ್ಲು ಕಂಬಗಳು, ಶುಂಠಿ ಸೇರಿದಂತೆ ಹಲವು ಬೆಳೆಯನ್ನು ತುಳಿದು ನಾಶ ಮಾಡಿದೆ. ಆದರೆ ಗ್ರಾಮಸ್ಥರೆಲ್ಲರೂ ಸೇರಿ ಕೊನೆಗೂ ಆನೆಯನ್ನು ಕಾಡಿಗಟ್ಟುವುದರಲ್ಲಿ ಯಶಸ್ವಿಯಾಗಿದ್ದಾರೆ.

ತರಾಟೆ: ಇದೇ ವೇಳೆ ತಡವಾಗಿ ಸ್ಥಳಕ್ಕಾಗಮಿಸಿದ ಎಸಿಎಫ್ ದಯಾನಂದ್, ಆರ್‌ಎಫ್‌ಓ ಅಭಿಷೇಕ್ ಸೇರಿದಂತೆ ಇನ್ನಿತರ ಅರಣ್ಯ ಇಲಾಖೆ ಸಿಬ್ಬಂದಿಯನ್ನು ಗ್ರಾಮಸ್ಥರು ತರಾಟೆ ತೆಗೆದುಕೊಂಡರು.

ಆನೆ ಗ್ರಾಮಕ್ಕೆ ಬಂದು ಎಲ್ಲವನ್ನು ಧ್ವಂಸ ಮಾಡಿದ ಮೇಲೆ ತಡವಾಗಿ ಬರುತ್ತಿದ್ದೀರಾ. ಆನೆ ಹಾವಳಿ ತಡೆಯಲು ಕಾಡಂಚಿನ ಭಾಗದಲ್ಲಿ ನೀವುಗಳು ಅಳವಡಿಸಿರುವ ಸೋಲಾರ್ ತಂತಿಯನ್ನು ಲೆಕ್ಕಿಸದೇ ಆನೆ ಗ್ರಾಮಕ್ಕೆ ನುಗ್ಗಿ ನಾವು ಬೆಳೆದ ಫಸಲು ಸೇರಿದಂತೆ ಆಸ್ತಿಪಾಸ್ತಿ ನಾಶ ಮಾಡುತ್ತಿದೆ. ರೈಲ್ವೆ ಬ್ಯಾರಿಕೇಡ್ ಅಳವಡಿಸುವಂತೆ ಹಲವು ಬಾರಿ ದೂರು ನೀಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಆರೋಪಿಸಿದರು.

ಈ ವೇಳೆ ಎಸಿಎಫ್ ದಯಾನಂದ್ ಮಾತನಾಡಿ, ಗ್ರಾಮದಲ್ಲಿ ಆನೆ ದಾಳಿಯಿಂದ ಆಗಿರುವ ಹಾನಿಯನ್ನು ಪರಿಶೀಲನೆ ನಡೆಸಿ ಸರ್ಕಾರದಿಂದ ಸೂಕ್ತ ಪರಿಹಾರ ಕೊಡಿಸುವ ಭರವಸೆ ನೀಡಿದರು. ಅಲ್ಲದೇ ಕಾಡಂಚಿನ ಭಾಗದ ಗ್ರಾಮಗಳ ರಕ್ಷಣೆಗಾಗಿ ರೈಲ್ವೆ ಬ್ಯಾರಿಕೇಡ್ ಅಳವಡಿಸುವ ಭರವಸೆ ನೀಡಿದರು.

ಈ ವೇಳೆ ಗ್ರಾಮಸ್ಥರಾದ ಹೆಚ್.ಕೆ. ಆನಂದ್, ಪಾಪಣ್ಣ, ಪ್ರಭು, ನಾಗರಾಜಪ್ಪ, ಕೆಂಡಣಗಣ್ಣಸ್ವಾಮಿ, ಹೆಚ್.ಎಸ್.ಸ್ವಾಮಿ, ಷಡಕ್ಷರಿ, ಅರಣ್ಯ ಸಿಬ್ಬಂದಿಗಳು ಹಾಜರಿದ್ದರು.

ರಾಜಸ್ಥಾನ್ ವಿರುದ್ಧ ಡೆಲ್ಲಿ ಕ್ಯಾಪಿಟಲ್ಸ್‌ಗೆ ಭರ್ಜರಿ ಜಯ



ದೆಹಲಿ, ಮೇ 7– ಅಭಿಷೇಕ್ ಪೊರೆಲ್ ಹಾಗೂ ಜೇಕ್ ಫ್ರೇಸರ್ ಮ್ಯಾಕ್‌ಗುರ್ಕ್ ಅವರ ಅರ್ಧಶತಕದ ನೆರವಿನಿಂದ ಡೆಲ್ಲಿ ಕ್ಯಾಪಿಟಲ್ಸ್ ರಾಜಸ್ಥಾನ್ ರಾಯಲ್ಸ್ ವಿರುದ್ಧ 20 ರನ್‌ಗಳ ಜಯ ಗಳಿಸಿದೆ.

ಇಲ್ಲಿನ ಅರುಣ್ ಜೇಟ್ಲಿ ಸ್ಟೇಡಿಯಂನಲ್ಲಿ ನಡೆದ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಡೆಲ್ಲಿ ಕ್ಯಾಪಿಟಲ್ಸ್ 20 ಓವರ್ ಗಳಲ್ಲಿ 8 ವಿಕೆಟ್ ನಷ್ಟಕ್ಕೆ 221ರನ್‌ಗಳ ಬೃಹತ್ ಮೊತ್ತ ಪೇರಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಅಭಿಷೇಕ್ ಪೊರೆಲ್ ಹಾಗೂ ಜೇಕ್ ಫ್ರೇಸರ್ ಮ್ಯಾಕ್‌ಗುರ್ಕ್ ಮೊದಲ ವಿಕೆಟ್‌ಗೆ 60 ರನ್ ಜೊತೆಯಾಟವಾಡಿ ಉತ್ತಮ ಆರಂಭ ನೀಡಿದರು. ಆದರೆ 20 ಎಸೆತಗಳಲ್ಲಿ 7 ಬೌಂಡರಿ, 3 ಸಿಕ್ಸರ್ ಒಳಗೊಂಡ ಬಿರುಸಿನ 50 ರನ್ ಗಳಿಸಿ ಜೇಕ್ ಫ್ರೇಸರ್ ಮ್ಯಾಕ್‌ಗುರ್ಕ್ ವಿಕೆಟ್ ಒಪ್ಪಿಸಿದರು. ಅಭಿಷೇಕ್ ಪೊರೆಲ್ 36 ಎಸೆತಗಳಲ್ಲಿ 7 ಬೌಂಡರಿ, 3 ಸಿಕ್ಸರ್ ಒಳಗೊಂಡ 65 ಗಳಿಸಿ ನಿರ್ಗಮಿಸಿದರು. ಉಳಿದಂತೆ ಅಕ್ಷರ್ ಪಟೇಲ್, ನಾಯಕ ರಿಷಬ್ ಪಂತ್ ತಲಾ 15, ಟ್ರಿಸ್ಟನ್ ಸ್ಟಬ್ಸ್ 41, ಗುಲ್ಬದಿನ್ ನಯಿಬ್ 19, ರಸಿಕ್ ಸಲಾಂ 9ರನ್ ಗಳಿಸಿದರು. ರಾಜಸ್ಥಾನ್ ಪರ ಅಶ್ವಿನ್ 3, ಯುಜುವೇಂದ್ರ ಚಹಲ್, ಸಂದೀಪ್ ಶರ್ಮಾ ಹಾಗೂ ಟ್ರೆಂಟ್ ಬೋಲ್ಟ್ ತಲಾ ಒಂದೊಂದು ವಿಕೆಟ್ ಪಡೆದರು.

ಡೆಲ್ಲಿ ನೀಡಿದ ಗೆಲುವಿನ ಗುರಿ ಬೆನ್ನತ್ತಿದ ರಾಜಸ್ಥಾನ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 201 ರನ್ ಗಳಿಸಿ ಸೋಲು ಅನುಭವಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಯಶಸ್ವಿ ಜೈಸ್ವಾಲ್ 4, ಜೋಸ್ ಬಟ್ಲರ್ 19 ರನ್ ಗಳಿಸಿ ಬಹುಬೇಗ ನಿರ್ಗಮಿಸಿದರು. ಬಳಿಕ ಬಂದ ಸಂಜು ಸ್ಯಾಮ್ಸನ್ 46 ಎಸೆತಗಳಲ್ಲಿ 6 ಸಿಕ್ಸರ್, 8 ಬೌಂಡರಿ ಒಳಗೊಂಡ 86 ರನ್ ಗಳಿಸಿ ಔಟಾದರು. ಉಳಿದಂತೆ ರಿಯಾನ್ ಪರಾಗ್ 27, ಶುಭಂ ದುಬೆ 25, ರೋವ್ಮನ್ ಪೊವೆಲ್ 13 ರನ್ ಗಳಿಸಿದರು. ಡೆಲ್ಲಿ ಪರ ಕುಲದೀಪ್ ಯಾದವ್, ಮುಖೇಶ್ ಕುಮಾರ್ ಹಾಗೂ ಖಲೀಲ್ ಅಹಮ್ಮದ್ ತಲಾ 2, ಅಕ್ಷರ್ ಪಟೇಲ್, ರಾಸಿಕ್ ದಾರ್ ಸಲಾಂ ತಲಾ ಒಂದೊಂದು ವಿಕೆಟ್ ಉರುಳಿಸಿದರು. ಕುಲದೀಪ್ ಯಾದವ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ರತ್ನಂ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಕಾಂಗರೂ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಊಡೂ ಈಸ್ ಬ್ಯಾಕ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಮಾರಕಾಸ್ತ್ರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುವ (ಕ)	4 ಪ್ರದರ್ಶನಗಳು
ರಾಜಕಮಲ್	
ಅರಮನೆ–4(ತ)	4 ಪ್ರದರ್ಶನಗಳು
ಸಂಗಂ	
ಉಸಿರೇ ಉಸಿರೇ (ಕ)	4 ಪ್ರದರ್ಶನಗಳು
ಲಿಡೋ	
ಮ್ಯಾಟ್ನಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬಿಲ್ಲ (ತ)	4 ಪ್ರದರ್ಶನಗಳು
ಪ್ರಭಾ	
ಮಾರಣಾಯುದ್ಧಂ (ತೆ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕುಂಗ್ ಫೂ ಪಾಂಡ 4 (3ಡಿ) (ಇಂ): ಬೆ.11.30ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಮ.1.40ಕ್ಕೆ, ಗಿಲ್ಲಿ (ತ): ಸಂ.4ಕ್ಕೆ, ದಿ ಫಾಲ್ ಗಾಯ್ (ಇಂ): ರಾ.7.10ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 2	ಅಂಜಾಮ್ ಪೇದಂ (ಮ): ಬೆ.11ಕ್ಕೆ, O2 (ಕ): ಮ.1.45ಕ್ಕೆ, ಉಸಿರೇ ಉಸಿರೇ (ಕ): ಸಂ.4.05ಕ್ಕೆ, ಆವೇಶಂ (ಮ): ರಾ.7.05ಕ್ಕೆ, ನಡಿಕರ್ (ಮ): ರಾ.10.05ಕ್ಕೆ.
ಸ್ಕ್ರೀನ್ 3	ಕಾಂಗರೂ (ಕ): ಬೆ.11ಕ್ಕೆ, ಬಿಲ್ಲಾ (ತ): ಮ.1.35ಕ್ಕೆ, ಅರಮನೈ 4 (ತ): ಸಂ.4.20ಕ್ಕೆ, ರಾ.10.05ಕ್ಕೆ, ಪ್ರಸನ್ನವದನಂ (ತೆ): ರಾ.7.15ಕ್ಕೆ.
ಸ್ಕ್ರೀನ್ 4	ದಿ ಫಾಲ್ ಗಾಯ್ (ಇಂ): ಬೆ.11.10ಕ್ಕೆ, ಸಂ.4.35ಕ್ಕೆ, ಶಬರಿ (ತೆ): ಮ.1.50ಕ್ಕೆ, ಮಲಯಾಳೀ ಫ್ರಂ ಇಂಡಿಯಾ (ಮ): ರಾ.7.10ಕ್ಕೆ, ಆ ಒಕ್ಕಟಿ ಅಡಕ್ಕು (ತೆ): ರಾ.10.15ಕ್ಕೆ.

ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.25ಕ್ಕೆ, ರಾ.10ಕ್ಕೆ, ಯುವ (ಕ): ಮ.1ಕ್ಕೆ, ಸಂ.4.15ಕ್ಕೆ, O2 (ಕ): ರಾ.7.30ಕ್ಕೆ.
ಸ್ಕ್ರೀನ್ 2	ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ಬೆ.10.45ಕ್ಕೆ, ಸಂ.5.55ಕ್ಕೆ, ಮೈದಾನ್ (ಹಿಂ): ಮ.2.10ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ರಾ.9.20ಕ್ಕೆ.
ಸ್ಕ್ರೀನ್ 3	ಯುವ (ಕ): ಬೆ.10.10ಕ್ಕೆ, O2 (ಕ): ಮ.1.25ಕ್ಕೆ, ಪಾರಿಜಾತ ಪರ್ವಂ (ತೆ): ಮ.3.55ಕ್ಕೆ, ಆವೇಶಂ (ಮ): ಸಂ.6.50ಕ್ಕೆ, ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 4	ಮೈದಾನ್ (ಹಿಂ): ಬೆ.11.25ಕ್ಕೆ, ರಾ.9.50ಕ್ಕೆ, ವರ್ಷಂಗಲ್ಕು ಶೇಷಂ (ಮ): ಮ.3.10ಕ್ಕೆ, ಯುವ (ಕ): ಸಂ.6.35ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ತ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.35ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.10ಕ್ಕೆ, ಮ.12.30ಕ್ಕೆ, ಮ.3.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಯುವ (ಕ): ಬೆ.10.20ಕ್ಕೆ, ಬೆ.11.35ಕ್ಕೆ, ಮ.12.45ಕ್ಕೆ, ಮ.3.20ಕ್ಕೆ, ಸಂ.5.45ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.45ಕ್ಕೆ, ಮ.1.25ಕ್ಕೆ, ಸಂ.6.50ಕ್ಕೆ, ರಾ.9.30ಕ್ಕೆ, ಅವತಾರ ಪುರುಷ 2 (ಕ): ಮ.12.40ಕ್ಕೆ, ಸಂ.6.35ಕ್ಕೆ, ಮ್ಯಾಟ್ನಿ (ಕ): ಮ.1.35ಕ್ಕೆ, ಭರ್ಜರಿ ಗಂಡು (ಕ): ಮ.2.50ಕ್ಕೆ, ದಿ ಫಸ್ಟ್ ಓಮನ್ (ಇಂ): ಸಂ.4ಕ್ಕೆ, ರಾ.9ಕ್ಕೆ, ಕ್ರೂವ್ (ಹಿಂ): ಸಂ.4.05ಕ್ಕೆ, ರಾ.9.15ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಸಂ.4.30ಕ್ಕೆ, ಮಾರಿಗೋಲ್ಡ್ (ಕ): ರಾ.7.25ಕ್ಕೆ, ಆಡುಜೀವಿತಂ (ಮ): ರಾ.10.15ಕ್ಕೆ.

ಗರುಡ ಮಾಲ್,
1ನೇ ಮಹಡಿ, ಮೊ.ನಂ: 9901373210

ಯುವ (ಕ): ಬೆ.9.30ಕ್ಕೆ, ಮ.12.25ಕ್ಕೆ, ಮ.3.40ಕ್ಕೆ, ಸಂ.6.30ಕ್ಕೆ, ರಾ.10.30ಕ್ಕೆ ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.50ಕ್ಕೆ, ಮ.12ಕ್ಕೆ, ಮ.3.20ಕ್ಕೆ, ಸಂ.6.40ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಮ.1.10ಕ್ಕೆ, ಮ.3.50ಕ್ಕೆ, ರಾ.9.45ಕ್ಕೆ, ಅವತಾರ ಪುರುಷ 2 (ಕ): ಮ.2ಕ್ಕೆ, ರಾ.7.35ಕ್ಕೆ, ಮ್ಯಾಟ್ನಿ (ಕ): ಸಂ.4.40ಕ್ಕೆ, ಆಡುಜೀವಿತಂ (ಮ): ಸಂ.6.55ಕ್ಕೆ, ರಾ.10.15ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಶ್ರೀಭ್ರಮರಾಂಬ ಸಮೇತ ಶ್ರೀಮಲ್ಲಿಕಾರ್ಜುನಸ್ವಾಮಿ ದೇವಸ್ಥಾನಕ್ಕೆ ಚಂದ್ರು ಅಧ್ಯಕ್ಷ



ಮಲ್ಲುಂಡಿ, ಮೇ 7– ಇಲ್ಲಿಗೆ ಸಮೀಪದ ಹುರ ಗ್ರಾಮದ ಶ್ರೀಭ್ರಮರಾಂಬ ಸಮೇತ ಶ್ರೀಮಲ್ಲಿಕಾರ್ಜುನಸ್ವಾಮಿ ದೇವಾಲಯದ ಅಧ್ಯಕ್ಷರಾಗಿ ಗ್ರಾಪಂ ಮಾಜಿ ಅಧ್ಯಕ್ಷ ಚಂದ್ರು ಆಯ್ಕೆಯಾಗಿದ್ದಾರೆ.

ಉಪಾಧ್ಯಕ್ಷರಾಗಿ ಪದ್ಮನಾಭ, ಗೌರವಾಧ್ಯಕ್ಷ ರಾಜೇಂದ್ರ ಶರ್ಮಾ, ಕಾರ್ಯದರ್ಶಿ ರುದ್ರಸ್ವಾಮಿ, ಸದಸ್ಯರಾದ ರವಿಕುಮಾರ್, ಚಂದ್ರಶೇಖರ್, ವೀರಭದ್ರಸ್ವಾಮಿ, ಶಿವಕುಮಾರ್, ಚೆನ್ನಪ್ಪಾಜಿ, ಸುರೇಶ, ಜಯಶೀಲಾ, ಮಲ್ಲಿನಾಯಕ, ರಾಜು, ಅರ್ಚಕ ಕಾಶಿರಾಜ್ ಸೇರಿದಂತೆ ಇತರರಿದ್ದರು.

ಕೆ.ಎನ್.ಸುರೇಶ್ ನಿಧನ




ಹುಣಸೂರು, ಮೇ 7– ತಾಲೂಕಿನ ನೇರಳಕುಪ್ಪೆ ಗ್ರಾಮದ ನಿವಾಸಿ ಹಾಗೂ ಕೆ.ಆರ್.ನಗರ ಉಪ ಅಂಚೆ ವಿಭಾಗದ ಮೇಲ್ವಿಚಾರಕ ಕೆ.ಎನ್.ಸುರೇಶ್ (54) ಮಂಗಳವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿಯನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ಮೃತರ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮುಷ್ಕರ ಕೈಬಿಟ್ಟ 108 ಆಂಬುಲೆನ್ಸ್ ಸಿಬ್ಬಂದಿ

ಸರ್ಕಾರದಿಂದ ವೇತನ ಪಾವತಿ ಬಾಕಿ ಇಲ್ಲ: ದಿನೇಶ್ ಗುಂಡೂರಾವ್





ಬೆಂಗಳೂರು, ಮೇ 7– ತಮ್ಮ ಮುಷ್ಕರದಿಂದ 108 ಆಂಬುಲೆನ್ಸ್ ಸಿಬ್ಬಂದಿ ಹಿಂದೆ ಸರಿದಿದ್ದಾರೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದಾರೆ. ಬೆಂಗಳೂರಿನಲ್ಲಿ ಇಂದು ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಸಚಿವರು, ಆರೋಗ್ಯ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳೊಂದಿಗೆ ಹಾಗೂ ಜಿವಿಕೆ ಇಎಂಆರ್ ಸಂಸ್ಥೆಯವರೊಂದಿಗೆ ಚರ್ಚೆ ನಡೆಸಿದ್ದಾರೆ. ಸರ್ಕಾರದಿಂದ ಯಾವುದೇ ವೇತನವನ್ನು ಬಾಕಿ ಉಳಿಸಿಕೊಂಡಿಲ್ಲ ಎಂದರು. ಸರ್ಕಾರದ ಬಳಿ ಹಣಕಾಸಿನ ಕೊರತೆಯಿಲ್ಲ. 108 ಆಂಬುಲೆನ್ಸ್ ಸಿಬ್ಬಂದಿಗೆ ನೀಡಬೇಕಾದ ವೇತನವನ್ನ ನಿಯಮಾನುಸಾರ ಪಾವತಿಸಲಾಗಿದೆ. 108 ಆಂಬ್ಯುಲೆನ್ಸ್ ಸಿಬ್ಬಂದಿಗಳಿಗೆ ಯೋಜನೆಯನ್ನು ನಿರ್ವಹಿಸುತ್ತಿರುವ ಸಂಸ್ಥೆ ಜಿವಿಕೆ ಇಎಂಆರ್‌ನವರು ವೇತನ ನೀಡಬೇಕು. ಸಂಸ್ಥೆಯವರೊಂದಿಗೆ ಒಡಂಬಡಿಕೆಯ ಪ್ರಕಾರ ಸರ್ಕಾರದಿಂದ ಕೊಡಬೇಕಾದ ಅನುದಾನವನ್ನು ಪಾವತಿಸಲಾಗಿದೆ. ಅನಗತ್ಯವಾಗಿ ವಿಪಕ್ಷಗಳು ಸರ್ಕಾರದ ಮೇಲೆ ಬೊಟ್ಟು ಮಾಡಿ ತೋರಿಸುವುದು ಸರಿಯಲ್ಲ. ಏಜೆನ್ಸಿಯವರಿಂದ ಸಿಬ್ಬಂದಿಗೆ ವೇತನ ಪಾವತಿಯಲ್ಲಿ ವ್ಯತ್ಯಾಸಗಳಾಗಿದ್ದರೆ ಅದನ್ನು ಸರಿಪಡಿಸುವಂತೆ ಸಂಸ್ಥೆಯವರಿಗೆ ತಿಳಿಸಲಾಗಿದೆ. 108 ಸಿಬ್ಬಂದಿಗಳ ಇನ್ನಿತರ ಕೆಲವು ಬೇಡಿಕೆಗಳಿವೆ. ಅದನ್ನು ಚುನಾವಣಾ ನೀತಿ ಸಂಹಿತೆ ಮುಗಿದ ಬಳಿಕ ಚರ್ಚಿಸೋಣ ಎಂದು ಮನವರಿಕೆ ಮಾಡಿಕೊಡಲಾಗಿದೆ ಎಂದು ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಆಂಬುಲೆನ್ಸ್ ಸಿಬ್ಬಂದಿಗಳು ಮುಷ್ಕರ ನಡೆಸುವ ಬಗ್ಗೆ ಮಾಧ್ಯಮಗಳಲ್ಲಿ ವರದಿ ಕೇಳಿಬಂದ ಹಿನ್ನೆಲೆಯಲ್ಲಿ ಸಮಸ್ಯೆ ಬಗ್ಗೆ ಪರಿಶೀಲಿಸುವಂತೆ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಸಚಿವರು ಸೂಚಿಸಿದ್ದರು. ಸಚಿವರ ಸೂಚನೆ ಮೇರೆಗೆ ಆರೋಗ್ಯ ಇಲಾಖೆ ಆಯುಕ್ತರಾದ ರಂದೀಪ್ 108 ಸಿಬ್ಬಂದಿಗಳ ಜೊತೆ ಚರ್ಚೆ ನಡೆಸಿದ್ದು, ಆರೋಗ್ಯ ಇಲಾಖೆಯಿಂದ ಕೊಡಬೇಕಾಗಿರುವ ಯಾವುದೇ ವೇತನ ಬಾಕಿ ಉಳಿಸಿಕೊಂಡಿಲ್ಲ ಎಂಬುದನ್ನ ಮನವರಿಕೆ ಮಾಡಿಕೊಟ್ಟರು. ಸಿಬ್ಬಂದಿಗೆ ವೇತನ ಪಾವತಿ ಮಾಡಬೇಕಾಗಿರುವ ಜಿವಿಕೆ ಇಎಂಆರ್ ಸಂಸ್ಥೆಯಿಂದ ಸಮಸ್ಯೆಗಳಾಗಿದ್ದರೆ, ಅದನ್ನ ಸಂಸ್ಥೆಯವರೊಂದಿಗೆ ಚರ್ಚಿಸಿ ಸರಿಪಡಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ಸರ್ಕಾರದಿಂದ ಅಗತ್ಯ ಸಹಕಾರ ದೊರೆಯಲಿದೆ ಎಂದು ಆಂಬುಲೆನ್ಸ್ ಸಿಬ್ಬಂದಿಗೆ ಸ್ಪಷ್ಟಪಡಿಸಲಾಗಿದೆ. ಈ ಹಿನ್ನೆಲೆಯಲ್ಲಿ 108 ಸಿಬ್ಬಂದಿಗಳು ಮುಷ್ಕರದಿಂದ ಹಿಂದೆ ಸರಿದಿದ್ದಾರೆ.

ಕರ್ನಾಟಕದಲ್ಲಿ ಈ ಬಾರಿ ಸಮೃದ್ಧ ಮುಂಗಾರು



ಬೆಂಗಳೂರು: ಸುಡು ಬೇಸಿಗೆಯಿಂದ ತತ್ತರಿಸಿರುವ ರಾಜ್ಯಕ್ಕೆ ಮುಂಗಾರಿನ ಮುನ್ಸೂಚನೆ ತುಸು ನೆಮ್ಮದಿ ನೀಡುವಂತಿದೆ.

ರಾಜ್ಯದಲ್ಲಿ ಈ ಬಾರಿ ಸಮೃದ್ಧ ನೈಋತ್ಯ ಮುಂಗಾರು ಬರುವ ಮುನ್ಸೂಚನೆ ದೊರೆತಿದೆ. ಇದು ಬರ ಇಲ್ಲದ ವರ್ಷವಾಗಲಿದ್ದು, ರೈತರು ಅತ್ಯುತ್ತಮ ಬೆಳೆ ಬೆಳೆಯುವ ನಿರೀಕ್ಷೆಯಲ್ಲಿದ್ದಾರೆ.

2001 ರಿಂದ 2023 ರವರೆಗೆ ರಾಜ್ಯ 16 ಬರ ವರ್ಷಗಳನ್ನು ಕಂಡಿದೆ. 123 ವರ್ಷಗಳಲ್ಲಿ 2023 ಅತ್ಯಂತ ಭೀಕರ ಬರ ಎದುರಾದ ವರ್ಷವಾಗಿದೆ. 2023 ರಲ್ಲಿ ಅತ್ಯಂತ ಕಡಿಮೆ ಮಳೆಯಾಗಿದ್ದು, 236 ತಾಲೂಕುಗಳ ಪೈಕಿ 223 ತಾಲೂಕುಗಳನ್ನು ಬರ ಪೀಡಿತ ಎಂದು ಘೋಷಿಸಲಾಗಿದೆ. ಇದರ ಜೊತೆಗೆ ಕರ್ನಾಟಕದ ಬಹುತೇಕ ಭಾಗಗಳು ಜನವರಿಯಿಂದ ಏಪ್ರಿಲ್‌ವರೆಗೆ ಮಳೆಯನ್ನೇ ಕಂಡಿಲ್ಲ. ಆದರೆ ಈಗ ಮೇ ತಿಂಗಳಲ್ಲಿ ರಾಜ್ಯದ ಕೆಲವೆಡೆ ಮಳೆಯಾಗಿದೆ.

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ನಿರ್ವಹಣಾ ಕೇಂದ್ರದ ಮಾಜಿ ನಿರ್ದೇಶಕ ಶ್ರೀನಿವಾಸ್ ರೆಡ್ಡಿ ಮಾತನಾಡಿ, ಪ್ರಸಕ್ತ ಮುಂಗಾರಿನಲ್ಲಿ ಐಎಂಡಿ 106% ಹೆಚ್ಚು ಮಳೆಯಾಗುವ ಮುನ್ಸೂಚನೆ ನೀಡಿದೆ. ಇದು ದೇಶಾದ್ಯಂತ ಸಾಮಾನ್ಯಕ್ಕಿಂತ ಹೆಚ್ಚಿನದ್ದಾಗಿದ್ದು, ಕರ್ನಾಟಕಕ್ಕೂ ಅದೇ ಆಗಲಿದೆ ಎಂದು ಹೇಳಿದ್ದಾರೆ.

ಆಗಸ್ಟ್, ಸೆಪ್ಟೆಂಬರ್‌ನಲ್ಲಿ ಉತ್ತಮ ಮಳೆ: ಎಲ್ ನಿನೊ ಪರಿಣಾಮ ಸಮುದ್ರದ ಮೇಲ್ಮೈ ತಾಪಮಾನವನ್ನು ಹೆಚ್ಚಿಸಿದೆ. ಈಗ ಅದು ದುರ್ಬಲವಾಗುತ್ತಿದ್ದು, ಮೇ 15ರ ವೇಳೆಗೆ ಇದು ತಟಸ್ಥವಾಗುವ ನಿರೀಕ್ಷೆ ಇದೆ ಎಂದು ಶ್ರೀನಿವಾಸ್ ರೆಡ್ಡಿ ಹೇಳಿದ್ದಾರೆ. ಕಳೆದ ವರ್ಷದ ಎಲ್ ನಿನೋ ಪರಿಣಾಮದಿಂದಾಗಿ ಕರ್ನಾಟಕವು ಭೀಕರ ಬರಗಾಲಕ್ಕೆ ಸಾಕ್ಷಿಯಾಗಿತ್ತು.

ಈಗ ಎಲ್ ನಿನೋ ಸ್ಥಿತಿ ಚಾಲ್ತಿಯಲ್ಲಿದೆ ಎಂದು ರೆಡ್ಡಿ ಹೇಳಿದ್ದಾರೆ. ಈ ಕಾರಣದಿಂದಾಗಿ, ಸಮುದ್ರದ ಮೇಲ್ಮೈ ತಾಪಮಾನವು ಸಾಮಾನ್ಯಕ್ಕಿಂತ ಕಡಿಮೆ ಇರುತ್ತದೆ. ಇದರಿಂದ ಉತ್ತಮ ಮಳೆಯಾಗುವ ನಿರೀಕ್ಷೆ ಇದೆ. ಎಲ್ ನಿನೋ ಇದ್ದಾಗಲ್ಲೆಲ್ಲಾ, ಆ ವರ್ಷಗಳು ಉತ್ತಮ ಮಳೆಗೆ ಸಾಕ್ಷಿಯಾಯಿತು ಎಂದು ಅವರು ಹೇಳಿದ್ದಾರೆ. ಈ ವರ್ಷ ಆಗಸ್ಟ್ ಮತ್ತು ಸೆಪ್ಟೆಂಬರ್‌ನಲ್ಲಿ ಉತ್ತಮ ಮಳೆಯಾಗಲಿದೆ ಎಂದು ಅವರು ಹೇಳಿದ್ದಾರೆ. ಇದು ರೈತರ ಪರವಾಗಿ ಕೆಲಸ ಮಾಡುವ ನಿರೀಕ್ಷೆ ಇದೆ. ನೈಋತ್ಯ ಮುಂಗಾರು ಅವಧಿಯಲ್ಲಿ ಕರ್ನಾಟಕದಲ್ಲಿ 860 ಮಿ.ಮೀ ಮಳೆಯಾಗುವ ನಿರೀಕ್ಷೆಯಿದೆ ಎಂದು ಕೃಷಿ ವಿಜ್ಞಾನಿ ಮತ್ತು ಕೃಷಿ ವಿಜ್ಞಾನ ವಿಶ್ವವಿದ್ಯಾಲಯದ ಮಾಜಿ ಕುಲಸಚಿವ ಪ್ರೊ. ಎಂ.ಬಿ.ರಾಜೇಗೌಡ ತಿಳಿಸಿದ್ದಾರೆ. ಈ ವರ್ಷ, ಮಳೆ 900 ಮಿಮೀ ತಲುಪಬಹುದು ಎಂದು ಅಂದಾಜಿಸಲಾಗಿದೆ.

ಭಾವಪೂರ್ಣ ಶ್ರದ್ಧಾಂಜಲಿ



ಜನನ 20.01.1960, ಮರಣ 06.05.2024

ಶ್ರೀಮತಿ ಜಯಲಕ್ಷ್ಮೀ ಪ್ರಸಾದ್ ಕುಮಾರ್

ಕಾವೇರಿ ಬಡಾವಣೆ, ಶ್ರೀರಂಗಪಟ್ಟಣ ಟೌನ್

ಇಂತಿ ದುಃಖತಪ್ತರು:

ಮಗ: ಪ್ರೀತಮ್ ಡಿ.ಪಿ, ಮಗಳು: ಪ್ರಿಯಾಂಕ.ಡಿ.ಪಿ

ಅಳಿಯ : ಪುನೀತ್, ಮೊಮ್ಮಕ್ಕಳು: ರಿಷ & ಯಶಸ್

ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ
ಕುದೇರು ಗ್ರಾಮ ಮತ್ತು ಅಂಚೆ, ಸಂತೇಮರಹಳ್ಳಿ ಹೋಬಳಿ, ಚಾಮರಾಜನಗರ - 571 316
ದೂರವಾಣಿ :08226-234848 E-mail: [illegible]

ಸಂಖ್ಯೆ: ಚಾಮುಒ/ಆಡಳಿತ/ಆರೋಗ್ಯವಿಮಾ–ಟೆಂಡರ್/358–01/2024–25 ದಿನಾಂಕ 07.05.2024

ಅಲ್ಪಾವಧಿ ಟೆಂಡರ್ ಪ್ರಕಟಣೆ ಕೆ.ಪಿ.ಪಿ.ಪಿ ಪೋರ್ಟಲ್‌ನ ಮೂಲಕ

ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಒಕ್ಕೂಟದ ಅಧಿಕಾರಿ/ಸಿಬ್ಬಂದಿಗಳಿಗೆ ಮತ್ತು ಅವರ ಅವಲಂಬಿತರಿಗೆ ಐ.ಆರ್.ಡಿ.ಎ ನೊಂದಾಯಿತ ಸರ್ಕಾರಿ ಸ್ವಾಮ್ಯದ ವಿಮಾ ಕಂಪನಿಗಳಿಂದ 2024–2025ನೇ ಸಾಲಿಗೆ ಆರೋಗ್ಯ ವಿಮೆ ಮಾಡಿಸಲು ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಪ್ಲಾಟ್ ಫಾರಂ ಮೂಲಕ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಪ್ಲಾಟ್ ಫಾರಂ ಅಡಿ www.kppp.karnataka.gov.in ಈ ವೆಬ್‌ಸೈಟ್‌ನಲ್ಲಿ ಪಡೆದು ಕೆಳಗಿನ ವಿವರದಂತೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ.

1. ಟೆಂಡರ್ ದಾಸ್ತಾವೇಜು (Access to Tender) ಲಭ್ಯತೆ: ದಿನಾಂಕ 08.05.2024 ರಿಂದ
2. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ/ಸಮಯ: 18.05.2024, ಬೆಳಗ್ಗೆ 11.00 ಗಂಟೆಯವರೆಗೆ.
3. ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ/ಸಮಯ: 20.05.2024, ಬೆಳಗ್ಗೆ 10.00 ಗಂಟೆಗೆ.
4. ಟೆಂಡರ್ ತೆರೆಯುವ ಸ್ಥಳ: ಆಡಳಿತ ವಿಭಾಗ, ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ, ಕುದೇರು ಗ್ರಾಮ ಮತ್ತು ಅಂಚೆ, ಸಂತೇಮರಹಳ್ಳಿ ಹೋಬಳಿ, ಚಾಮರಾಜನಗರ–571316.

ಹೆಚ್ಚಿನ ಮಾಹಿತಿಗಾಗಿ ವ್ಯವಸ್ಥಾಪಕರು (ಆಡಳಿತ)–7760968421 ರವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

VIDYAVARDHAKA SANGHA (R), Mysuru
K. PUTTASWAMY P.U. COLLEGE
Gokulam 3rd Stage, Mysuru-02, Phone: 0821 241 9190

WANTED TEACHERS

Sl.No	Subject	Type of Vacancy	Post Required
1	Physics	Full Time	01 Post
2	Chemistry	Full Time	01 Post
3	Computer Science	Full Time	01 Post
4	Geography	Full Time	01 Post

Eligibility Criteria
- Minimum 55% or higher Class in Master's degree in Respective subject with B.Ed.
- Preference will be given to candidate with one or more years' experience with salary weightage.
- Apply with all Photo copies of SSLC, Degree, Master Degree and B.Ed. Marks cards and Experience Certificate to K Puttaswamy PU College, VVCE Campus, Gokulam 3" stage, Mysore-570002 by hand or by post within 7 days from the date of Notification of the advertisement.

Sd/- Hon.President Sd/- Hon. Secretary

ಸಿ ಎಫ್ ಟಿ ಆರ್ ಐ ವಿದ್ಯಾ ಸಂಸ್ಥೆ, ಮೈಸೂರು
ಟೆಂಡರ್‌ಗಾಗಿ ಆಹ್ವಾನ

ಸಿಎಫ್‌ಟಿಆರ್‌ಐ ವಿದ್ಯಾ ಸಂಸ್ಥೆಯು ಸಿಪಿಡಬ್ಲ್ಯೂಡಿ / ರೈಲ್ವೆ / ಎಂಇಎಸ್ / ಅಂಚೆ ಮತ್ತು ಟೆಲಿಗ್ರಾಫ್ / ರಾಜ್ಯ ಪಿಡಬ್ಲ್ಯೂಡಿ ಮತ್ತು ಅರೆ ಸರ್ಕಾರಿ ಅಥವಾ ಸರ್ಕಾರಿ ಸಂಸ್ಥೆಗಳೊಂದಿಗೆ ಕೆಲಸ ಮಾಡಿದ ನೋಂದಾಯಿತ ಸಂಸ್ಥೆಗಳು ಅಥವಾ ಗುತ್ತಿಗೆದಾರರಿಂದ ಮೈಸೂರಿನ ಸಿಎಫ್‌ಟಿಆರ್‌ಐ ಸಂಸ್ಥೆಯ ಆವರಣದಲ್ಲಿರುವ ಸಿಎಫ್‌ಟಿಆರ್‌ಐ ಶಾಲಾ ಕಟ್ಟಡಕ್ಕೆ ಎ.ಆರ್ (A R) ಪೇಂಟಿಂಗ್ (ಆಂತರಿಕ ಮತ್ತು ಬಾಹ್ಯ) ಕೆಲಸಕ್ಕಾಗಿ ಟೆಂಡರ್ ಅನ್ನು ಆಹ್ವಾನಿಸುತ್ತಿದೆ.

ಟೆಂಡರ್ ದಾಖಲೆಗಳನ್ನು ಸಿಎಫ್‌ಟಿಆರ್‌ಐ ಶಾಲೆಯ ಮುಖ್ಯಸ್ಥರಿಂದ ದಿನಾಂಕ 08.05.2024 ರಿಂದ 17.05.2024 ರವರೆಗೆ ಕಛೇರಿ ಸಮಯದಲ್ಲಿ ಬೆಳಗ್ಗೆ 10.00 ರಿಂದ ಸಂಜೆ 4.00 ಯವರೆಗೆ ಸಂಗ್ರಹಿಸಲಾಗುತ್ತದೆ. ಟೆಂಡರ್ ದಾಖಲೆಗಳನ್ನು ದಿನಾಂಕ: 11.05.2024 ಮತ್ತು 12.05.2024 (ಶನಿವಾರ ಮತ್ತು ಭಾನುವಾರ) ನೀಡಲಾಗುವುದಿಲ್ಲ ಮತ್ತು ಸ್ವೀಕರಿಸಲಾಗುವುದಿಲ್ಲ.

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 17.05.2024 ಸಂಜೆ 5.00 ರವರೆಗೆ
ಟೆಂಡರ್ ತೆರೆಯುವ ದಿನಾಂಕ 20.05.2024 ಬೆಳಗ್ಗೆ 11.00 ಗಂಟೆಗೆ

ಸಹಿ/– ಗೌರವ ಕಾರ್ಯದರ್ಶಿಗಳು ಸಿಎಫ್‌ಟಿಆರ್‌ಐ ವಿದ್ಯಾ ಸಂಸ್ಥೆ, ಮೈಸೂರು

ನಿಧನ



ಇವರು ದಿನಾಂಕ 07-05-2024ನೇ ಮಂಗಳವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ದುಃಖತಪ್ತರು: ತೇಜಸ್ ಸಿಂಹ, ಶೇಖರ್ ಸಿಂಹ, ಯಶೋಧ ಮತ್ತು ಕುಟುಂಬವರ್ಗದವರು.

ಶ್ರೀಮತಿ ಕಮಲಮ್ಮ

ಯದುಗಿರಿ ನರಸಿಂಹಯ್ಯ ಅವರ ಧರ್ಮಪತ್ನಿ

17ನೇ ವರ್ಷದ ಸವಿನೆನಪು | **42ನೇ ವರ್ಷದ ಸವಿನೆನಪು**



ದುಃಖತಪ್ತರು: ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಮತ್ತು ಕುಟುಂಬವರ್ಗದವರು